ಎಸ್.ಬಿ. ಉತ್ನಾಳಕರವರ ಶರಣ ಹಾಗೂ ದಾಸ ಸಾಹಿತ್ಯದ ಅಧ್ಯಯನ

(ಕನ್ನಡ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ನಿಬಂಧ)

2013

: ಸಂಶೋಧಕರು :

ಕು. ಭೀಮವ್ವ ಅಮರಣ್ಣ

ಪ್ರಾಂಶುಪಾಲರು,

ಮೊರಾರ್ಜಿ ದೇಸಾಯಿ ವಸತಿ ಶಾಲೆ,

ಬೆಳಗಲಿ, ತಾ|| ಮುಧೋಳ ಜಿ|| ಬಾಗಲಕೋಟ.

ನೋಂದಣಿ ಸಂಖ್ಯೆ : BRDSHKS-00640

: ಮಾರ್ಗದರ್ಶಕರು :

ಡಾ. ಅಶೋಕ ನರೋಡೆ

ಕೆ.ಎಲ್.ಇ. ಸಂಸ್ಥೆಯ ಪದವಿ ಮಹಾವಿದ್ಯಾಲಯ,

ಮಹಾಲಿಂಗಪುರ ಜಿ|| ಬಾಗಲಕೋಟ.

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ.

ತಾ|| ರಾಯಬಾಗ ಜಿ|| ಬೆಳಗಾವಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ - 583276

ಎಸ್.ಬಿ. ಉತ್ನಾಳರವರ ಶರಣ ಹಾಗೂ ದಾಸ ಸಾಹಿತ್ಯದ ಅಧ್ಯಯನ

(ಕನ್ನಡ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ನಿಬಂಧ)

೨೦೧೩

: ಸಂಶೋಧಕರು :

ಕು. ಭೀಮವ್ವ ಅಮರಣ್ಣ

ಪ್ರಾಂಶುಪಾಲರು,

ಮೊರಾರ್ಜಿ ದೇಸಾಯಿ ವಸತಿ ಶಾಲೆ,

ಬೆಳಗಲಿ. ತಾ॥ ಮುಧೋಳ ಜಿ॥ ಬಾಗಲಕೋಟ.

ನೋಂದಣಿ ಸಂಖ್ಯೆ : BRDSHKS-00640

: ಮಾರ್ಗದರ್ಶಕರು :

ಡಾ. ಅಶೋಕ ನರೋಡೆ

ಕೆ.ಎಲ್.ಇ. ಸಂಸ್ಥೆಯ ಪದವಿ ಮಹಾವಿದ್ಯಾಲಯ,

ಮಹಾಲಿಂಗಪುರ ಜಿ॥ ಬಾಗಲಕೋಟ.

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ.

ತಾ॥ ರಾಯಬಾಗ ಜಿ॥ ಬೆಳಗಾವಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ - ೫೮೩೨೭೬

ಪ್ರಮಾಣ ಪತ್ರ

"ಎಸ್. ಬಿ. ಉತ್ನಾಳರವರ ಶರಣ ಹಾಗೂ ದಾಸ ಸಾಹಿತ್ಯದ ಅಧ್ಯಯನ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಡಾ. ಅಶೋಕ ನರೋಡೆ ಅವರ ಸಮರ್ಥ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುವೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ ಅಥವಾ ಬಿಡಿಯಾಗಿಯಾಗಲಿ ಪ್ರಕಟಿಸಿರುವುದಿಲ್ಲ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೩೦ /೦೭/೨೦೧೩

ಕುಮಾರಿ ಭೀಮವ್ವ ಅಮರಣ್ಣ
ಸಂಶೋಧನಾ ವಿದ್ಯಾರ್ಥಿ
ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ ತಾ॥ ರಾಯಬಾಗ ಜಿ॥ ಬೆಳಗಾವಿ

ದೃಢೀಕರಣ ಪತ್ರ

ಕುಮಾರಿ ಭೀಮವ್ವ ಅಮರಣ್ಣ ಇವರು **"ಎಸ್. ಬಿ. ಉತ್ನಾಳರವರ ಶರಣ ಹಾಗೂ ದಾಸ ಸಾಹಿತ್ಯದ ಅಧ್ಯಯನ"** ಎಂಬ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗೆ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ ಅಥವಾ ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲ. ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ : 30 /೦೭/೨೦೧೩

ಡಾ. ಅಶೋಕ ನರೋಡೆ
ಮಾರ್ಗದರ್ಶಕರು
ಕೆ.ಎಲ್.ಇ. ಸಂಸ್ಥೆಯ
ಪದವಿ ಮಹಾವಿದ್ಯಾಲಯ,
ಮಹಾಲಿಂಗಪುರ ಜಿ॥ ಬಾಗಲಕೋಟ

ಅರಿಕೆ

ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬೆಳಗಲಿ. ತಾ॥ ಮುಧೋಳ ಶಾಲೆಯಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವೆ. ಎಂ.ಫಿಲ್ ಪದವಿ ಪಡೆಯಲು ಪ್ರೇರಣಾಶಕ್ತಿಯಾಗಿ ಮಾರ್ಗದರ್ಶನ ನೀಡಿ ನಿಬಂಧ ರೂಪಿಸಲು ಸಹಕರಿಸಿದ **ಡಾ. ಅಶೋಕ ನರೋಡೆ** ಗುರುಗಳಿಗೆ ತುಂಬು ಹೃದಯದಿಂದ ನಮನಗಳನ್ನು ಸಲ್ಲಿಸುತ್ತೇನೆ.

ಉನ್ನತ ವ್ಯಾಸಂಗಕ್ಕೆ ಪ್ರೇರಣೆ ನೀಡಿ ಏನೇ ಸಮಸ್ಯೆಗಳು ಬಂದರೂ ಎದೆಗುಂದದೆ ಅವುಗಳನ್ನು ಎದುರಿಸಿ ಮುನ್ನಡೆಯಲು ಆತ್ಮಸ್ಥೈರ್ಯವನ್ನು ತುಂಬಿದ ಸಂಶೋಧನಾ ಕೇಂದ್ರದ ಸಂಯೋಜಕರಾದ **ಡಾ. ವ್ಹಿ. ಎಸ್. ಮಾಳಿ** ಗುರುಗಳಿಗೆ ಋಣಿಯಾಗಿದ್ದೇನೆ.

ಎಂ.ಫಿಲ್ ಪದವಿ ಅಧ್ಯಯನ ಮಾಡಲು ಪೂರಕ ಸಾಮಗ್ರಿ ಸಂಗ್ರಹಿಸಲು ಅಥಣಿಗೆ ಹೋಗಿ **ಶ್ರೀ ಎಸ್. ಬಿ. ಉತ್ನಾಳ**ರವರಿಗೆ ಭೇಟಿಯಾದಾಗ ಸೂಕ್ತ ಸಲಹೆ, ಅಧ್ಯಯನ ಸಾಮಗ್ರಿಗಳ ನೆರವು ನೀಡಿದ ಅಧ್ಯಯನ ಮಾಡಲು ಧೈರ್ಯ ನೀಡಿದ ಇವರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಶರಣ ಹಾಗೂ ದಾಸ ಸಾಹಿತ್ಯದ ಹೆಚ್ಚಿನ ಅಧ್ಯಯನ ಸಾಮಗ್ರಿಗಾಗಿ ಶೋಧ ಕಾರ್ಯ ನಿಮಿತ್ಯ ಹೋದಾಗ ಮಹಾಲಿಂಗಪುರ ಕೆ.ಎಲ್.ಇ. ಸಂಸ್ಥೆಯ ಪ್ರಾಚಾರ್ಯರಾದ **ಡಾ. ಬಿ. ಎಂ. ಪಾಟೀಲ** ಗುರುಗಳು ತಮ್ಮ ಸಂಸ್ಥೆಯ ಗ್ರಂಥಾಲಯದಲ್ಲಿ ಅದಕ್ಕೆ ಅವಕಾಶ ಕಲ್ಪಿಸಿಕೊಟ್ಟರು. ನನಗೆ ಆ ಗ್ರಂಥಾಲಯದಲ್ಲಿ ಸೂಕ್ತ ಅಧ್ಯಯನ ಸಾಮಗ್ರಿಗಳನ್ನು ತೆಗೆದುಕೊಳ್ಳಲು **ಡಾ. ಅಶೋಕ ನರೋಡೆ** ಗುರುಗಳು ಕಲಿಯುವವನಿಗೆ ಒಂದು ಸಣ್ಣ ಕಡ್ಡಿಯು ಗುಡ್ಡಾದಂತೆ ಕಾಣಿಸುತ್ತದೆ. ನರೋಡೆ ಸರ್‌ರವರು ಸರಳವಾಗಿ ತಿಳಿಸಿಕೊಟ್ಟು ಸಕಾಲಕ್ಕೆ ಅಧ್ಯಯನ ಪೂರೈಸುವಂತೆ ಮಾಡಿದ್ದಾರೆ. ಇದರ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ.

ನನಗೆ ಶಿಕ್ಷಣ ನೀಡಿ ಉನ್ನತ ವ್ಯಾಸಂಗಕ್ಕೆ ಪ್ರೋತ್ಸಾಹಿಸಿ ನನ್ನ ಬೆಳವಣಿಗೆಯನ್ನು ಕಂಡು ಸಂತಸ ಪಡುವ ಹೆತ್ತ ತಂದೆ **ಅಮರಣ್ಣ,** ತಾಯಿ **ಗೌರಮ್ಮ** ಇರ್ವರ ಚರಣಕ್ಕೆ ಶಿರ ಸಾಷ್ಟಾಂಗ ನಮಸ್ಕಾರಗಳು ಹಾಗೂ ಸಹೋದರರಾದ **ಈರಣ್ಣ** ಮತ್ತು **ಮಲ್ಲಿಕಾರ್ಜುನ** ಶರಣರು ಇವರಿಗೂ ಕೂಡ ನಮಸ್ಕಾರಗಳು.

ನಮ್ಮ ವಿದ್ಯಾ ಸಂಸ್ಥೆಯ **ಕ.ವ.ಶಿ.ಸ.ಸಂ. ಬೆಂಗಳೂರದ ಕಾರ್ಯನಿರ್ವಾಹಕ ನಿರ್ದೇಶಕರಿಗೂ** ಹಾಗೂ **ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಬಾಗಲಕೋಟ** ಅವರಿಗೂ ಮತ್ತು ನಮ್ಮ ಶಾಲೆಯ ಹಿರಿಯ ಶಿಕ್ಷಕರಾದ **ಶ್ರೀ ಎಸ್. ಬಿ. ನಂದೆಪ್ಪಗೋಳ** ಗುರುಗಳು, ನಿಲಯ ಮೇಲ್ವಿಚಾರಕರಾದ **ಶ್ರೀ ಟಿ. ಎಚ್. ಉಪ್ಪಾರ** ಗುರುಗಳು ಹಾಗೂ ನಮ್ಮ ಶಾಲೆಯ ಎಲ್ಲಾ ಗುರುಬಾಂಧವರಿಗೂ ನಾನು ಋಣಿಯಾಗಿದ್ದೇನೆ.

ಸಂಶೋಧನಾ ಕೇಂದ್ರದ ರೂವಾರಿಯಾದ **ಶ್ರೀ ಬಿ. ಆರ್. ದರೂರ** ಅವರನ್ನು ಸ್ಮರಿಸುವೆ. ಸಂಶೋಧನಾ ಕೇಂದ್ರದ ಗುಮಾಸ್ತರಾದ **ಶ್ರೀ ಶಂಕರ ಘಟ್ನಟ್ಟಿ** ಹಾಗೂ ಅಚ್ಚುಕಟ್ಟಾಗಿ ಅಕ್ಷರ ಸಂಯೋಜನೆ ಮಾಡಿದ **ಸಂಭ್ರಮ ಗ್ರಾಫಿಕ್ಸ್** ಅವರಿಗೂ ನನ್ನ ವಂದನೆಗಳು.

ಸ್ಥಳ : ಹಾರೂಗೇರಿ
ದಿನಾಂಕ : 30/೦೭/೨೦೧೩

ಕುಮಾರಿ ಭೀಮವ್ವ ಅಮರಣ್ಣ
ಸಂಶೋಧನಾ ವಿದ್ಯಾರ್ಥಿ
ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ ತಾ॥ ರಾಯಬಾಗ ಜಿ॥ ಬೆಳಗಾವಿ

ಪರಿವಿಡಿ

ಅಧ್ಯಾಯ – ೧ :

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ – ೧ :

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಪ್ರವೇಶ :

೧೨ ನೆಯ ಶತಮಾನದ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿಯೇ ಅಪೂರ್ವವಾದದ್ದು. ಸಾಹಿತ್ಯದ ಪ್ರಕಾರಗಳಲ್ಲಿ ವಚನ ಸಾಹಿತ್ಯವು ಅಪ್ಪಟ ಜನ ಸಾಮಾನ್ಯರ ಭಾಷೆಯಲ್ಲಿಯೇ ರಚನೆಯಾಗಿದೆ. ಭಕ್ತಿ ಭಾವದ ಪರಮಾವಧಿಯಲ್ಲಿ ವಚನಗಳ ಮೂಲಕ ಸಾಮಾಜಿಕ ಸಮಸ್ಯೆಗಳನ್ನು ತಿದ್ದಲು ಹೋರಾಟ ಮಾಡಿದ ಶಿವಶರಣರು ಹಾಗೂ ಮುಂದೆ ಬಂದ ದಾಸರ ಜೀವನ ಚರಿತ್ರೆ ಹಾಗೂ ವಚನ ಕೀರ್ತನೆಗಳ ಮೇಲೆ ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆದಿವೆ.

ಭಕ್ತಿ ಪ್ರಧಾನವಾದ ಹಾಗೂ ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ರಚನೆಯಾದ ವಚನ ಸಾಹಿತ್ಯದ ಬಗ್ಗೆ ಎಷ್ಟು ಅಧ್ಯಯನಗಳಾದರೂ ಕಡಿಮೆಯೇ. ಅದೊಂದು ಸಾಗರದಷ್ಟು ಜ್ಞಾನವುಳ್ಳ ಸಾಹಿತ್ಯ ಪ್ರಕಾರವಾಗಿದೆ. ಕಾಯಕದಲ್ಲಿ ನಿಷ್ಠೆ, ನುಡಿದಂತೆ ನಡೆಯುವ ಛಲ, ಅಪ್ರತೀಮ ಶ್ರದ್ಧೆ, ಅಪಾರ ಭಕ್ತಿ, ಸಾಮಾಜಿಕ ಸೇವೆ ಹಾಗೂ ದಾಸೋಹ ಮುಂತಾದ ಮೌಲ್ಯಗಳನ್ನು ಪ್ರತಿಪಾದಿಸುವುದು ಭಕ್ತಿ ಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಈ ಭಕ್ತಿ ಪಂಥದ ಶಿವಶರಣರು ಪ್ರಾಚೀನ ಕಾಲದ ಕವಿಗಳ ಹಾಗೆ ಯಾವ ರಾಜರ ಆಶ್ರಯ ಬಯಸದೆ, ಯಾವುದೇ ಒಂದು ಸಾಹಿತ್ಯ ಪ್ರಕಾರಕ್ಕೆ ಜೋತು ಬೀಳದೆ ಜನ ಸಾಮಾನ್ಯರು ಕೂಡ ಸಾಹಿತ್ಯ ರಚನೆಯಲ್ಲಿ ತೊಡಗುವಂತೆ ಎಲ್ಲರೆದುರು ತಮ್ಮ ಭಕ್ತಿ ಭಾವನೆಗಳನ್ನು ಹೇಳಿಕೊಳ್ಳುವಂತೆ ಮಾಡಿದರು. ಬಸವಾದಿ ಶರಣರು ಹಾಗೂ ತದನಂತರ ಬಂದ ಕೀರ್ತನಕಾರರು ಸಹ ಇದೇ ಮಾದರಿಯಲ್ಲಿ ಭಕ್ತಿ ಪ್ರಧಾನವಾದ ಕೀರ್ತನೆಗಳನ್ನು ರಚಿಸಿ ಹಾಡಿ ಪ್ರಚುರ ಪಡಿಸಿದರು. ೧೨ ನೇ ಶತಮಾನದ ಪರಂಪರೆಯನ್ನು ೧೫ ನೇ ಶತಮಾನದ ಹರಿದಾಸರು ಮುಂದುವರೆಸಿದರು. ಆ ಪರಂಪರೆಯನ್ನು ಇವತ್ತಿನವರೆಗೂ ಕೆಲ ಶರಣರು, ಕೀರ್ತನಕಾರರು ಮುಂದುವರೆಸಿಕೊಂಡು ಬಂದಿದ್ದಾರೆ ಎನ್ನುವುದಕ್ಕೆ ಶ್ರೀ ಎಸ್. ಬಿ. ಉತ್ನಾಳರವರು ಮಾಡಿರುವ ಶರಣ ಹಾಗೂ ದಾಸ ಸಾಹಿತ್ಯದ ಕೃಷಿಯೇ ಸಾಕ್ಷಿಯಾಗಿದೆ.

೦೮–೦೯–೧೯೪೪ ರಲ್ಲಿ ಕೃಷಿ ಹಾಗೂ ಹೋರಾಟಗಾರರ ಕುಟುಂಬದಲ್ಲಿ ಜನಿಸಿದ ಉತ್ನಾಳರವರು ಗುಮಾಸ್ತರಾಗಿ ಉದ್ಯೋಗಕ್ಕೆ ಸೇರಿದರು. ಇವರು ವೃತ್ತಿಯ

ಜೊತೆಗೆ ವಿದ್ಯಾಭ್ಯಾಸ ಮುಂದುವರೆಸಿ ಎಂ.ಎ. ಪದವಿ ಪಡೆದು ಪ್ರಾಧ್ಯಾಪಕ ವೃತ್ತಿಗೆ ಸೇರಿದರು. ಕೆ.ಎಲ್.ಇ.ಯ ಶ್ರೀ ಎಸ್.ಎಂ.ಎಸ್. ಮಹಾವಿದ್ಯಾಲಯ ಅಥಣಿ ಇಲ್ಲಿ ಪ್ರಾಧ್ಯಾಪಕರಾದರು. ವೃತ್ತಿಯ ಜೊತೆಗೆ ಸಾಹಿತ್ಯ ರಚನೆಯ ಪ್ರವೃತ್ತಿ ಬೆಳೆಸಿಕೊಂಡ ಇವರು ಹತ್ತಾರು ಕೃತಿಗಳನ್ನು ರಚಿಸಿದರು. 'ಅನುಪಮಾ' ಪ್ರಕಾಶನವನ್ನು ಸ್ಥಾಪಿಸಿ ಸಾಹಿತ್ಯ ರಂಗಕ್ಕೆ ಕೊಡುಗೆ ನೀಡಿದ್ದಾರೆ.

ಉತ್ನಾಳರವರು ಶರಣ ಹಾಗೂ ದಾಸರ ಸಾಹಿತ್ಯದ ಕೃತಿಗಳನ್ನಷ್ಟೆ ಅಲ್ಲದೆ ಇತರ ಸಾಹಿತ್ಯದ ಕೃತಿಗಳನ್ನು ರಚಿಸಿದ್ದು ಇದೆ. ಮಹನಿಯರಿಗೆ ಹಲವಾರು ಪ್ರಶಸ್ತಿ, ಸನ್ಮಾನಗಳು ಸಂದಿದ್ದು ಇತ್ತೀಚೆಗೆ ಡಿ. ಲಿಟ್ ಪದವಿಯನ್ನು ಪಡೆದಿದ್ದಾರೆ. ಅವರು ಸ್ಥಾಪಿಸಿದ ಅನುಪಮಾ ಪ್ರಕಾಶನದ ಕುರಿತಾಗಿ ಎಂ.ಫಿಲ್ ಅಧ್ಯಯನವಾಗಿದೆ.

ಅಧ್ಯಯನದ ಉದ್ದೇಶ :

ಗಡಿನಾಡ ಸಾಹಿತಿಗಳಾದ ಉತ್ನಾಳರ ಸಾಹಿತ್ಯಿಕ ಕೃಷಿಯು ಹುಲುಸಾಗಿದೆ. ಗಡಿನಾಡಿನಲ್ಲಿದ್ದುಕೊಂಡು ಕನ್ನಡದ ನಾಡು-ನುಡಿಯ ಹಾಗೂ ಶರಣ ಸಂಪ್ರದಾಯದ ಸಾಹಿತ್ಯವನ್ನು ಭಕ್ತಿಯ ಸಾಧಕರನ್ನು ಹುಡುಕಿ ಅವರ ಕೊಡುಗೆಯನ್ನು ಜನ-ಮನಕ್ಕೆ ತಲುಪುವಂತೆ ಮಾಡಿದ, ಅದರಲ್ಲಿಯೂ ಶರಣ ಹಾಗೂ ದಾಸರ ಭಕ್ತಿಯ ಕುರಿತಾಗಿ ಅಧ್ಯಯನ ಮಾಡುವದು ಈ ಅಧ್ಯಯನದ ಉದ್ದೇಶವಾಗಿದೆ.

ಶರಣ ಹಾಗೂ ದಾಸರ ಕುರಿತು ಬಿಡಿ ಬಿಡಿ ಹಲವು ಲೇಖನಗಳನ್ನು ಉತ್ನಾಳರು ಬರೆದಿದ್ದು ಈ ಬಿಡಿ ಲೇಖನಗಳ ಕುರಿತು ಇಲ್ಲಿಯವರೆಗೆ ಯಾವುದೇ ಅಧ್ಯಯನಗಳು ನಡೆದಿರುವದಿಲ್ಲ. ಅನುಪಮಾ ಪ್ರಕಾಶನದಲ್ಲಿ ಪ್ರಕಟವಾದ ಕೃತಿಗಳಲ್ಲಿ ಇವರ ಕೃತಿಗಳ ಬಗ್ಗೆ ಪರಿಚಯವನ್ನು ಎಂ.ಫಿಲ್. ಅಧ್ಯಯನದಲ್ಲಿ ಹೇಳಲಾಗಿದೆ. ಆದರೆ ಪ್ರತ್ಯೇಕವಾಗಿ ಇವರು ಬರೆದಿರುವ ಶರಣ ಹಾಗೂ ದಾಸರ ಲೇಖನಗಳಲ್ಲಿ ಅವರ ವಿಚಾರಧಾರೆಳೇನು? ಯಾವ ಹಿನ್ನೆಲೆಯಲ್ಲಿ ಅರ್ಥೈಸಿಕೊಂಡಿದ್ದಾರೆ. ಅವರು ತಮ್ಮ ಲೇಖನಗಳ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಅವರ ಕಾಣಿಕೆ ಏನು? ಹೇಗಿದೆ ಎನ್ನುವುದನ್ನು ಅರ್ಥೈಸಿಕೊಳ್ಳುವುದೇ ಇದರ ಉದ್ದೇಶವಾಗಿದೆ.[೧] ಹಿಂದಿನ ಮತ್ತು ಇಂದಿನ ಶರಣ ಶರಣೆಯರ ಹಾಗೂ ದಾಸರ ಜೀವನದ ಸಾಧನೆಗಳನ್ನು ಅವರು ಶ್ರದ್ಧೆಯಿಂದ ಚಿತ್ರಿಸಿದ್ದಾರೆ. "ಶರಣ ಸೌರಭದ ಸುವಾಸನೆ ಮನದಾಳಕ್ಕೆ ಇಳಿಯಿತು."[೨]

---

೧ : ಬಸವರಾಜ ಮಲಶೆಟ್ಟಿ - ಶರಣ ಸೌರಭ. ಪುಟ - ೧೦೦
೨ : ಇಟಗಿ ಈರಣ್ಣ - ಶರಣ ಸೌರಭ. ಪುಟ - ೧೦೦

ಶರಣ ದಾಸರ ಭಕ್ತಿಯನ್ನು ತಲಸ್ಪರ್ಶಿಯಾಗಿ ಅಧ್ಯಯನಿಸಿ ಸತ್ಯ-ನಿತ್ಯ ಸಂಗತಿಗಳನ್ನು ಅವರ ಭಕ್ತಿ ಮಾರ್ಗವನ್ನು ಜೊತೆಗೆ ಶರಣ ಹಾಗೂ ದಾಸರ ಭಕ್ತಿ ಮಾರ್ಗಗಳಲ್ಲಿಯ ಹೋಲಿಕೆ, ವ್ಯತ್ಯಾಸವನ್ನು ತೌಲನಿಕವಾಗಿ ಅಧ್ಯಯನ ಮಾಡುವದು ಈ ಕಿರು ಪ್ರಬಂಧದ ಉದ್ದೇಶವಾಗಿದೆ.

ಅಧ್ಯಯನದ ಸ್ವರೂಪ :

ಈ ಪ್ರಬಂಧವನ್ನು ಸ್ಥೂಲವಾಗಿ ೫ ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ ಕುರಿತು ಚರ್ಚಿಸಲಾಗಿದೆ. ಉತ್ನಾಳರವರ ಶರಣ, ದಾಸ ಭಕ್ತಿಯ ವೈಶಿಷ್ಟ್ಯ ಹಾಗೂ ೧೨ ನೇ ಶತಮಾನದಿಂದ ಇತ್ತೀಚಿನವರೆಗೂ ಹರಿದು ಬಂದ ಪರಂಪರೆಯಲ್ಲಿ ಅವರು ಬರೆದ ಶರಣ ದಾಸರ ಭಕ್ತಿಯ ಶರಣ ಶರಣೆಯರಾದ ವರದಾನಿ ದಾನಮ್ಮ, ರೆಮ್ಮವ್ವೆ ಹಾಗೂ ಆಧುನಿಕ ಶರಣರಾದ ಮಹಾಂತ ಶಿವಯೋಗಿಗಳು, ಅಥಣಿಯ ಮುರುಘೇಂದ್ರ ಶಿವಯೋಗಿಗಳು ಮುಂತಾದವರಲ್ಲಿ ಅವರು ಕಂಡ ಭಕ್ತಿ ಸಾಮಾಜಿಕ ಅರ್ಪಣಾಭಾವನೆಯ ತಿರುಳನ್ನು ಮತ್ತು ಆ ಕೃತಿಗಳಿಂದ ಸಮಾಜಕ್ಕೆ ನೀಡಿದ ಕಾಣಿಕೆಯ ಬಗ್ಗೆ ತಿಳಿಯುವುದೇ ಇದರ ಉದ್ದೇಶವಾಗಿದೆ. ಭಕ್ತಿಯ ಸ್ವರೂಪ, ವಚನ ಸಾಹಿತ್ಯದಲ್ಲಿ ಭಕ್ತಿ ಈ ಭಕ್ತಿಯಲ್ಲಿ ಶಿವಶರಣರ ವಿಭಿನ್ನ ನೆಲೆಗಳು ಎಂಬ ಭಕ್ತಿಯ ಸ್ವರೂಪವನ್ನಲ್ಲದೆ ಭಕ್ತಿ ಎಂದರೇನು? ಅದನ್ನು ಶರಣರು ಹೇಗೆ ಕಂಡರು? ಆ ಭಕ್ತಿಯನ್ನು ಯಾವ ರೀತಿ ಜನರಲ್ಲಿ ತುಂಬಿದರು? ಅದಕ್ಕಾಗಿ ಯಾವ ರೀತಿಯ ಸಾಹಿತ್ಯ ಬಳಸಿಕೊಂಡರು? ಎಂಬುದು ೨ನೆಯ ಅಧ್ಯಾಯದ ವಸ್ತುವಾಗಿದೆ.

೩ ನೇ ಅಧ್ಯಾಯದಲ್ಲಿ ೧೨ ನೇ ಶತಮಾನದ ನಂತರ ಬಂದ ಹರಿದಾಸರು ಕೂಡ ಮೇಲ್ನೋಟಕ್ಕೆ ಶರಣರಂತೆ ಸಾಮಾಜಿಕ ಕಾರ್ಯ ಕೈಗೊಂಡರು ಕೂಡ ಅವರು ದೈವವನ್ನು ಯಾವ ಸ್ವರೂಪದಲ್ಲಿ ಕಂಡರು ಭಕ್ತಿಯನ್ನು ಜನ ಸಾಮಾನ್ಯರ ಮನೆ-ಮನದಲ್ಲಿ ಮೂಡಿಸಲು ಯಾವ ಪ್ರಕಾರದ ಸಾಹಿತ್ಯ ಬೆಳೆಸಿಕೊಂಡರು ಎಂಬುದರ ಜೊತೆಗೆ ಕೀರ್ತನ ಸಾಹಿತ್ಯದ ಸ್ವರೂಪ ಕುರಿತಾಗಿ ೩ ನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ೪ ನೇ ಅಧ್ಯಾಯವು ವಿಶಿಷ್ಟವಾಗಿದೆ. ಸಾಮಾನ್ಯವಾಗಿ ಒಬ್ಬ ಸಾಹಿತಿ ಯಾವುದಾದರೂ ಒಂದು ಮಾರ್ಗವನ್ನು ಅನುಸರಿಸಿ ಕೃತಿಯನ್ನು ರಚಿಸುವದು ಸಾಮಾನ್ಯ. ಆದರೆ ಉತ್ನಾಳರವರು ಶರಣ ಹಾಗೂ ದಾಸರು ಇವರಿಬ್ಬರ ಕುರಿತು ಆಲೋಚಿಸಿದ್ದಾರೆ. ಆದ್ದರಿಂದ ಇವರ ಆಲೋಚನೆಯ ಹಿನ್ನೆಲೆಯಲ್ಲಿ ಶರಣ ಹಾಗೂ ದಾಸ ಸಾಹಿತ್ಯದ ಹೋಲಿಕೆ ವ್ಯತ್ಯಾಸವನ್ನು ಕುರಿತ ತೌಲನಿಕ ಅಧ್ಯಯನ ಪ್ರಸ್ತುತ ಅಧ್ಯಯನ ಹೊಂದಿದೆ. ೫ ನೇ

ಅಧ್ಯಾಯವು ಸಮಾರೋಪವಾಗಿದೆ. ಇಲ್ಲಿಯುವರೆಗೆ ನಾಲ್ಕು ಅಧ್ಯಾಯಗಳಲ್ಲಿ ಕಂಡುಕೊಂಡಿರುವ ಹೊಸ ಅಂಶಗಳನ್ನು ಇದರಲ್ಲಿ ಭಟ್ಟಯಿಳಿಸಿ ಕೊಡಲಾಗಿದೆ. ಇದನ್ನೆ ಮತ್ತೊಂದು ರೀತಿಯಾಗಿ ಹೇಳುವುದೆಂದರೆ ಈ ಕಿರು ಪ್ರಬಂಧದ ಒಟ್ಟು ಫಲಿತಾಂಶವಾಗಿದೆ. ಈ ಪ್ರಬಂಧದ ಅಂತ್ಯದಲ್ಲಿ ಪೂರಕವಾದ 'ಅನುಬಂಧ' ಜೋಡಿಸಲಾಗಿದೆ. ಗ್ರಂಥಋಣ ಅಳವಡಿಸಲಾಗಿದೆ. ಇದು ಈ ಪ್ರಬಂಧದ ಒಟ್ಟು ಸ್ವರೂಪವಾಗಿದೆ.

ಅಧ್ಯಯನದ ವ್ಯಾಪ್ತಿ :

ಶರಣ ಹಾಗೂ ದಾಸ ಭಕ್ತಿಯ ಕುರಿತು ರಚಿತವಾಗಿರುವ ಕನ್ನಡ ಕೃತಿಗಳನ್ನು ಈ ಅಧ್ಯಯನವಲ್ಲಿ ಬಳಸಿಕೊಳ್ಳಲಾಗಿದೆ. ಈ ಅಧ್ಯಯನ ವ್ಯಾಪ್ತಿಯು ೧೨ ನೇ ಶತಮಾನದ ವಚನ ಸಾಹಿತ್ಯದಿಂದ ಹಿಡಿದು ಇಲ್ಲಿಯವರೆಗೆ ಅಂದರೆ ಉತ್ನಾಳರವರು ರಚಿಸಿರುವ ಶರಣ ದಾಸರ ಭಕ್ತಿಯ ಗ್ರಂಥಗಳನ್ನು ಒಳಗೊಂಡಂತೆ ಅಧ್ಯಯನದ ವ್ಯಾಪ್ತಿ ಹೊಂದಿದೆ. ಜೊತೆಗೆ ಹರಿದಾಸರ ಕೀರ್ತನೆಗಳು ಹಾಗೂ ಶರಣ ಭಕ್ತಿಗೆ ಇರುವ ಹೋಲಿಕೆ ವ್ಯತ್ಯಾಸದ ಅಂಶಗಳನ್ನು ಕೂಡ ಒಳಗೊಂಡಿದೆ.

ಉತ್ನಾಳರು ರಚಿಸಿದ ಶರಣ ಸಾಹಿತ್ಯ ಕೃತಿಗಳು :

೧. ಶರಣ ಸೌರಭ
೨. ಅಥಣಿಶ್ರೀ ಮುರುಘೇಂದ್ರ ಶ್ರೀಗಳ ಚರಿತ್ರೆ
೩. ಗುಡ್ಡಾಪೂರ ದಾನಮ್ಮ
೪. ಲಚ್ಯಾಣ ಶ್ರೀ ಸಿದ್ಧಲಿಂಗ ಮಹಾರಾಜರು

ದಾಸ ಸಾಹಿತ್ಯದ ಕೃತಿಗಳು :

೧. ಶರಣ ದಾಸರ ಭಕ್ತಿ
೨. ದಾಸ ಭಕ್ತಿ

ಈ ಕೃತಿಗಳನ್ನೆಲ್ಲ ಕ್ರೋಢೀಕರಿಸಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಶರಣ ಸಾಹಿತ್ಯದ ಕುರಿತಾಗಿ ನಡೆದ ಅಧ್ಯಯನ ಮತ್ತು ದಾಸ ಸಾಹಿತ್ಯದ ಕುರಿತಾಗಿ ನಡೆದ ಅಧ್ಯಯನದ ಪ್ರಮುಖ ಅಂಶಗಳನ್ನು ಗಮನಿಸಿ ಉತ್ನಾಳರ ವಿಶೇಷತೆಗಳನ್ನು ಇದರಲ್ಲಿ ಪರಿಚಯಿಸಲಾಗಿದೆ.

ಸಮಾರೋಪ :

ಪ್ರಸ್ತುತ ನಿಬಂಧದಲ್ಲಿ ಪ್ರೊ. ಎಸ್. ಬಿ ಉತ್ನಾಳ ಅವರ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯದ ಭಕ್ತಿಯ ನೆಲೆಗಳನ್ನು ಶೋಧಿಸಲಾಗುವದು. ಶ್ರೀಯುತರ ಶರಣ ದಾಸರ ಭಕ್ತಿ, ಶರಣ ಸೌರಭ, ಗುಡ್ಡಾಪುರದ ದಾನಮ್ಮ, ಲಚ್ಯಾಣದ ಶಿವಯೋಗಿಗಳು, ಅಥಣಿ ಮುರುಘೇಂದ್ರ ಶಿವಯೋಗಿಗಳು ಮುಂತಾದ ಕೃತಿಗಳನ್ನು ಆಕರ ಸಾಮಗ್ರಿಗಳನ್ನಾಗಿ ಬಳಸಿಕೊಂಡು ಪ್ರಸ್ತುತ ಪ್ರಬಂಧ ರೂಪಿಸಲಾಗುವದು. ಶರಣ ಹಾಗೂ ದಾಸ ಸಾಹಿತ್ಯದ ಕುರಿತಾಗಿ ಪ್ರೊ. ಎಸ್. ಬಿ. ಉತ್ನಾಳರವರು ಕೈಗೊಂಡಿರುವ ಅಧ್ಯಯನವನ್ನು ಪ್ರಸ್ತುತ ಪ್ರಬಂಧದಲ್ಲಿ ಕಟ್ಟಿಕೊಡಲಾಗುವುದು.

~ ~ ~ ~ ~

ಅಧ್ಯಾಯ – ೨ :

ಶರಣರ ಭಕ್ತಿ

ಅಧ್ಯಾಯ – ೨ :

ಶರಣರ ಭಕ್ತಿ

ಭಕ್ತಿ :

ಭಕ್ತಿ ಎಂದರೆ ಭಕ್ತನು ಗುರುವಿಗೆ ಲಿಂಗಕ್ಕೆ ಮತ್ತು ಜಂಗಮಕ್ಕೆ ತೋರಿಸುವ ವ್ರತ ವಿಶ್ವಾಸ ಮತ್ತು ಗೌರವವಾಗಿದೆ. ಗುರುವು ಶಿಷ್ಯನಿಗೆ ಇಷ್ಟಲಿಂಗ ದೀಕ್ಷೆಯನ್ನು ಮಾಡಿ, ವೀರಶೈವ ಧಮಳದ ಆಚಾರಗಳನ್ನು ಬೋಧಿಸಿ ಶಿಷ್ಯನು ಆಧ್ಯಾತ್ಮಿಕ ಪಥದಲ್ಲಿ ಸುಗುಮತೆ ಅವನಿಗೆ ಮಾರ್ಗದರ್ಶನ ನೀಡುವುದರಿಂದ ಅವನು ಗುರುವಿಗೆ ಕೃತಜ್ಞತೆಯನ್ನು ತೋರಿಸುವುದು ತನ್ನ ಭಕ್ತಿಯ ಮೂಲಕವೇ ಆಗಿದ್ದು, ಲಿಂಗವು ಪರಶಿವನ ಪ್ರತೀಕವಾಗಿರುವುದರಿಂದ ಲಿಂಗಕ್ಕೆ ಭಕ್ತಿ ತೋರುವುದೆಂದರೆ ಪರಶಿವನಿಗೆ ಭಕ್ತಿ ತೋರಿಸಿದಂತೆ. ಪರಶಿವನು ನಮ್ಮನ್ನು ಸೃಷ್ಠಿಸಿ ನಮ್ಮ ಅನುಕೂಲಕ್ಕಾಗಿ ವಿಶ್ವವನ್ನು ಸೃಷ್ಠಿಸಿರುವದರಿಂದ ನಾವು ಪರಶಿವನಿಗೆ ಕೃತಜ್ಞರಾಗಿರಬೇಕು. ಭಕ್ತಿಯ ಮೂಲಕವೆ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಬೇಕು.

"ವಚನಕಾರರು "ಭಕ್ತಿ" ಎಂಬ ಪದಕ್ಕೆ ತುಂಬ ವಿಶಿಷ್ಟವಾದ ಅರ್ಥವನ್ನು ತುಂಬಿದ್ದಾರೆ. ಭಕ್ತಿಯು ಭಕ್ತನ ಧೋರಣೆ ಅಷ್ಟೆ ಅಲ್ಲ ಅದು ಒಂದು ರೀತಿಯ ಶಕ್ತಿಯಾಗಿದೆ. ಪರಶಿವನ ಕಲಾ ಶಕ್ತಿಯಿಂದ ಸಮಸ್ತ ವಿಶ್ವದ ರಚನೆಯಾಗಿದೆ. ಕಲಾಸಕ್ತಿ ಮತ್ತು ಭಕ್ತಿ ಶಕ್ತಿಗಳು ವಿಭಿನ್ನವಾಗಿ ಕಂಡರೂ ಅವು ಬೇರೆ ಬೇರೆಯಲ್ಲ. ಕಲಾ ಶಕ್ತಿಗಳನ್ನು ಆಧ್ಯಾತ್ಮಿಕವಾಗಿ ಪರಿವರ್ತಿಸಿಕೊಂಡಾಗ ಅವೇ ಭಕ್ತಿ ಶಕ್ತಿಗಳಾಗುತ್ತವೆ."[೩]

ಭಕ್ತಿಯೆಂಬುದನ್ನು ಹೇಗೆ ಸಾಧಿಸಬೇಕು. ಅದು ಹೇಗಿರಬೇಕು ಎಂಬುದನ್ನು ಈ ವಚನದಲ್ಲಿ ಹೇಳಿದ್ದಾರೆ. ಬಸವಣ್ಣ

"ಭಕ್ತಿಯೆಂಬ ನಿಧಾನವ ಸಾಧಿಸುವಡೆ
ಶಿವ ಪ್ರೇಮವೆಂಬ ಅಂಜನವನೆಚ್ಚಿಕೊಂಬುದು
ಭಕ್ತನಾದವಂಗ ಇದೇ ಪಥವಾಗಿರಬೇಕು
ನಮ್ಮ ಕೂಡಲಸಂಗನ ಶರಣರ ಅನುಭಾವ ಗಜವೈದ್ಯ"[೪]

---

೩ : ಬಸವಪಥ (ಪುಟ ೭೩) ಮೇ ೨೦೧೩ ಡಾ. ಅಶೋಕ ನರೋಡೆ – ವಚನ ಸಾಹಿತ್ಯದಲ್ಲಿ ಭಕ್ತಿಯ ವಿಭಿನ್ನ ನೆಲೆಗಳು

೪ : ಬಸವಪಥ (ಪುಟ ೭೫) ಮೇ ೨೦೧೩ ಡಾ. ಅಶೋಕ ನರೋಡೆ – ವಚನ ಸಾಹಿತ್ಯದಲ್ಲಿ ಭಕ್ತಿಯ ವಿಭಿನ್ನ ನೆಲೆಗಳು

ಭಕ್ತಿಯೆಂಬುದು ಒಂದು 'ನಿಧಾನ' ಅಂದರೆ ಅದೊಂದು ನಿಧಿ, ಕಾಯ್ದಿಟ್ಟ ನಿಧಿಯದು. ಶಿವಪ್ರೇಮ ಅಂಜನದ ಮೂಲಕ ಭಕ್ತಿಯನ್ನು ಸಿದ್ಧಿಸಿಕೊಳ್ಳಬಹುದು. ಭಕ್ತರಾದವರು ಅನುಭಾವ ಪಥದ ಮೂಲಕವೇ ಶಿವ ಪಥವನ್ನು ಸಾಧಿಸಬೇಕು. ಅದರ ಮೂಲಕ ಭಕ್ತಿಯೆಂಬ ನಿಧಾನವನ್ನು ಸಾಧಿಸಬಹುದೆಂದಿದ್ದಾರೆ. ಭಕ್ತಿಯನ್ನು ಸಾಧಿಸುವ ಪಥವನ್ನಿಲ್ಲಿ ಪರಿಚಯಿಸಲಾಗಿದೆ.

"ಭಕ್ತಿ ಸುಭಾಷಯ ನುಡಿಯ ನುಡಿವೆ, ನುಡಿದಂತೆ ನಡೆವೆ,
ನುಡಿಯೊಳಗೆ ನುಡಿಯ ಪೂರೈಸುವೆ –
ಮೇಲೆ ತೂಗುವ ತ್ರಾಸು ಕಟ್ಟಳೆ ನಮ್ಮ ಕೈಯಲ್ಲಿ;
ಒಂದು ಜವೆ ಕೊರತೆಯಾದರೆ ಎನ್ನನದ್ದಿ ನೀನೆದ್ದು ಹೋಗು,
ಕೂಡಲಸಂಗಮದೇವಾ"[೫]

ನಡೆ ನುಡಿ ಒಂದಾಗಿಸುವುದು ಅಂತರಂಗ ಬಹಿರಂಗ ಪಾರದರ್ಶಕವಾಗಿರುವುದು ಬಹಳ ಮುಖ್ಯವಾದದ್ದು. ನಡೆ–ನುಡಿ ಒಂದಾದಡೆ, ಇದೇ ಜನ್ಮ ಕಡೆ ಎಂದು ನಂಬಿ ನಡೆದವರು ಶಿವಶರಣರು. ಬಸವಣ್ಣನವರು ಸಂಗಮನಾಥನಲ್ಲಿ ಪ್ರಮಾಣ ಮಾಡುತ್ತಿರುವದು ಗಮನಾರ್ಹವಾಗಿದೆ. ನಡೆ ನುಡಿಯ ಬಗ್ಗೆ ಅವರ ಬದ್ಧತೆ, ಬದುಕಿನ ನಿಷ್ಠೆ ಮೌಲ್ಯಗಳಲ್ಲಿ ಅವರಿಗಿರುವ ಶ್ರದ್ಧೆ ವ್ಯಕ್ತವಾಗಿದೆ.

ಅದರಂತೆಯೇ ಉತ್ನಾಳರು "ಶರಣರು ಮೆಟ್ಟಿದ ಧರೆ ಪಾವನವಯ್ಯಾ" ಎಂಬ ಲೇಖನದಲ್ಲಿ ಉಳ್ಳವರು ತಮ್ಮ ಭಕ್ತಿಯನ್ನು ಮಾಡುವುದರ ಮೂಲಕ ತೋರಿಸಿದರೆ, ಶರಣರು ತಮ್ಮನ್ನು ಶಿವನಿಗೆ ಅರ್ಪಿಸಿಕೊಳ್ಳುವುದರ ಮೂಲಕ ತೋರಿಸುತ್ತಾರೆ ಎಂದು ಈ ವಚನದ ಮೂಲಕ ಹೇಳಿದ್ದಾರೆ.[೬]

"ಉಳ್ಳವರು ಶಿವಾಲಯ ಮಾಡುವರು
ನಾನೇನು ಮಾಡಲಿ? ಬಡವನಯ್ಯ..."

ಎಂದು ಬಸವಣ್ಣ ಇಷ್ಟಲಿಂಗಕ್ಕಿಂತ ಜಂಗಮ ಶ್ರೇಷ್ಠವೆಂದು ಹೇಳುವ ಮೂಲಭಾವವಿದೆ.

---

೫ : ಬಸವಪಥ (ಪುಟ ೭೩) ಮೇ ೨೦೧೩ (ಡಾ. ಅಶೋಕ ನರೋಡೆ)
೬ : ಶರಣ ಸೌರಭ (ಪುಟ ೮೭)

ಬ) ಶರಣರ ಭಕ್ತಿ :

ಪ್ರಪಂಚದಲ್ಲಿ ಭಾರತೀಯ ಧಾರ್ಮಿಕ ಸೃಷ್ಠಿಯಲ್ಲಿ ಶರಣ ಭಕ್ತಿ ಮಾರ್ಗ ಸರಳ ಮತ್ತು ಸ್ಪಷ್ಟವಾದದ್ದು. ಕರ್ನಾಟಕದಲ್ಲಿ ಕಾಲಕಾಲಕ್ಕೆ ತಪಸ್ವಿಗಳು, ಯೋಗಿಗಳು, ಶರಣ–ಶರಣೆಯರು, ಸಿದ್ಧ ಪುರುಷರು, ಮುನಿಗಳು, ಮಹಾತ್ಮರು ಜನ್ಮ ಪಡೆಯುತ್ತ ಬಂದಿದ್ದಾರೆ. ಬೇಡಿ ಬಂದ ಭಕ್ತರಿಗೆ ಇಷ್ಟಾರ್ಥ ಮತ್ತು ಜ್ಞಾನ ನೀಡಿ ಮೋಕ್ಷಾರ್ಥಿಗಳನ್ನಾಗಿ ಮಾಡಿದ್ದಾರೆ, ಮಾಡುತ್ತಿದ್ದಾರೆ. ಇದು ಭಕ್ತಿ ಮಾರ್ಗದ ಸುಗ್ಗಿಯ ಕಾಲ.

ಜಗತ್ತಿನ ನಾನಾ ಮೂಲೆಗಳಿಂದ ಕಲ್ಯಾಣಕ್ಕೆ ಆಗಮಿಸಿದ ಶರಣ–ಶರಣೆಯರು ಮಾನವರ ಅಜ್ಞಾನದ ಮೈಲಿಗೆಯನ್ನು ತೊಳೆದು ಅನುಭಾವಿಗಳನ್ನಾಗಿ ಮಾಡಿದ, ಆಡಿದ ಪಾತ್ರ ಹಿರಿದಾಗಿದೆ.

ಶರಣ–ಶರಣೆಯರೆಲ್ಲ ಧಾರ್ಮಿಕ ತಳಹದಿಯ ಮೇಲೆ ಜೀವನ ನಡೆಸಿದವರು. ಆದರೆ ಶರಣರು ರೂಪಿಸಿದ ವೀರಶೈವ ಧರ್ಮ ತತ್ವಗಳ ವಿವೇಚನೆ ಅವರ ವಚನಗಳಲ್ಲಿ ಕಾಣಬಹುದು. ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ, ಕಾಯಕ, ದಾಸೋಹ, ಶಿವಯೋಗ, ಶೀಲ, ವಿರಕ್ತಿ ಇತ್ಯಾದಿ ವಿಚಾರಗಳು ಇದರ ಜೊತೆಗೆ ಪಾರಂಪರಿಕವಾಗಿ ಧರ್ಮದ ಹೆಸರಿನಲ್ಲಿ ನಡೆದು ಬಂದ ಕರ್ಮಕಾಂಡ, ಯಜ್ಞ ಯಾಗಾದಿ, ಜೀವಹಿಂಸೆ, ಅನ್ಯಾಯ, ಶೋಷಣೆ, ಮೂಢನಂಬಿಕೆ, ಡಾಂಭಿಕತೆಯ ವ್ರತಾಚಾರಣೆಗಳನ್ನು ಟೀಕಿಸಿ ಶುದ್ಧವಾದ ವೀರಶೈವ ಧರ್ಮ ತತ್ವಗಳನ್ನು ಅನುಸರಿಸಬೇಕೆಂಬ ಒತ್ತಾಸೆ ವಿಶೇಷವಾಗಿ ಕಂಡುಬರುತ್ತದೆ. ಜಾತಿಗಳೇ ನಿವೇಕೆ ಕೀಳಾದಿರೊ? ಎಂದು ಕೇಳುವ ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಕಾಳವ್ವೆ ಸಮಾಜದಲ್ಲಿರುವ ಜಾತಿ ವ್ಯವಸ್ಥೆಯನ್ನು ಪ್ರಶ್ನಿಸಿದ್ದಾಳೆ.

ಭಕ್ತಿ ಪ್ರಧಾನವಾದ ಶರಣ ಸಾಹಿತ್ಯ ಅಷ್ಟಕ್ಕೆ ಸೀಮಿತವಾಗಿರಲಿಲ್ಲ. ಧಾರ್ಮಿಕ ವಿಚಾರಗಳ ಜೊತೆ ಜೊತೆಗೆ ಶರಣ – ಶರಣೆಯರ ವಚನ ವಿಚಾರಗಳು ಸಮಾಜ ಸುಧಾರಣೆಯನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ನಡೆದ ಇವರ ಗಮನ ಸಾಮಾಜಿಕ ಕಾಳಜಿ ಕಡೆ ಹರಿದದ್ದು ಸಹಜ. ಶರಣರ ಭಕ್ತಿಯ ನಂಬಿಕೆ ವಿಭಿನ್ನವಾಗಿದೆ. ಆ ದೇವನು ನಿರಾಕಾರ, ನಿರ್ಗುಣ, ಸರ್ವಾಂತರ್ಯಾಮಿ. ಆ ದೇವರು ಎಲ್ಲಿಯೂ ಇಲ್ಲ ನಮ್ಮಲ್ಲಿಯೇ ನೆಲೆಸಿದ್ದಾನೆ. ಆತ್ಮವನ್ನು ಅರಿತವನೇ ಶರಣ "ಅರಿದಡೆ ಶರಣ ಮರೆದಡೆ ಮಾನವ" ಎಂದಿದ್ದಾರೆ. ಲಿಂಗ, ಜಂಗಮ, ಪಾದೋದಕ, ಪ್ರಸಾದ. ವಿಭೂತಿಯಲ್ಲಿ ಭಗವಂತನನ್ನು ಕಂಡರು. ಕಾಯಕದಲ್ಲಿಯ ನಿಷ್ಠೆಯೇ ಇವರ ಕೈಲಾಸದ ಮಾರ್ಗ. ನಿಷ್ಠೆಯಿಂದ ಕಾಯಕ ಮಾಡಿದರೆ ಅದೇ ಆನಂದ ಆ ಆನಂದವೇ ಸ್ವರ್ಗ ಎಂದಿದ್ದಾರೆ.

ಸಂಪ್ರದಾಯದಲ್ಲಿ ಜಂಗಮನೆಂದರೆ ಸಾಕ್ಷಾತ್ ಶಿವನ ಪ್ರತಿರೂಪ. ಜಂಗಮರು ಪ್ರಸನ್ನರಾದರೆ ಶಿವ ಪ್ರಸನ್ನನಾಗುತ್ತಾನೆ. ಜಂಗಮನಿಗೆ ನೀಡಿದರೆ ಶಿವನಿಗೆ ನೀಡಿದಂತೆ.

"ಮರಕ್ಕೆ ಬಾಯಿ ಬೇರೆಂದು
ತಳಕ್ಕೆ ನೀರನೆರೆದರೆ ಮೇಲೆ ಪಲ್ಲವಿಸಿತ್ತು ನೋಡಾ!
ಲಿಂಗದ ಬಾಯಿ ಜಂಗಮವೆಂದು
ಪಡಿ ಪದಾರ್ಥವ ನೀಡಿದರೆ ಮುಂದೆ ಸಕಲಾರ್ಥವನೀವನು
ಆ ಜಂಗಮನ ಹರನೆಂದು ಕಂಡು
ನರನೆಂದು ಭಾವಿಸಿದರೆ ನರಕ ತಪ್ಪದು ಕಾಣಾ!
ಕೂಡಲಸಂಗಮದೇವ"[೨]

ಮರಕ್ಕೆ ಆಹಾರ ದೊರೆಯುವದು ಬೇರಿನ ಮೂಲಕ. ಆ ಬೇರು ನೆಲದಡಿಯಲ್ಲಿ ಮರೆಯಾಗಿದ್ದರೂ ತಳಕ್ಕೆ ನೀರರೆದರೆ ಮೇಲೆ ಚಿಗುರಿದ್ದು ಕಾಣಿಸುವುದು. ಜಂಗಮರು ಕೂಡ ಬೇರಿನಂತೆ ಲಿಂಗದ ನಾಲಿಗೆ ಜಂಗಮರಿಗೆ ಆಹಾರವನ್ನು ನೀಡಿದರೆ, ಅದನ್ನು ಶಿವನು ಸ್ವೀಕರಿಸಿ, ನೀಡಿದವನಿಗೆ ಇಷ್ಟಾರ್ಥಗಳನ್ನು ನೀಡುವನು. ಹರನಂತೆ ಕಾಣಿಸುವ ಜಂಗಮನನ್ನು ಕೇವಲ ಮನುಷ್ಯನೆಂದು ಕಿಳುಗಳಿದವನಿಗೆ ನರಕ ತಪ್ಪದು ಎಂದು ಹೇಳಿದ್ದಾರೆ ಶರಣರು.

ಭಕ್ತಿಯ ಸ್ವರೂಪ :

'ಭಕ್ತಿ' ಎನ್ನುವುದು ಮಾನವನ ಆದ್ಯ ಪ್ರವೃತ್ತಿಗಳಲ್ಲಿ ಒಂದು. ಕನ್ನಡ ಮಾತು ಬಳಕೆಗೆ ಬಂದ ಕಾಲದಿಂದಲೇ ಭಕ್ತಿಯ ಅಭಿವ್ಯಕ್ತಿ ಈ ಮಾತಿನಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಆಗಿದ್ದಿರಲೇಬೇಕು. "ಭಕ್ತಿ ಎಂಬುದೇ ಒಂದು ಅತಿಭಾವುಕ ಸ್ಥಿತಿ" ಭಾವುಕತೆ ತೀವ್ರವಾಗಿ ಹೊರಡಿದ್ದಾಗ ಅದು ಹಾಡು ಆಗುತ್ತದೆ ಎನ್ನುವುದು ಬಲ್ಲವರ ಅಭಿಮತವಾಗಿದೆ. ಭಕ್ತಿಯು ಆಧ್ಯಾತ್ಮಿಕ ವಿಷಯವಾಗಿದೆ. ಜನಪದರು ಹೃದಯಂಗಮವಾಗಿ ನಿರ್ಮಲ ಮನಸ್ಸಿನಿಂದ ತಮ್ಮ ದಿನ ನಿತ್ಯದ ಕಾಯಕದಲ್ಲಿ ಭಕ್ತಿಯುಳ್ಳ ಹಾಡಿನ ಮೂಲಕ ಅಭಿವ್ಯಕ್ತ ಪಡಿಸುತ್ತಿದ್ದರು. ಅಂತಹ ಒಂದು ಭಕ್ತಿಪೂರ್ವಕ ಹಾಡು ಇಲ್ಲಿದೆ.

---

೨ : ಜನಸಾಮಾನ್ಯರಿಗೆ ವಚನ ಸಾಹಿತ್ಯ. ಸಂಪುಟ ೫, ಎಚ್. ಎಸ್. ವೆಂಕಟೇಶಮೂರ್ತಿ, ಪು-೨೫

“ನಾರಾಯಣ ನಿನ್ನ ನಾಮದ ಬೀಜವ
ನಾನೆಲ್ಲಿ ಬತ್ತಿ ಬೆಳೆಯಲಿ ನಿನ ನಾಮ
ನಾಲೀಗೆ ಮೇಲೆ ಬೆಳದೇನ”[೮]

ಎಂದು ಜನಪದರು ಹಾಡಿದ್ದಾರೆ. ಭಕ್ತಿಯ ನಾರಾಯಣನ ನಾಮ ಸದಾ ನನ್ನ ನಾಲಗೆ ಮೇಲಿರಲು ಭಗವಂತನಲ್ಲಿ ಅಚಲ ‘ಪ್ರೇಮ’ವು ಭಕ್ತಿ ತತ್ವದ ಪ್ರೇರಕ ಶಕ್ತಿಯಾಗಿದೆ. ಈ ಪ್ರೇಮದಿಂದಲೇ ಅವರು (ಋಷಿಗಳು) ಆರಾಧ್ಯ ದೇವತೆಗಳ ವಿಮಲರೂಪದ ಅಪರೋಕಾನುಭೂತಿಯನ್ನು ಪಡೆದಿದ್ದಾರೆ. ಆನಂದದ ಆವೇಶದಲ್ಲಿ ಮುಕ್ತರಾಗಿ ತಮ್ಮ ಆರಾಧ್ಯ ದೇವತೆಗಳ ‘ನಾಮಸಾಧನೆ’ ಮಾಡುತ್ತಿದ್ದಾರೆ. ತಮ್ಮ ಆರಾಧ್ಯ ದೇವತೆಗಳು ಎಲ್ಲೆಲ್ಲೂ ವ್ಯಾಪ್ತರಾಗಿದ್ದು ತಮ್ಮ ಭಕ್ತರ ಸಂರಕ್ಷಣೆ ಮಾಡುತ್ತಿದ್ದಾರೆ. ಎಂದು ನಂಬಿದಂತಹ ಋಷಿಗಳು ಪ್ರತಿಯೊಂದು ಕ್ಷಣವೂ ತಮ್ಮ ಸುತ್ತಮುತ್ತಲಿನ ಭಗವದ್ವಿ ಭೂತಿಯ ದೈವಿಕ ಸ್ಪರ್ಶವನ್ನು ಅನುಭವಿಸುತ್ತಾ ಪರಮಾನಂದ ಪ್ರವಾಹದಲ್ಲಿ ಮಗ್ನರಾಗಿದ್ದಾರೆ. ಒಬ್ಬ ಋಷಿ ಹಾಡುತ್ತಾನೆ ತನ್ನ ಆರಾಧ್ಯ ದೇವರು ಎಲ್ಲೆಡೆಗೆ ಇದ್ದಾನೆಂದು

“ಸವಿತಾ ಪಶ್ಚಾತ್ತಾತ್ ಸವಿತಾ ಪುರಸ್ತಾತ್
ಸವಿತೋತ್ತರಾತಾತ್ ಸವಿತಾ ಧರಾತ್ತಾತ್
ಸವಿತಾ ನಃ ಸುವತು ಸರ್ವತಾತಿಂ ಸವಿತಾ ನೋ
ರಾಸತಾಂ ದೀರ್ಘಮಾಯುಃ”[೯]

ಸವಿತೃದೇವನು ಹಿಂದೆ ಇದ್ದಾನೆ. ಎದುರಿಗಿದ್ದಾನೆ. ಎಡಕ್ಕಿದ್ದಾನೆ. ಬಲಕ್ಕಿದ್ದಾನೆ. ಅವನು ನಮ್ಮ ಎಲ್ಲ ಆಶಗಳನ್ನು ಪೂರೈಸಲ ದೀರ್ಘ ಆಯುಷ್ಯವನ್ನು ಕೊಡಲಿ ಇದನ್ನೋದಿದ ತಕ್ಷಣ ಪುರಂದರದಾಸರ “ಎಡಕೆ ವಿಠಲ, ಬಲಕೆ ವಿಠ್ಠಲ”[೧೦] ಎಂಬ ಹಾಡು ನೆನಪಾಗುತ್ತದೆ.

ಭಗವಂತ ಭಕ್ತಿ ಪ್ರಿಯನಾಗಿದ್ದಾನೆ ಎನ್ನುವುದಕ್ಕೆ ಬಸವಣ್ಣ ತನ್ನ ಒಂದು ವಚನದಲ್ಲಿ ಹೀಗೆ ಹೇಳಿದ್ದಾನೆ.

---

೮ : ಗರತಿಯ ಹಾಡು – ಹಲಸಂಗಿ ಗೆಳೆಯರು ಪುಟ : ೪೦
೯ : ಭಕ್ತಿ ಸಾಹಿತ್ಯ – ಪುಟ : ೦೭
೧೦ : ಋಗ್ವೇದ – ಶೇಪನವರತ್ನ, ಪುಟ : ೧೩೧

"ನಾದ ಪ್ರಿಯ ಶಿವನೆಂಬರು
ನಾದ ಪ್ರಿಯ ಶಿವನಲ್ಲಯ್ಯ
ವೇದ ಪ್ರಿಯ ಶಿವನೆಂಬರು
ವೇದ ಪ್ರಿಯ ಶಿವನಲ್ಲಯ್ಯ
ನಾದವ ಮಾಡಿದ ರಾವಣಂಗೆ
ಅರೆಯಾಯುಷ್ಯವಾಯಿತು
ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು
ನಾದ ಪ್ರಿಯನೂ ಅಲ್ಲ
ವೇದ ಪ್ರಿಯನೂ ಅಲ್ಲ
ಭಕ್ತಿ ಪ್ರಿಯ ನಮ್ಮ ಕೂಡಲ ಸಂಗಮದೇವ"[೧೧]

ಹಾಗೆಂದು ಭಕ್ತಿಯ ಹಾದಿ ಸುಲಭವಾದುದಲ್ಲ. ಅಡಿಗಡಿಗೆ ಎಡರುಗಳನ್ನು ಎದುರಿಸಬೇಕಾಗುತ್ತದೆ. ಚಡಪಡಿಸಬೇಕಾಗುತ್ತದೆ. ಆ ನೋವು ಎಂಥದ್ದೆಂದು ಅನುಭವಿಸದ ಬಸವಣ್ಣ "ಭಕ್ತಿಯೆಂಬುದ ಮಾಡಬಾರದು, ಅದು ಗರಗಸದಂತ ಹೋಗುತ್ತ, ಕೋಯ್ವುದು ಬರುತ್ತ ಕೋಯ್ವುದು" ಎನ್ನುತ್ತಾನೆ. ಇಷ್ಟು ಪಾಡು ಪಟ್ಟರೂ ಶಿವನು ಒಲಿಯದೆ ಇರುವಾಗ ಭಕ್ತನ ಅಂತರಂಗ ವಿಲವಿಲನೆ ಒದ್ದಾಡುತ್ತದೆ. ತನ್ನನ್ನು ಸ್ವೀಕರಿಸುವಂತೆ ಆರ್ತತೆಯಿಂದ ಶಿವನಿಗೆ ಮೊರೆಯಿಡುತ್ತದೆ.

"ಬಲೆಗೆ ಸಿಕ್ಕಿದ ಮೃಗದಂತೆ ನಾನಯ್ಯ
ಮರಿದಪ್ಪಿದ ಹುಲ್ಲೆಯಂತೆ
ದೆಸೆದೆಸೆಗೆ ಬಾಯ ಬಿಡುತಿರುವನಯ್ಯ
ನಾನಾರ ಸಾರುವೆನಯ್ಯ
ತಾಯಾಗಿ–ತಂದೆಯಾಗಿ ನೀನೇ ಸಕಲ ಬಂಧು ಬಳಗವು ನೀನೆ
ಕೂಡಲ ಸಂಗಮದೇವ"[೧೨]

ಬಲೆಯೊಳಗೆ ಬಿದ್ದ ಜಿಂಕೆ ಚಡಪಡಿಸುವಂತೆ ಭಕ್ತನ ಜೀವ ಚಡಪಡಿಸುತ್ತದೆ. ಬಲೆಯೊಳಗೆ ಮರಿಯನ್ನು ಕಾಣದೆ ಹಂಬಲಿಸುವ ಶಿವನಿಗಾಗಿ ಹಲುಬುತ್ತದೆ. ಅನನ್ಯ ಶರಣ ಭಾವದಿಂದ ತಂದೆ, ತಾಯಿ, ಬಂಧು ಬಳಗ ಎಲ್ಲವೂ ನೀನೆ, ನೀನೆ ಕಾಯಬೇಕೆಂದು ಭಗವಂತನಲ್ಲಿ ಮೊರೆಯಿಡುತ್ತದೆ.

---

೧೧ : **ಬಸವಣ್ಣನವರ ವಚನ ಸಂಪುಟ ೧ – ಸಂ. ಡಾ. ಎಂ. ಎಂ. ಕಲಬುರ್ಗಿ**
೧೨ : **ಭಕ್ತಿ ಸಾಹಿತ್ಯ – ೮೧**

ಭಗವಂತನ ಪ್ರಾಪ್ತಿಗೆ ಜ್ಞಾನ, ವೈರಾಗ್ಯ, ಉಪಾಸನೆ, ತಪಸ್ಸು, ತ್ಯಾಗ ಮುಂತಾದವುಗಳ ಅಗತ್ಯವಿದೆ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಯಾರಲ್ಲಿ ಭಗವತ್ಪ್ರೇಮ ನಿರ್ಮಾಣವಾಯಿತೋ ಅವರು ಯಾರೇ ಇರಲಿ ಧನ್ಯರಾಗುತ್ತಾರೆ. ಆ ಭಕ್ತಿಯ ಮಹಿಮೆ ಹೇಗಿದೆ ಎಂದರೆ ಕರ್ಮಾಚರಣೆ ಗೊತ್ತಿಲ್ಲ, ಅಂಗದಲ್ಲಿ ವೈರಾಗ್ಯವಿಲ್ಲ, ಅಂತರಂಗದಲ್ಲಿ ಜ್ಞಾನವಿಲ್ಲ, ಇಂಥ ಸಾಮಾನ್ಯ ಮನುಷ್ಯ ಭಗವತ್ಪ್ರೇಮ ಉಳ್ಳವನಾಗಿದ್ದರೆ ಜ್ಞಾನ, ವೈರಾಗ್ಯ ಸತ್ಕರ್ಮಗಳು ತಾವಾಗಿಯೇ ಶರಣು ಬರುತ್ತವೆ.

ನಾವು ಭಕ್ತಿ ಎಂಬ ದಿವ್ಯ ಸಂಪನ್ನವನ್ನು ಪಡೆದುಕೊಳ್ಳಬೇಕಲ್ಲವೇ? ಭಕ್ತಿ ಕೇವಲ ಭಕ್ತರಿಗಾಗಿ ಅಲ್ಲ. ಭಗವಂತನೂ ಭಕ್ತಿಗೆ ಮೋಹಿತನಾಗಿದ್ದಾನೆ. ಪರಮಭಕ್ತರಿಗಾಗಿ ಭಗವಂತನಲ್ಲಿ ಪ್ರೇಮ ತುಂಬಿ ತುಳುಕುತ್ತದೆ. ನಾನು ವೈಕುಂಠದಲ್ಲಿಲ್ಲ. ಯೋಗಿಗಳ ಹೃದಯದಲ್ಲಿ, ನನ್ನ ಭಕ್ತರು ಭಕ್ತಿಯಿಂದ ಹಾಡುವಲ್ಲಿ ನಾನಿದ್ದೇನೆ ಎಂದು ಹೇಳಿಲ್ಲವೇ? ಹೀಗೆ ಭಕ್ತರು ಭಗವಂತನಲ್ಲಿ ಆಸಕ್ತರಾಗಿದ್ದರೆ ಭಗವಂತನೂ ಭಕ್ತರಲ್ಲಿ ಆಸಕ್ತನಾಗಿದ್ದಾನೆ.

ಬಹಳಷ್ಟು ಜನ ಮೋಕ್ಷ, ಮುಕ್ತಿಗಳೇ ಜೀವನದ ಗುರಿ, ಧನ್ಯತೆಗೆ ದಾರಿ ಎಂದು ಭಾವಿಸಿದ್ದಾರೆ. ಶಾಸ್ತ್ರ ಪುರಾಣಗಳು ಅದನ್ನೇ ಹೇಳಿವೆ. ಆದರೆ ಮಹಾನ್ ಸಂತರ ಅಭಿಪ್ರಾಯವೇ ಬೇರೆಯಾಗಿದೆ. "ಮುಕ್ತಿಗಿಂತ ಮಿಗಿಲಾದುದು ಭಕ್ತಿ" ಎಂಬುದು ಮಹಾತ್ಮರ ಅಭಿಪ್ರಾಯ ದೇವಾ, ಜೀವನ್ಮುಕ್ತಿ ಎಂದರೆ ದಿವ್ಯಸುಖ ಎಂದು ಭ್ರಮಿಸಿದ್ದ. ಆದರೆ ಅದರಲ್ಲಿ ಭಕ್ತಿಯಲ್ಲಿ ಗಂಧವಿಲ್ಲ. ಅಂಥ ಒಣ ಮುಕ್ತಿ ನನಗೆ ಬೇಡ! ಸಂತ ತುಕಾರಾಮ ಹೇಳುತ್ತಾರೆ – "ಈ ಭಕ್ತಿ ಸುಖ ಸವಿಯಲು ಮರಳಿ ಮರಳಿ ಹುಟ್ಟಿ ಬರಲು ನಾವು ಹೆದರುವದಿಲ್ಲ. ಅದಕ್ಕಾಗಿ ಮೋಕ್ಷ ಸುಖವನ್ನು ಒದ್ದು ಬಿಟ್ಟಿದ್ದೇನೆ" (ತಿರಸ್ಕರಿಸಿದ್ದೇನೆ). ಅದೇ ರೀತಿ ಉದ್ಧವನೂ ಕೂಡ ಮತ್ತೊಂದು ಕಡೆ ಹೀಗೆ ಹೇಳಿದ್ದಾನೆ " ಹಿಂದೆ ಎಷ್ಟೋ ಜನರಿಗೆ ಮುಕ್ತಿಕೊಟ್ಟು ಮೋಸ ಮಾಡಿದ್ದೀಯಾ! ಭಗವಂತಾ ಆ ಮೋಸ ನನ್ನಲ್ಲಿ ನಡೆಯದು. ನನಗೆ ಭಕ್ತಿ ಸುಖವನ್ನೇ ಕೊಡು" ಎಂಥ ಬೇಡಿಕೆ! ಆ ಭಗವತ್ಪ್ರೇಮ ಅರ್ಥಾತ್ ಭಕ್ತಿ ಸುಖ ಎಂಥದ್ದಿರಬೇಕು.

ಭಕ್ತಿ ಸಾಹಿತ್ಯದ ಉಗಮ :

ಕನ್ನಡದಲ್ಲಿ ಭಕ್ತಿ ಸಾಹಿತ್ಯ ಈಗ ತಿಳಿದು ಬರುವಂತೆ ಮೊತ್ತ ಮೊದಲಿಗೆ ಕಾಣಿಸಿಕೊಂಡದ್ದು ೧೨ ನೇ ಶತಮಾನದ ಶಿವಶರಣರ ವಚನ ಸಾಹಿತ್ಯದ ಮೂಲಕ. ಆದರೆ ಅದೇ ಕನ್ನಡ ಭಕ್ತಿ ಸಾಹಿತ್ಯದ ಉಗಮ ಎಂದು ಭಾವಿಸಿಕೊಳ್ಳುವ ಮಾತಿಲ್ಲ. ಭಕ್ತಿ ಎನ್ನುವುದು ಮಾನವನ ಆದ್ಯ ಪ್ರವೃತ್ತಿಗಳಲ್ಲೊಂದು ಎಂದು ಒಪ್ಪಿಕೊಂಡರೆ ಕನ್ನಡದಲ್ಲಿ ಮಾತು ಬಳಕೆಗೆ ಬಂದ ಕಾಲದಿಂದಲೇ ಭಕ್ತಿಯ ಅಭಿವ್ಯಕ್ತಿ ಈ ಮಾತಿನಲ್ಲಿ ಒಂದಲ್ಲ

ಒಂದು ರೀತಿಯಲ್ಲಿ ಆಗಿದ್ದರಲೇಬೇಕು. ಭಕ್ತಿ ಎಂಬುದೇ ಒಂದು ಅಭಿಭಾವುಕ ಸ್ಥಿತಿ ಭಾವುಕತೆ ತೀವ್ರವಾಗಿ ಹೊರ ಹೊಮ್ಮಿದಾಗ ಅದು ಹಾಡು ಆಗುತ್ತದೆ ಎನ್ನುವುದು ಬಲ್ಲವರ ಅಭಿಮತವಾಗಿದೆ. ಅಭಿಜಾತ ಸಾಹಿತ್ಯದ ಮೂಲವನ್ನು ಜನಪದ ಸಾಹಿತ್ಯದಲ್ಲಿ ಕಾಣಬಹುದಾದರೆ ಭಕ್ತಿ ಸಾಹಿತ್ಯದ ಉಗಮವನ್ನು ಜನಪದ ಸಾಹಿತ್ಯದಲ್ಲಿ ಯಾಕೆ ಹುಡುಕಬಾರದು? ಹಾಗೆ ನೋಡಿದರೆ ನಿರಕ್ಷರ ಕುಕ್ಷಿಗಳಾದ, ಮುಗ್ಧರಾದ ಜನಪದರಲ್ಲಿಯೇ ಭಕ್ತಿಯ ಭಾವ ಸಹಜವಾಗಿಯೇ ಅಧಿಕವಾಗಿರುವುದು.

ಜೈನರ ಜನಪದ ಹಾಡುಗಳು ತಮ್ಮ ಬದುಕಿನ ಅರಕೆಗಳನ್ನು, ಕೊರತೆಗಳನ್ನು ತಾತ್ವಿಕ ಚಿಂತನೆಗಳ ಮೂಲಕ ವಿಶ್ಲೇಷಿಸಿ ತಮಗೆ ತಾವೇ ಸಮಾಧಾನವನ್ನು ಹೇಳಿಕೊಳ್ಳಬಹುದಾದ ವೈಚಾರಿಕತೆ ಅವರದಾಗಿರುವುದಿಲ್ಲ ತಮ್ಮಲ್ಲಿ ಸುಖ ದುಃಖಗಳಿಗೂ ಸಾಕ್ಷಿಯಾಗಿ ಸರ್ವಶಕ್ತನಾದ ಭಗವಂತನೊಬ್ಬ ಇದ್ದಾನೆಂದು ಅವನ ಕರುಣೆಯಿಂದಲೇ ಎಲ್ಲವೂ ಒಳಿತಾಗುವುದೆಂಬ ಶ್ರದ್ಧೆ, ಭಕ್ತಿಗಳೇ ಈ ಮುಗ್ಧ ಜನರ ಬದುಕನ್ನು ಮುನ್ನಡೆಸುವ ಸಾಧನವಾಗಿರುತ್ತವೆ ತಮ್ಮ ನಿತ್ಯ ಜೀವನದ ನೋವು ನಲಿವಿನ ಅನುಭವಗಳಿಗೆ ಹಾಡುಗಳಲ್ಲಿ ಅಭಿವ್ಯಕ್ತಿಯನ್ನು ನೀಡಿದ ಹಾಗೆ ಈ ಜನಪದರು ತಮ್ಮ ಭಕ್ತಿಯನ್ನು ಹಾಡುಗಳಲ್ಲಿ ತೋಡಿಕೊಳ್ಳುತ್ತಿದ್ದರು ಎಂಬುದಕ್ಕೆ ಈ

"ಏಳುತಲೆ ನಾನೆದ್ದು ಯಾರ‍್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳೆ। ಭೂಮಿತಾಯಿ
ಎದ್ದೊಂದು ಗಳಿಗೆ ನೆನೆದೇನ ॥"[೧೩]

ಹಳ್ಳಿಯ ಮಣ್ಣಿನ ಮಕ್ಕಳಿಗೆ ಭೂಮಿಯೇ ಜೀವನಾಧರ ಅದರಲ್ಲಿಯೆ ಅವರು ದೇವರನ್ನು ಕಂಡುಕೊಂಡು ತಮ್ಮ ಭಕ್ತಿಯನ್ನು ಸಮರ್ಪಿಸುತ್ತಾರೆ.

ಮುಗ್ಧ ಜನಪದರ ಭಕ್ತಿಯ ತೀವ್ರತೆ ಶಿವಶರಣರ, ಹರಿದಾಸರ ಭಕ್ತಿಯ ತೀವ್ರತೆಗೆ ಕಿಂಚಿತ್ತು ಕಡಿಮೆ ಇಲ್ಲವೆಂದು ತೋರುತ್ತದೆ.

"ಶಿವ ಶಿವ ಎಂದರೆ ಸಿಡಿಲೆಲ್ಲ ಬಯಲಾಗಿ ।
ಕಲ್ಲು ಬಂದೆರಗಿ ಕಡೆಗಾಗಿ । ಎಲೆ ಮನವೆ ।
ಶಿವನೆಂಬ ಶಬುದ ಬಿಡಬ್ಯಾಡ ॥"

ಎಂದು ಹೇಳುವ ಹಳ್ಳಿಗರ ನಿಷ್ಠೆ 'ಸದಾ ಎನ್ನ ನಾಲಿಗೆಯಲ್ಲಿ ಬರಲಿ ರಾಮನಾಮ' ಎಂದು ಹಾಡಿದ ಹರಿದಾಸರ ಭಕ್ತಿಗಿಂತ ಏನು ಕಡಿಮೆ? ಕನ್ನಡದ ಸಾಹಿತ್ಯ ಜನ

---

೧೩ : ಗರತಿಯ ಹಾಡು – ಹಲಸಂಗಿ ಗೆಳೆಯರು, ಪುಟ : ೫೧

ಸಮ್ಮುಖವಾದಾಗ ಹೊರತು, ಕನ್ನಡದಲ್ಲಿ ಭಕ್ತಿ ಸಾಹಿತ್ಯ ಮೂಡಿ ಬರುವುದು ಸಾಧ್ಯವಿರಲಿಲ್ಲ. ಈಗ ತಿಳಿದಿರುವಂತೆ ಕನ್ನಡ ಭಾಷೆಯನ್ನು, ಸಾಹಿತ್ಯವನ್ನು ಜನ ಸಮ್ಮುಖಿಗೊಳಿಸಿದ ಮೊದಲಿಗರು ೧೨ ನೇ ಶತಮಾನದ ಶಿವಶರಣರು ಬಸವಣ್ಣ, ಅಕ್ಕಮಹಾದೇವಿ.

ಅಲ್ಲಮಪ್ರಭು ಮುಂತಾದವರ ನೇತೃತ್ವದಲ್ಲಿ ೧೨ ನೇ ಶತಮಾನದಲ್ಲಿ ವೀರಶೈವ ಎಂದು ಕರೆಯಲಾಗುವ ನೂತನ ಧಾರ್ಮಿಕ ಚಳುವಳಿಯೊಂದು ಹುಟ್ಟಿಕೊಂಡಿತು. ವೈದಿಕ ಪಂಥದಲ್ಲಿ ರೂಡಿ ಮೂಲವಾದ, ಜಟಿಲವಾದ ಕರ್ಮಕಾಂಡವನ್ನು, ವರ್ಣಾಶ್ರಮ ಮೂಲವಾದ ಜಾತಿಯ ತಾರತಮ್ಯವನ್ನು ತಿರಸ್ಕರಿಸಿ, ಹಾರುವ ಮೊದಲು ಅಂತ್ಯಜ ಕಡೆಯಾಗಿ ಸಕಲ ಶಿವಶರಣರೂ ಒಂದೇ ಎಂಬ ಭಕ್ತಿ ಪ್ರಧಾನವೆನ್ನುವ, ಉಚ್ಚ, ನೀಚ ಭೇದಭಾವವಿಲ್ಲದ ಎಲ್ಲ ವರ್ಗದ ಜನರಿಗೂ ಧರ್ಮದ ಬಾಗಿಲು ತೆರೆಯಿತು.

ಜನರು ದಿನ ನಿತ್ಯದ ಬದುಕಿನಲ್ಲಿ ಸರಳ ಸುಲಭವಾಗಿ ಅಳವಡಿಸಿಕೊಳ್ಳಬಹುದಾದ ಸಂಗತಿಗಳೇ ಸರಳವಾಗಿ ನಿರೂಪಿಸಲ್ಪಟ್ಟಿರುತ್ತವೆ. 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ.... ದಯವಿಲ್ಲದ ಧರ್ಮ ಅದಾವುದಯ್ಯ... ದಯವೇ ಬೇಕು ಸಕಲ ಪ್ರಾಣಿಗಳಲ್ಲಿ, ಆಚಾರವೇ ಸ್ವರ್ಗ, ಅನಾಚಾರವೇ ನರಕ' ಅಯ್ಯಾ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ ಈ ಬಗೆಯ ಬದುಕಿನ ಸಣ್ಣ ಸಣ್ಣ ಸಂಗತಿಗಳಲ್ಲಿಯೇ ಧರ್ಮದ, ತತ್ವದ ತಿರುಳು ತುಂಬಿಕೊಂಡಿದೆ ಎಂಬುದನ್ನೇ ಬಸವಣ್ಣ ಬೋಧಿಸಿದನ್ನು ಅವನ ಈ ಬಗೆಯ ಸರಳತೆ ಪ್ರಾಮಾಣಿಕತೆಗಳೇ ಅವನ ವಚನಗಳಿಗೆ ಒಂದು ವಿಶೇಷವಾದ ಆಕರ್ಷಣೆಯನ್ನು ಒದಗಿಸಿದವು ಮಾತ್ರವಲ್ಲ ಸಹಸ್ರ ಜನರನ್ನು ಶಿವಭಕ್ತಿಯ ಹಾದಿಯಲ್ಲಿ ನಡೆಯುವಂತೆ ಪ್ರವೇಶಿಸಿದವು.

ಉತ್ನಾಳರವರು ತಿಳಿಸಿದ ಶರಣ ಶರಣೆಯರಾದ ವರದಾನಿ ದಾನಮ್ಮನ ಪ್ರಯತ್ನವು ಕೂಡ ಅದೇ ಆಗಿದೆ. ಅದೇ ರೀತಿಯಾಗಿ ಈಗಿನ ಅಂದರೆ ೨೦ ನೇ ಶತಮಾನದ ಮಹಾಂತ ಶಿವಯೋಗಿಗಳ ಕಾಯಕವು ಅದೇ ಆಗಿದೆ. ಹಿಂದಿನವರು ವಚನಗಳನ್ನು ಹೇಳುವುದರ ಮೂಲಕ ಸಮಾಜವನ್ನು ತಿದ್ದಲು ಹೊರಟರೆ, ಇಂದಿನ ಶರಣರು ಜನರಲ್ಲಿ ಇದ್ದ ದುಶ್ಚಟಗಳನ್ನು ಬಿಡಿಸಲು ಭಿಕ್ಷೆ ಬೇಡುವ ಕಾರ್ಯ ಕೈಗೊಂಡಿದ್ದು ವಿಶೇಷ. ನಮ್ಮ ಜೋಳಿಗೆಗೆ ಕೆಟ್ಟ ಚಟಗಳನ್ನೆಲ್ಲ ದಾನ ಮಾಡಿ ನಿಮ್ಮ ಬದುಕನ್ನು ಹಸನಾಗಿಸಿಕೊಳ್ಳಿ[೧೪] ಎಂಬ ತತ್ವವನ್ನು ಅಳವಡಿಸಿಕೊಂಡಿದ್ದಾರೆ. ಸಮಾಜದ ಏಳಿಗೆಗಾಗಿ ಹೋರಾಡುವ ಶಿವಶರಣ-ಶರಣೆಯರಲ್ಲಿ ಕೆಲವರು ಹೊಟ್ಟೆ ಪಾಡಿಗಾಗಿ ಸಮಾಜೋದ್ಧಾರ ಮಾಡುವ ಕಾಯಕ ನಡೆಸುತ್ತಾರೆ ಎಂಬುದನ್ನು ಅವರ ದಾಸ, ಶರಣ ವಿಡಂಬನೆಯಲ್ಲಿ ವಿಚಾರ

---

೧೪ : ಶರಣ ಸೌರಭ – ಪ್ರೊ. ಎಸ್. ಬಿ. ಉತ್ನಾಳ, ಪು – ೨೩

ವ್ಯಕ್ತಪಡಿಸಿದ್ದಾರೆ. ಇದು ಇಂದು ಸತ್ಯ ಕೂಡ ಆಗಿದೆ. ಪುರಂದರ ದಾಸರು : ಸತ್ಯವೆಂಬುದೇ ಉಪವಾಸ ಜಪನೇಮವೆಂದು ಸಾರಿದರು.

ಮುಪ್ಪಿನ ಷಡಕ್ಷರಿ ಹಾಡಲ್ಲಿ :

"ಜಪವ ಮಾಡಿ ಫಲವದೇನು
ತಪವ ಮಾಡಿ ಫಲವದೇನು
ಅಪರಿಮಿತ ಶಾಸ್ತ್ರ ಪಠಿಸಿ ಫಲವೇನಯ್ಯ
ತ್ರಿಪುರ ವೈರಿ ತನ್ನತಾನೆ
ಸುಪಥದೊರಿ ಒಲಿಯದನಕ
ಉಪಮೆಯಿಂದ ಮಾಡಿ ತರದಿಗೆ ಕೆಟ್ಟುಪೋಪುದು"[೧೫]

ಅಲ್ಲಮ ಪ್ರಭು :

"ಮಠವೇಕೋ ಪರ್ವತವೇಕೋ ಜನವೇಕೋ ನಿರ್ಜನ
ವೇಕೋ ಚಿತ್ತ ಸಮಾಧಾನವುಳ್ಳ ಶರಣರಿಗೆ
ಮತ್ತೆ ಹೊರಗಣ ಚಿಂತೆ ಧ್ಯಾನ ಮೌನ ಜಪತ
ವವೇಕೋ ತನ್ನ ತಾನರಿವ ಶರಣರಿಗೆ
ಗುಹೇಶ್ವರ"[೧೬]

ದಾಸರ ಬಗ್ಗೆ ಹೀಗೆಂದರು :

"ಗ್ರಾಸಕಿಲ್ಲದೆ ಹೋಗಿ ಪರರ ಮನೆಗಳ ಹೊಕ್ಕು
ದಾಸನೆಂದು ತುಳಸಿ ಮಾಲೆಗಳ ಧರಿಸಿ;
ಬೇಸರಿಲ್ಲದೆ ಅವರ ಕಾಡಿ ಬೇಡಿ ಬಳಸುತ
ಕಾಸುಗಳಿಸುವ ಪುರುಷ ಹರಿದಾಸನೆ?"[೧೭]

ಪುರಂದರ ದಾಸರು "ಒಳಗಡೆ ಲವಲೇಷ ಭಕ್ತಿಯಿಂದ ವಂಚಕರು ಕೆಲ ಪರಮಭಕ್ತರಂತೆ ನಟಿಸುತ್ತಾರೆ. ಮುಗ್ಧ ಜನರನ್ನು ಸುಲಭವಾಗಿ ಮೋಸ ಮಾಡುತ್ತಾರೆ" ಎಂದು ಉದರ ವೈರಾಗಿಗಳ ನೀಚತನವನ್ನು ಬಯಲು ಮಾಡಿದ್ದಾರೆ.

---

೧೫ : ಶರಣ ಸೌರಭ – ಪ್ರೊ. ಎಸ್. ಬಿ. ಉತ್ನಾಳ, ಪು – ೨೫
೧೬ : ಶರಣ ಸೌರಭ – ಪ್ರೊ. ಎಸ್. ಬಿ. ಉತ್ನಾಳ
೧೭ : ಶರಣ ಸೌರಭ – ಪ್ರೊ. ಎಸ್. ಬಿ. ಉತ್ನಾಳ

"ಉದಯ ಕುಲದೊಳು ಗಡಗಡ ನಡಗುತ
ನದಿಯಲ್ಲಿ ಮಿಂದೆನೆಂದು ಹಿಗ್ಗುತ
ಮದ ಮತ್ಸರ ಕ್ರೋಧ ಒಳಗೆ ತುಂಬಿಟ್ಟುಕೊಂಡು"
"ಕಂಚುಗಾರನ ಬಿಡಾರದಿಂದದಿ
ಕಂಚು ಹಿತ್ತಾಳೆ ಪ್ರತಿಮೆಗಳ ನಾಡಿ
ಮಿಂಚಬೇಕೆಂದು ಜ್ಯೋತಿಗಳನ್ನು ಹಚ್ಚಿ
ಕರದಲಿ ಜಪಮಣಿ ಬಾಯಲಿ ಮಂತ್ರವ
ಅರಿವೆ ಮುಸುಕು ಮೋರೆಗೆ ಹಾಕಿ
ಪರಸತಿಯರ ಗುಣ ಮನದಲಿ ಸ್ಮರಿಸುತ"[೧೮]

ಎಂದು ಡಾಂಭಿಕ ಭಕ್ತರನ್ನು ಟೀಕಿಸಿದ್ದಾರೆ.

ಭಕ್ತಿಯ ಹುಚ್ಚು ಹಿಡಿದಾಗ ಶಿವನ ಮೆಚ್ಚು ; ಹುಚ್ಚು ಹಿಡಿಯಿತು ಎನಗೆ ಅಚ್ಚುತನ ಧ್ಯಾನವೆಂಬೋ.... ಎನ್ನುವ ಪುರಂದರ ದಾಸರ ವಾಣಿಯಿಂದ ಕನ್ನಡ ಸಾರಸತ್ವ ಪ್ರಪಂಚದಲ್ಲಿ ದಾಸರದು ೩ ನೇ ಪ್ರಯತ್ನವೆಂದು ಹೇಳಬೇಕಾಗುತ್ತದೆ. ಅನುಭಾವಿಗಳ ಭಾಷೆ ಸಜೀವವಾಗಿ ಓದುಗರೊಡನೆ ಸಹವಾಸ ಮಾಡುತ್ತದೆ.

ಭಕ್ತಿ ಸೂತ್ರದಲ್ಲಿ ನಾರದರು 'ನಾ ಪರಾನುಶಕ್ತಿ ಈಶ್ವರೇ' ಎಂದು ವಿವರಿಸಿದ್ದಾರೆ. ಶರಣರು, ದಾಸರು ಮೂಲತಃ ಭಕ್ತರು ಇವರಲ್ಲಿ ಭಕ್ತಿಯೇ ಮುಕ್ತಿಗೆ ಸೋಪಾನ 'ಸೂಹಂಕಿಂತಲೂ ದಾಸೋಹಂ' ಭಾವ ಇಲ್ಲಿ ಮೂರ್ಖ ಮಾನವ ದೇವನಾಗಲು ನರ ನಾರಾಯಣನಾಗಲು ಅನೇಕ ಮಾರ್ಗಗಳುಂಟು. ಆದರೆ ಭಕ್ತಿ ಮಾರ್ಗ ಸರಳ ಸುಂದರ ಭಕ್ತಿ ಭಾವದೊಂದಿಗೆ ದಾಸ್ಯಭಾವ ಕೂಡಿದರೆ ಸಾಕು ಇದರೊಂದಿಗೆ ದಾಸರ ಹಾಡುಗಳು ಹರಿದವು.

ಶ್ರೀ ಹರಿಯಲ್ಲಿ ಪರಮಭಕ್ತಿ ಪರಮ ಪ್ರಸಾದಗಳ ದ್ವಾರದಿಂದ ನೈಜ ಸುಖಾನುಭವ ರೂಪವಾದ ಮುಕ್ತಿಯನ್ನು ಕುರಿತು ಕಾರಣವಾದ ಅಪರೋಕ್ಷ ಜ್ಞಾನವು ಶ್ರವಣಾದಿ ಸಾಧನ ಪ್ರಧನಾಕವಾದ ಭಾಗವತಿ ಧರ್ಮದಿಂದ ಉದಯಿಸುತ್ತದೆ. ಆ ಭಾಗವತ ಧರ್ಮಗಳಲ್ಲಿ ಶ್ರೀ ಹರಿ ಕಥೆಯ ಶ್ರವಣ ಸುಕೀರ್ತನೆಗಳು ಅತೀ ಮಹತ್ವದ ಸ್ಥಾನವನ್ನು ಪಡೆದಿವೆ. ಆದುದರಿಂದಲೇ ಭಕ್ತರ ಮನಸ್ಸನ್ನು ಹರಿಯ ಚರಣಾರವಿಂದಗಳಲ್ಲಿ ನಿಲ್ಲುವಂತೆ ಮಾಡಬೇಕೆಂಬ ಭಗವಂತನ ಅಣತಿಯನ್ನು ಶಿರಸಾವಹಿಸಿ ನಾರದಾದಿಗಳು ಪುರಂದರದಾಸರಾಗಿ ಅವತರಿಸಿ ತಮ್ಮ ಸರಸ ಮಧುರ ವಿಚಾರಗಳನ್ನು ಸಂಗೀತ

೧೮ : ಜನ ಸಾಮಾನ್ಯರಿಗೆ ಕೀರ್ತನ ಸಾಹಿತ್ಯ – ಎಚ್. ಎಸ್. ವೆಂಕಟೇಶಮೂರ್ತಿ, ಪು–೩೮

ಸಂಕೀರ್ತನೆಗಳಿಂದ ವೇದಶಾಸ್ತ್ರ ಪುರಾಣಗಳ ಸಾರರೂಪವಾದ ಭಾಗವತ ಧರ್ಮ ತತ್ವಗಳನ್ನು ಉಪದೇಶಿಸಿ ಜನರಲ್ಲಿ ವಿಷ್ಣು ಭಕ್ತಿಯನ್ನು ಜಾಗೃತಗೊಳಿಸಿ ಜಗತ್ತನ್ನು ಪಾವನ ಮಾಡಿದರು.

೧೬ ನೇ ಶತಮಾನವನ್ನು ಕನ್ನಡ ನಾಡಿನ ಚರಿತ್ರೆಯಲ್ಲಿ ಅನುಭವ ಸಾಹಿತ್ಯದ ೨ ನೇ ಘಟ್ಟ ಎನ್ನಬಹುದು. ಈಗ ಕನ್ನಡವನ್ನು ಮತ್ತು ಕೀರ್ತನ ಪ್ರಕಾರವನ್ನು ಧರ್ಮ ಪ್ರಚಾರ, ಸಮಾಜ ಸಉಧಾರಣೆಗೆ ಸಾರ್ಥಕವಾಗಿ ಬಳಸಿದವರು ದ್ವೈತ ಸಂಪ್ರದಾಯದ ಮದ್ವಾಮತಾನುಯಾಯಿಗಳಾದ ಭಾಗವತ ಮನೋಧರ್ಮದ ಹರಿದಾಸರು.

ದ್ವೈತ ಮತ ಸ್ಥಾಪಕನಾದ ಮದ್ವಾಚಾರ್ಯರ ದಾಸ ಪಂಥಕ್ಕೆ ಮೂಲ ಪುರುಷರೆಂದು ಹೇಳುವುದುಂಟು. ಮದ್ವಾಚಾರ್ಯರ ದ್ವೈತ ಸಿದ್ಧಾಂತದ ಪ್ರಮೇಯಗಳನ್ನು ಸಂಗ್ರಹವಾಗಿ ಹೇಳುವಲ್ಲಿ ಮುಕ್ತಿರ್ನೈಜಾನ್ಯ ಸುಖಾನುಭೂತಿ: ಅಮಲಾ ಭಕ್ತಿಶ್ಚತತ್ಸಾಧನಂ[೧೯] ಇದು ಮದ್ವಾಚಾರ್ಯರ ದ್ವೈತದಲ್ಲಿ ಭಕ್ತಿಗೆ ವಿಶೇಷ ಮನ್ನಣೆ ದೊರೆಯಿತೆಂದು ಈ ಮೇಲಿನ ಮಾತು ಸಿದ್ಧಪಡಿಸುತ್ತದೆ.

ವಚನ ಸಾಹಿತ್ಯ ಸ್ವರೂಪ :

"ವಚನ ಸಾಹಿತ್ಯ"ವು ಕನ್ನಡದ ಅಪೂರ್ವ ಸಂಪತ್ತು. ವಿಶ್ವದಲ್ಲಿಯೇ 'ವಚನ'ದಂಥ ರೂಪು ಮತ್ತೊಂದಿಲ್ಲ. ಜಾಗತಿಕ ಸಾಹಿತ್ಯಕ್ಕೆ ಕನ್ನಡವು ಕೊಟ್ಟಿರುವ ಅಮೋಘ ಕೊಡುಗೆಯೆಂದರೆ, ವಚನ ಸಾಹಿತ್ಯವೆಂದೆ ಹೇಳಬಹುದು. ಯಾವುದೇ ಭಾಷೆಯ ಸಾಹಿತ್ಯವು ಅಭಿಮಾನ ಪಡಬಹುದಾದ ಅಪರೂಪದ ಮತ್ತು ವೈಶಿಷ್ಟ್ಯಯುತವಾದ ಮಾದರಿಯಿದು. ಈ ಅಭೂತಪೂರ್ವ ಸಾಹಿತ್ಯವು ಹನ್ನೊಂದನೆಯ ಶತಮಾನದ ಮಧ್ಯದಲ್ಲಿ ಮೊಗದೋರಿ, ಆ ಶತಮಾನದ ಅಂತ್ಯ ಭಾಗದಲ್ಲಿದ್ದಿರಬಹುದಾದ ದಾಸಿಮಯ್ಯದ್ವಯರಿಂದ ಸುಭದ್ರವಾದ ನೆಲೆಗಟ್ಟನ್ನು ಸ್ಥಾಪಿಸಿಕೊಂಡು, ಹನ್ನೆರಡನೆಯ ಶತಮಾನದ ಬಸವ, ಅಲ್ಲಮ, ಸಿದ್ಧರಾಮ, ಮಹಾದೇವಿಯಕ್ಕ, ಮುಕ್ತಾಯಕ್ಕ, ಮಾಚಯ್ಯ, ಚೌಡಯ್ಯ ಮೊದಲಾದ ಶಿವಶರಣರ ಕಾಲದಲ್ಲಿ ತನ್ನ ಉತ್ತುಂಗ ಶಿಖರವನ್ನು ಮುಟ್ಟಿತು. ಅಂದಿನಿಂದ ಇಂದಿನವರೆಗೂ ನಿರಂತರವಾಗಿ ಪ್ರವಹಿಸುತ್ತ ಬಂದ, ಈ ಹಾಲ್ದೊರೆಯು ಈ ಆಧುನಿಕ ಯುಗದಲ್ಲಿಯೂ ವಿಫುಲವಾಗಿ ರಚನೆಗೊಳ್ಳುತ್ತಿರುವುದು ಎಂಥವರನ್ನಾದರೂ ಬೆರಗುಗೊಳಿಸುತ್ತದೆ. ಇದಕ್ಕೆ ಮಾರು ಹೋಗದವರು ಇಲ್ಲವೇ ಇಲ್ಲವೆನ್ನಬಹುದು.

---

೧೯ : ಶರಣ ದಾಸರ ಭಕ್ತಿ – ಎಸ್. ಬಿ. ಉತ್ನಾಳ

ವಚನಕಾರರ ಸುಸಂಘಿತವಾದ ಚಳುವಳಿಯು ಸಮಸ್ತ ಸಮಾಜದ ಬುಡವನ್ನೇ ಅಲ್ಲಾಡಿಸಿ ಬಿಟ್ಟಿತು. ಮಡುಗಟ್ಟಿ ಮಲೆತು ನೀರಾಗಿದ್ದ ಅಂದಿನ ಸಮಾಜದ ವ್ಯವಸ್ಥೆಯ ಸಾದ್ಯಂತವಾಗಿ ಬದಲಾಗಿ ಬಿಟ್ಟಿತು. ಸಾಮಾಜಿಕ, ರಾಜಕೀಯ, ಧಾರ್ಮಿಕನಲ್ಲಿಯೂ ಅಂದಿನ ಜನಾಂಗದ ಜೀವನ ವಿಧಾನವೇ ಪರಿವರ್ತನೆಗೊಂಡು, ಹೊಸ ವ್ಯವಸ್ಥೆಗೆ ಹುಟ್ಟು ಹಾಕಿತು. ಕುಂಭಕರ್ಣನ ನಿದ್ರೆಯಿಂದ ಕೊಡವಿಕೊಂಡೆದ್ದ ಸಮಾಜವು ಚೈತನ್ಯ ಶೀಲತೆಯನ್ನು ಮೈಗೂಡಿಸಿಕೊಂಡು ಕುಣಿದು ಕುಪ್ಪಳಿಸುವ ನೃತ್ಯ ಕಾರಂಜಿಯಂತಾಯ್ತು. ಪಾದರಸದ ಸ್ಪರ್ಶವನ್ನು ಪಡೆದುಕೊಂಡಿತು. ಈ ಕ್ರಾಂತಿಕಾರಿ ಚಳುವಳಿಯು ಜನರಲ್ಲಿಯ ಅಜ್ಞಾನ, ಅಂಧಕಾರ, ಅಂಧಾನುಕರಣೆ, ಮೂಢನಂಬಿಕೆಗಳನ್ನು ಹೋಗಲಾಡಿಸಿ ವೈಚಾರಿಕ ದೃಷ್ಟಿಯನ್ನು ಮೂಡಿಸಿತು. ಮೊಟ್ಟ ಮೊದಲ ಬಾರಿಗೆ ಜಾತಿ–ಮತ, ಕುಲ–ಪಂಥ, ಪಕ್ಷ ಪಂಗಡ, ಮೇಲು–ಕೀಳು, ಆಸ್ತಿ–ಅಂತಸ್ತು, ದೇಶ–ಭಾಷೆ–ಪ್ರದೇಶ–ವಯಸ್ಸು, ಬಡವ–ಬಲ್ಲಿದ ವರ್ಣ–ವರ್ಗ ಶ್ರೇಷ್ಠ–ಕನಿಷ್ಠ, ಮಡಿ–ಮೈಲಿಗೆ ಇತ್ಯಾದಿ ಹತ್ತಾರು ವೈಷಮ್ಯಗಳನ್ನು ಸಮಾಜದಿಂದ ಬೇರು ಸಹಿತ ಕಿತ್ತೊಗೆಯಲೆಂದು ಸಂಕಲ್ಪಗೈದು ಸಜ್ಜಾದ ಶರಣರ ಬೆಂಬಲಕ್ಕೆ ಸಮರೋಪಾದಿಯಲ್ಲಿ ಜನರು ಒಂದುಗೂಡಿದರು. ಈ ಮಹಾಂದೋಲನಕ್ಕೆ ಅಂದಿನ ಜನರು ಹೆಗಲಿಗೆ ಹೆಗಲು ಕೊಟ್ಟು ಹಗಲಿರುಳು ದುಡಿದಿದ್ದರಿಂದ ಪರಂಪರಾಗತವಾಗಿ ಬಂದ ಮೂಢನಂಬಿಕೆಗಳು ಕಳಚಿದವು. ದಬ್ಬಾಳಿಕೆ ಶೋಷಣೆ–ಕ್ರೌರ್ಯಗಳಿಂದ ತುಂಬಿ ಹೋಗಿದ್ದ ಸಮಾಜದಲ್ಲಿ ಪ್ರಪ್ರಥಮ ಬಾರಿಗೆ ಸ್ತ್ರೀಯರಿಗೆ ಸರ್ವ ರೀತಿಯ ಸ್ವಾತಂತ್ರ್ಯವು ಲಭಿಸಿತು. ಪುರುಷನಷ್ಟೇ ಸರಿ–ಸಮಾನವಾದ ಸ್ಥಾನ–ಮಾನಗಳು ಅವಳಿಗೂ ದಕ್ಕಿದವು. ಅಕ್ಷರ ಪ್ರಪಂಚಕ್ಕೆ ಮೊಟ್ಟ ಮೊದಲ ಕಾಲಿಟ್ಟ ಮಹಿಳೆ ಎಲ್ಲರೂ ತಲೆದೂಗುವಂಥ ಸಾಹಿತ್ಯ ರಚಿಸಿದಳು. "ದಲಿತರು ಶೋಷಿತರು ಕೆಳವರ್ಗದವರು ಮೊದಲ ಬಾರಿಗೆ ಸಾಹಿತ್ಯದ ಮುಖಾಂತರ ಮಾತನಾಡಿದ್ದು ಇದೇ ಸಂದರ್ಭದಲ್ಲಿ. ಅರಮನೆಗಳಿಂದ ಹೊರ ಬಂದು, ರಾಜಾಶ್ರಯದಿಂದ ದೂರ ನಿಂತು, ಪಂಡಿತರ ಕಪಿ ಮುಷ್ಟಿಯಿಂದ ಪಾರಾಗಿ ಬಂದ ಕನ್ನಡ ಸಾಹಿತ್ಯ ಸಹಜವಾಗಿ ಉಸಿರಾಡಿಸಿದ್ದು ನೆಲದ ಮಾತಿನಲ್ಲಿ ನಳನಳಿಸಿದ್ದು ವಚನಕಾರರಲ್ಲಿ ಮಾತ್ರ. ಎಲ್ಲ ತಾರತಮ್ಯಗಳನ್ನಳಿದು ಸಾಮಾನ್ಯ ಜನತೆ ಮೊದಲ ಬಾರಿಗೆ ತಮ್ಮನ್ನು ಸಾಹಿತ್ಯದಲ್ಲಿ ತೊಡಗಿಸಿಕೊಂಡಿದ್ದು, ಸಾರ್ವಕಾಲಿಕ ಮೌಲ್ಯದ ಸಾಹಿತ್ಯವನ್ನು ಕೊಟ್ಟದು. ಗಮನಿಸಬೇಕಾದ ಸಂಗತಿಗಳು."[೨೦]

ವಚನಕಾರರು ಮಾರ್ಗ ಸಂಪ್ರದಾಯವನ್ನು ಬದಿಗೊತ್ತಿ, ಜನರಾಡುವ ಭಾಷೆಯಲ್ಲಿಯೇ, ದೇಶಿಯ ನುಡಿಗಟ್ಟುಗಳನ್ನು ಬಳಸಿಕೊಂಡು ತಮ್ಮ ವಚನಗಳನ್ನು ರಚಿಸಿದ್ದು ಸಾಮಾನ್ಯ ಸಾಧನೆಯೇನಲ್ಲ. ಏಕೆಂದರೆ ಸಂಸ್ಕೃತಭೂಯಿಷ್ಟವಾದ ಸಿದ್ದ ಶೈಲಿಯು

---

೨೦ : ಶರಣರ ಕಾಯಕ ಮತ್ತು ದಾಸೋಹ, ಪು–೩, ಡಾ. ಅಶೋಕ ನರೋಡೆ

ಪಂಡಿತ ಮಂಡಲಿಯನ್ನು ಮೆಚ್ಚಿಸಬಹುದಿತ್ತೇ ಹೊರತು ಜನಸಾಮಾನ್ಯರನ್ನಲ್ಲ, ನಾವು ಹೇಳಬೇಕಾದ ವಿಚಾರಗಳು ಜನರಿಗೆ ತಲುಪದೆ ಹೋದಾಗ, ಅವರಿಗೆ ಅವು ಅರ್ಥವಾಗುವುದಾದರೂ ಹೇಗೆ? ಅವರಿಗೆ ಅರ್ಥವಾಗದೆ ಹೋದರೆ, ಜನರು ಜಾಗೃತರಾಗುವುದು ಯಾವಾಗ? ಜನರು ಜಾಗೃತರಾಗದಿರುವಾಗ ಸಮಾಜದಲ್ಲಿ ಪರಿವರ್ತನೆಯಾದರೂ ಹೇಗಾದಿತು? ವಿಚಾರ ಸರಣಿ ಎಷ್ಟೇ ಶ್ರೇಷ್ಠವಾಗಿರಲಿ, ಉದ್ದೇಶ ಎಷ್ಟೇ ಘನವಾಗಿರಲಿ, ಅದು ಜನರಿಗೆ ತಿಳಿಯದೆ ಹೋದಾಗ ನಿಷ್ಪ್ರಯೋಜನವಲ್ಲದೆ ಮತ್ತೇನು? ಪ್ರಾಜ್ಞರಾದ ವಿಚಕ್ಷಣಮತಿಗಳಾದ ವಚನಕಾರರು ತಮ್ಮ ಚಳುವಳಿಗೆ ಬಿಚ್ಚು ಮನಸಿನಿಂದ ಅಚ್ಚಗನ್ನಡದ ಆಡು ಭಾಷೆಯ ಸೊಗಡನ್ನು ಬಳಸಿಕೊಂಡರು. ಈ ಅಂಶವು ವಚನಕಾರರಲ್ಲಿರುವ ಜನಪರ ಧೋರಣೆಗೆ, ಜನಪರ ಕಾಳಜಿಗೆ ಉತ್ತಮ ಉದಾಹರಣೆ. ಸಮಾಜದ ಏಳ್ಗೆಯೇ ಈ ಜನಪರ ಚಳುವಳಿಯ ಗುರಿಯಾಯ್ತು. "ಈ ಜನಪರ ಚಳುವಳಿಗೆ ಪೂರಕವಾಗಿ ಮೊಟ್ಟ ಮೊದಲು ವಚನ ಸಾಹಿತ್ಯ ಸೃಷ್ಟಿಯಾಯಿತು."[೨೧]

ವಚನಕಾರರ ವೈಚಾರಿಕ ನಿಲುವಿನಿಂದಾಗಿ ಭಾಷೆ, ಛಂದಸ್ಸು, ಶೈಲಿ ರಚನಾರೀತಿ, ಅಭಿವ್ಯಕ್ತಿಯ ಪರಿ ಇತ್ಯಾದಿಗಳು ಹೊಸ ರೂಪ ತಾಳಿದವು. ಸಾಹಿತ್ಯದಲ್ಲಿ ನವ–ನವೀನವಾದ ಪ್ರಯೋಗಗಳು ನಡೆದವು. ಭಾಷೆ ತನ್ನತನವನ್ನು ಹೆಚ್ಚು–ಹೆಚ್ಚಾಗಿ ಮೈಗೂಡಿಸಿಕೊಳ್ಳತೊಡಗಿತು. "ಸಂಸ್ಕೃತದ ಹಿರಿಮೆ ಸಡಿಲಿ ಕನ್ನಡದ ಹೆಚ್ಚಳ ಬೆಳೆದುದು ಈ ವಚನ ಸಾಹಿತ್ಯದಿಂದ. ಪದ್ಯದ ವ್ಯಾಮೋಹ ಸರಿದು ಗದ್ಯಕ್ಕೆ ಪುರಸ್ಕಾರ ದೊರೆತಿದ್ದು ಈ ವಚನ ಸಾಹಿತ್ಯದಿಂದ. ಬಹುಕಾಲದಿಂದಲೂ ಪಂಡಿತರ ತುತ್ತಾಗಿದ್ದ, ವಿಶಿಷ್ಟ ವರ್ಗದವರ ಸೊತ್ತಾಗಿದ್ದ ರಾಜ್ಯಲಕ್ಷ್ಮೀಯ ತೊತ್ತಾಗಿದ್ದ ಸರಸ್ವತಿಯ ಸಂಸ್ಕೃತ ಭಂಡಾರವನ್ನು ಕಡೆಗಣಿಸಿ, ತಮ್ಮ ಅನುಭವದ ಕಮ್ಮಟದಲ್ಲಿಯೇ ಅಚ್ಚೊತ್ತಿದ ವಚನ ನಾಣ್ಯಗಳನ್ನು ಜನಸಾಮಾನ್ಯರೆಲ್ಲರಲ್ಲಿ ಸಲ್ಲುವಂತೆ ಹರಡಿಸಿದವರು ವಚನಕಾರರು"[೨೨] ಎಂದಿರುವ ಪ್ರೊ. ಬಸವನಾಳರ ಮಾತುಗಳು ಪ್ರಸ್ತುತವಾಗಿವೆ. ಆಡುನುಡಿಯನ್ನು ವಚನಗಳ ರಚನೆಗೆ ಬಳಸಿಕೊಂಡಿರುವುದರಿಂದ, ಅಭಿವ್ಯಕ್ತಿಯ ಕ್ರಮ ಸರಳ–ಸಹಜವಾದುದರಿಂದ ಕಕ್ಕಯ್ಯ, ಹರಳಯ್ಯ, ಮಾರಯ್ಯ, ಧೂಳಯ್ಯ, ಚನ್ನಯ್ಯ, ಮಾಚಯ್ಯ, ಬೊಮ್ಮಯ್ಯ, ದಾಸಿಮಯ್ಯ ಚಂದಯ್ಯ ಮೊದಲಾದ ಪುರುಷರು, ಕಾಳವ್ವೆ, ರೆಮ್ಮವ್ವೆ, ಗೊಗ್ಗವ್ವೆ, ಸಂಕವ್ವೆ, ರಾಯಮ್ಮ, ಅಕ್ಕಮ್ಮ, ಲಕ್ಕಮ್ಮ ಮುಂತಾದ ಸ್ತ್ರೀಯರು, ಕೆಳವರ್ಗ ಮತ್ತು ದುಡಿಯುವ ವರ್ಗದಿಂದ ಬಂದ ಜನತೆ ಸಾಹಿತ್ಯ ರಚಿಸುವಂತಾಯಿತು. "ದೇವವಾಣಿಯು ಜನವಾಣಿಯಾಗುವುದು ಅಸಾಧ್ಯವಾದಾಗ, ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ ವಚನಕಾರರದು"[೨೩] ಎಂಬ ಶ್ರಿ. ಶ್ರಿ. ಬಸವನಾಳರ ಮಾತು ಅಕ್ಷರಶಃ ನೈಜವಾಗಿದೆ.

---

೨೧ : ಎಚ್. ದುಂಡಪ್ಪ 'ಅನ್ವೇಷಣೆ' ಸಂ–೨, ಸಂಚಿಕೆ–೪೨ : ಪುಟ–೩೬
೨೨ : ಬಸವಣ್ಣನವರ ಷಟ್‌ಸ್ಥಳದ ವಚನಗಳು ಪ್ರಸ್ತಾವನೆ ಪುಟ–೧
೨೩. : ಬಸವಣ್ಣನವರ ಷಟ್‌ಸ್ಥಳದ ವಚನಗಳು ಪ್ರಸ್ತಾವನೆ, ಪುಟ–೨

ಮತ್ತೊಂದು ಮಹತ್ವದ ಮತ್ತು ನೆನಪಿಡಬೇಕಾದ ವಿಷಯವೆಂದರೆ, ವಚನಕಾರರು ಸಾಹಿತ್ಯವನ್ನು ರಚಿಸಲು ಹೊರಟವರಲ್ಲ, ಶ್ರೇಷ್ಠ ಕಾವ್ಯಗಳನ್ನು ಕಟ್ಟಿಕೊಡುವ ಹಂಬಲವೂ ಅವರಿಗಿರಲಿಲ್ಲ. ತಮ್ಮ ಧರ್ಮದ ಪ್ರಚಾರದೊಂದಿಗೆ ಸಮಾಜ ಸುಧಾರಣೆಯೇ ಅವರ ಮುಖ್ಯ ಗುರಿಯಾಗಿತ್ತೆಂಬುದನ್ನೂ ಮರೆಯುವಂತಿಲ್ಲ. ಅದಾಗ್ಯೂ ಬರಿ ತತ್ವ, ಶಾಸ್ತ್ರ, ಉಪದೇಶ ನೀತಿಗಳೇ ತುಂಬಿಕೊಂಡಿರದೆ, ಶ್ರೇಷ್ಠ ಸಾಹಿತ್ಯದಲ್ಲಿ ಇರಬಹುದಾದ ಉತ್ಕೃಷ್ಟ ಅಂಶಗಳೆಲ್ಲವೂ ವಚನ ಸಾಹಿತ್ಯ ಒಡಲೊಳಗೆ ಅಡಗಿರುವುದು ಅಪೂರ್ವವೇ ಸರಿ. "ಸಾಹಿತ್ಯ ಒಂದು ಕಡೆ ಕಲೆಯನ್ನು ಪ್ರತಿನಿಧಿಸಬೇಕು. ಇನ್ನೊಂದು ಕಡೆ ಮೌಲ್ಯವನ್ನು ಪ್ರತಿಪಾದಿಸಬೇಕು. ಈ ಜವಾಬುದಾರಿಯನ್ನು ಸ್ವಲ್ಪ ತಪ್ಪಿಸಿದರೆ ಸಾಕು. ಅದು ಕಲೆಯ ಹೆಸರಿನಲ್ಲಿ ನೀತಿಬೋಧೆಯಾಗುವ ಅಪಾಯವಿದೆ. ಈ ಎರಡೂ ಅಪಾಯಗಳಿಂದ ಬಹುಮಟ್ಟಿಗೆ ವಚನಸಾಹಿತ್ಯ ಪಾರಾದುದು ಅವರ ದೊಡ್ಡ ಸಾಧನೆಯೇ ಸರಿ.[೨೪] ಎಂದು ಅರ್ಥಪೂರ್ಣವಾಗಿ ವ್ಯಾಖ್ಯಾನಿಸಿದ ಡಾ॥ ಎಂ. ಎಂ. ಕಲಬುರ್ಗಿಯವರ ವಿಶ್ಲೇಷಣೆಯು ವಚನ ಸಾಹಿತ್ಯಕ್ಕೆ ಹೊಸ ಒಳನೋಟಗಳನ್ನು ಒದಗಿಸಿದೆಯೆಂದು ಹೇಳಬಹುದು. ಹಾಗೆಯೆ ಮತ್ತೊಬ್ಬ ವಿದ್ವಾಂಸರಾದ ಎಚ್. ದುಂಡಪ್ಪ ಅವರು "ವಚನ ಸಾಹಿತ್ಯದಲ್ಲಿ ಕಾಳಜಿ ಮತ್ತು ಕಲೆ ಎರಡೂ ಶಕ್ತಿಯುತವಾಗಿ ಮೇಳೈಸಿ ಉತ್ಕೃಷ್ಠ ಸಾಹಿತ್ಯವಾಗಿದೆ ಎಂಬುದನ್ನು ಈಗಾಗಲೇ ಅನೇಕ ವಿಮರ್ಶಕರು ತಮ್ಮ ಅಧ್ಯಯನಗಳಲ್ಲಿ ಸಾಬೀತು ಪಡಿಸಿದ್ದಾರೆ."[೨೫] ಎಂಬುದಾಗಿ ಸಾಹಿತ್ಯ ಮತ್ತು ಜನಪರ ಚಳುವಳಿಗಳು "ವಿಷಯವನ್ನು ವಿಶ್ಲೇಷಿಸುತ್ತ ಅಭಿಪ್ರಾಯಪಟ್ಟಿದ್ದು ಸಮಯೋಚಿತವಾಗಿದೆ.

ವಚನದ ರಚನೆ :

'ವಚನ'ವೆಂಬ ಪದಕ್ಕೆ ಬಹುವಿಶಿಷ್ಟವಾದ ಮತ್ತು ವ್ಯಾಪಕವಾದ ಅರ್ಥವಿದೆ. ನೋಡಿ ಮಾತು, ನುಡಿ, ವಾಕ್ಯ, ನಿಯಮ ಸೂತ್ರ ನುಡಿಗಟ್ಟು ಉಪದೇಶ, ಸಲಹೆ, ಪ್ರಸಿದ್ಧಿ ಸ್ಥಿರಗೊಳಿಸುವಿಕೆ ಇತ್ಯಾದಿ ಅರ್ಥಗಳಿವೆ.[೨೬] ಮಾತು ಕೊಡುವುದು ಪ್ರಮಾಣ ಮಾಡುವುದು, ಆಣೆಯಿಟ್ಟು ಹೇಳುವುದು, ಭಾಷೆ ಕೊಟ್ಟು ಬಿಡುವುದು, ಪ್ರತಿಜ್ಞೆಗೈವುದು ಮುಂತಾದ ಅರ್ಥದ ಸುರುಳಿಗಳೂ ಬಿಚ್ಚಿಕೊಳ್ಳುತ್ತವೆ. ಅದರ ಜೊತೆಗೆಯೆ ಪ್ರಾಮಾಣಿಕವಾದದ್ದು. ನಿಷ್ಠೆಯುಳ್ಳದ್ದು, ನಿಷ್ಕಪಟವಾದದ್ದು, ನಡೆನುಡಿಯಲ್ಲಿ ಒಂದಾಗಿದ್ದದ್ದು ಮೊದಲಾದ ಬಹುವಿಶಾಲವಾದ ಅರ್ಥದ ಪದರುಗಳನ್ನು ವಚನವು ಒಳಗೊಂಡಿದೆ.

---

೨೪ : ಡಾ॥ ಎಂ. ಎಂ. ಕಲಬುರ್ಗಿ ವಚನ ಸಾಹಿತ್ಯ ವಿವೇಚನೆ (ಜೀವನ ಮೌಲ್ಯಗಳು) ಪುಟ-೧೧.
೨೫ : ಎಚ್. ದುಂಡಪ್ಪ – ಅನ್ವೇಷಣೆ (ಸಂಪುಟ-೭, ಸಂಚಿಕೆ-೪೨) ಪುಟ-೩೬.
೨೬ : ಕಸ್ತೂರಿ ಕೋಶ, ನಾಲ್ಕನೆಯ ಮುದ್ರಣ-೧೯೮೩, ಪುಟ – ೮೨೮

ಶಿವಶರಣರು ವಚನದ 'ರಚನೆ'ಯ ಬಗ್ಗೆ ಸಾಕಷ್ಟು ಚಿಂತನ ಮಂಥನಗೈದಿದ್ದಾರೆ. ಸಂದರ್ಭ ಸಿಕ್ಕಾಗೆಲ್ಲ ರಚನೆಯ ಕುರಿತಾಗಿ ವಿವೇಚನೆ ವಿಶ್ಲೇಷಣೆ ಮಾಡಿದ್ದಾರೆ. ಅಲ್ಲಲ್ಲಿ ತಮ್ಮ ಅನಿಸಿಕೆಗಳನ್ನು ಹೇಳಿದ್ದಾರೆ.

ಅಕ್ಕಮಹಾದೇವಿಯು –

"ವಚನಕ್ಕೆ ಶೃಂಗಾರ ಸತ್ಯವ ನುಡಿಯುವುದು"[೨೭]

ಅಲ್ಲಮಪ್ರಭುದೇವ –

"ವಚನರಚನೆಯೆಂಬುದು ಮಾತಿನ ಬಣ್ಣದ ಪರಿಯಲ್ಲ ನೋಡಾ"[೨೮]

ಸಿದ್ಧರಾಮ – "ವಚನ ರಚನೆಯೆಂಬುದು ಕರ್ಣಾಟವಯ್ಯಾ"[೨೯] ಈ ಮೇಲಿನವರ ಮಾತುಗಳಿಂದ ಸ್ಪಷ್ಟವಾಗಿ ಕಂಡು ಬರುವ ಅಂಶವೆಂದರೆ ವಚನಕ್ಕೆ ತನ್ನದೇ ಆದ ಮತ್ತು ಅತಿ ವಿಶಿಷ್ಟವಾದ 'ರಚನೆ'ಯೆಂಬುದೊಂದು ಇದೆಯೆನ್ನುವ ಸಂಗತಿ. ಇದು ಹನ್ನೆರಡನೆಯ ಶತಮಾನದ ವಚನಕಾರರ ಗಮನಕ್ಕೆ ಬಂದಿರುವುದೂ ಸುಸ್ಪಷ್ಟವಾಗಿ ಗೊತ್ತಾಗುತ್ತದೆ. ಹಾಗಾದರೆ ವಚನಕಾರ ಪ್ರಕಾರ ವಚನದ 'ರಚನೆ' ಹೇಗಿರಬೇಕು? ರೂಪು–ವಿನ್ಯಾಸಗಳಾವವು? ಎನ್ನುವ ಪ್ರಶ್ನೆಗಳು ಏಳುವುದು ಸ್ವಾಭಾವಿಕ. ಶ್ರೀ ಸಿದ್ಧರಾಮನು "ಎರೆದು ನಿದ್ರಿಪ ಬಾಲನಂತೆ", ದುಡಿದು ದಣಿದು ಮಲಗಿದ ಕೃಷಿವಲನಂತೆ" ಪದ್ಮಿನಿಯಲ್ಲಿ ಬೆರಗಾಗುವ ಕಾಮಿಯಂತೆ" ಇರಬೇಕೆಂದು ಧ್ವನಿಪೂರ್ಣವಾದ ಮತ್ತು ಸುಂದರವಾದ ಅಲಂಕಾರದಲ್ಲಿಯೇ ಹೇಳಿದ್ದಾನೆ. ಬಸವಣ್ಣನವರ "ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು, ನುಡಿದರೆ ವಜ್ರದ ದೀಪ್ತಿಯಿರಬೇಕೆಂದು" ಹೇಳಿದ್ದು, ಅಲ್ಲಮ ಪ್ರಭುದೇವ "ಮಾತೆಂಬುದು ಜ್ಯೋತಿರ್ಲಿಂಗ"ವೆಂದು ಹೇಳಿದ್ದು ವಚನ ರಚನೆಯ ಆಶಯವನ್ನೇ ಪ್ರತಿಬಿಂಬಿಸುವಂತಹುವುಗಳಾಗಿವೆಯೆಂಬುದನ್ನು ಗುರುತಿಸಬಹುದು.

"ವಚನ ರಚನೆಯ ಬಿಟ್ಟು
ಕುತ್ಸಿತ ಕಾವ್ಯಾಲಂಕಾರ, ನೋಡುವವರ ನೋಡಿ
ಹುಡಿಮಣ್ಣ ಹೋಯ್ಯದೆ ಮಾಣ್ಬನೆ
ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನ"[೩೦]

---

೨೭ : ಮಹಾದೇವಿಯಕ್ಕನ ವಚನಗಳು ಸಂ. ಡಾ. ಆರ್.ಸಿ. ಹಿರೇಮಠ ವ–೧೮೧ ಪು–೭೧
೨೮ : ಅಲ್ಲಮನ ವಚನ ಚಂದ್ರಿಕೆ ಸಂ. ಎಲ್. ಬಸವರಾಜು, ಪ–೯೭೬, ಪು–೧೬೦
೨೯ : ಉಪನ್ಯಾಸ ಸಂಚಯ (ಸಿದ್ಧರಾಮನ ಉಪಮೆಗಳು) ಪುಟ–೪೮
೩೦ : ಉಪನ್ಯಾಸ ಸಂಚಯ (ಸಿದ್ಧರಾಮನ ಉಪಮೆಗಳು) ಪುಟ–೪೮

ಸಿದ್ಧರಾಮನು ಈ ಮೇಲಿನ ವಚನದಲ್ಲಿ ಮಹಾಕಾವ್ಯದ ಲಕ್ಷಣಗಳಾದ ಅಷ್ಟಾದಶ ವರ್ಣನೆ, ನವರಸಗಳು, ಹಲವಾರು ಅಲಂಕಾರಗಳು, ಚಮತ್ಕಾರಗಳು ವಸ್ತುಕ-ವರ್ಣಕಗಳು, ಪ್ರಾಸ, ರೀತಿ, ಛಂದ-ಬಂಧಗಳನ್ನು ಪಟ್ಟಿಮಾಡಿ ಕಾವ್ಯದ ಮೌಲ್ಯಮಾಪನಕ್ಕೆ ಹೊರಡುವವರನ್ನು ಕಟುವಾಗಿ ಟೀಕಿಸಿದ್ದಾನೆ. ಮತ್ತೆ ಕೆಲ ವಚನಗಳಲ್ಲಿ, ಹಲವರು ತಮ್ಮ ಪ್ರಕಾಂಡ ಪಾಂಡಿತ್ಯವನ್ನು ಪ್ರದರ್ಶಿಸಲೆಂದೆ ಕಾವ್ಯ ರಚಿಸಿದವರನ್ನು, ಕೆಲವರು ತಮ್ಮ ಆಶ್ರಯದಾತನನ್ನು ಮೆಚ್ಚಿಸಲೆಂದೆ ಕಾವ್ಯ ಕಟ್ಟಿದ್ದನ್ನು, ಮತ್ತೆ ಕೆಲವರು ತಮ್ಮ ಧರ್ಮದ ಪ್ರಚಾರಕ್ಕಾಗಿ ನೀತಿ-ಶಾಸ್ತ್ರ, ತತ್ವ, ಆಧ್ಯಾತ್ಮಗಳನ್ನು ಅತಿಯಾಗಿ ತುಂಬಿ ತುಂಬಿ, ಸಾಹಿತ್ಯಕ್ಕೆ ಅತಿಯಾದ ಕಟ್ಟು-ಪಾಡುಗಳನ್ನು ವಿಧಿಸಿದವರನ್ನು ಅಲ್ಲಗಳೆದಿದ್ದಾನೆ. "ವಚಿಸಿ ಅನುಭಾವಿಯಾದವ ಪಿಶಾಚಿಯಯ್ಯ" ಎಂದು ಮೂದಲಿಸಿದ್ದಾನೆ. ಶಾಸ್ತ್ರವನ್ನು ಮನ್ಮಥ ಶಸ್ತ್ರವೆಂದು, ವೇದಾಂತವು ಮನೋವ್ಯಾಧಿಯೆಂದು, ಪುರಾಣವು ಗಿರಾಣವೆಂದು, ಇತಿಹಾಸವು ಅರಸರ ಕತೆಯ ಕಂತೆಯೆಂದು ವಿಡಂಬಿಸಿ, 'ಆದ್ಯರ ವಚನವೆಂಬುದು ಬಹುವೇದ್ಯವಯ್ಯಾ' ಎಂದಿದ್ದಾನೆ. ಪ್ರಭುದೇವನೂ ಕೂಡ ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರಗೋಷ್ಠಿಯೆಂದು ಟೀಕಿಸಿದ್ದನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ವೇದ-ಶಾಸ್ತ್ರ ಪುರಾಣ-ಇತಿಹಾಸಗಳು ಕೆಲವು ವಿಶಿಷ್ಟ ವ್ಯಕ್ತಿಗಳ ಮತ್ತು ವರ್ಗಗಳ ಸೊತ್ತಾಗಿವೆ. ಕೆಲವರ ಹಿತಾಸಕ್ತಿಗಳಿಗೆ ಮಾತ್ರ ಅಲ್ಲಿ ಪ್ರಾಶಸ್ತ್ಯವಿರುತ್ತದೆ. ದಬ್ಬಾಳಿಕೆ ಶೋಷಣೆಗಳ ಆಗರಗಳಾಗಿರುತ್ತವೆ. ಪುರೋಹಿತಶಾಹಿ, ಸಾಮ್ರಾಜ್ಯಶಾಹಿ ಬಂಡವಾಳ ಶಾಹಿ ಪಟ್ಟಭದ್ರ ಹಿತಾಸಕ್ತಿಗಳಿಗೆ ಇವು ಪರೋಕ್ಷವಾಗಿ ಬೆಂಬಲ ನೀಡಿವೆ. ಅವುಗಳಲ್ಲಿ ಜನಪದ-ಜನಪರ ಧೋರಣೆಗಳಿಗೆ ಆಸ್ಪದವೇ ಇರುವುದಿಲ್ಲ. ಆದರೆ ವಚನಸಾಹಿತ್ಯದಲ್ಲಿ ಹಾಗಲ್ಲ, ಮೇಲಿನ ಅಂಶಗಳಿಗೆ ತದ್ವಿರುದ್ಧ. ಅಂದರೆ, ವ್ಯಕ್ತಿ-ನಿಷ್ಠವಾಗಿರದೆ ಸಮಾಜನಿಷ್ಠ ವ್ಯಷ್ಟಿ ನಿಷ್ಟವಾಗಿರದೆ ಸಮಷ್ಟಿ ನಿಷ್ಟವಾಗಿರುತ್ತದೆ. ಜನಪರ ಧೋರಣೆಗೆ, ಬಹುಜನರ ಆಶೋತ್ತರಗಳಿಗೆ ಇದು ಹತ್ತಿರವಾಗಿರುತ್ತದೆ. ಸಮಸ್ತ ಸಮಾಜದ ಸುಧಾರಣೆಗಾಗಿ ಇದು ಹಾತೊರೆಯುತ್ತದೆ. ಸಮಾಜದಲ್ಲಿಯ ಎಲ್ಲ ಆಗು-ಹೋಗುಗಳು, ಒಂದು ಜನಾಂಗದ ಜೀವನ ವಿಧಾನ, ಅವರ ಸಾಂಸ್ಕೃತಿಕ ಬದುಕು ವಚನಗಳಲ್ಲಿ ಹೆಪ್ಪುಗಟ್ಟಿರುತ್ತದೆ. ಕತ್ತಲೆಯಲ್ಲಿರುವ ಜನತೆಯನ್ನು ಬೆಳಕಿನತ್ತ ಕೈ ಹಿಡಿದು ಕರೆತರುವ ಆಶಯವನ್ನಿಟ್ಟುಕೊಂಡು ಅದಕ್ಕಾಗಿ ಪ್ರಾಮಾಣಿಕತೆಯಿಂದ ಪ್ರಯತ್ನಗೈಯುತ್ತದೆ. ಶ್ರೇಷ್ಠ ಸಾಹಿತ್ಯದ ಸಾರ್ಥಕತೆ ಅಡಗಿರುವುದು ಇಂಥಲ್ಲಿ ಅಲ್ಲದೆ ಮತ್ತೆಲ್ಲಿ ಎಂದು ಕೇಳಬೇಕಾಗುತ್ತದೆ. ಆ ಕಾರಣದಿಂದಲೇ ಶ್ರೀ ಶಿವಯೋಗಿ ಸಿದ್ಧರಾಮನು "ವಚನವೆಂಬುದು ಬಹು ವೇದ್ಯವಯ್ಯ"[೩೧] ಎಂದು ಸಾರಿದ್ದಾನೆ.

---

೩೧ : ಉಪನ್ಯಾಸ ಸಂಚಯ (ಸಿ. ಉಪಮೆಗಳು) ಪುಟ-೫೦

ವಚನಗಳನ್ನು ಕೆಲವರು 'ಪದ್ಯ'ವೆಂದು, ಕೆಲವರು 'ಗದ್ಯ'ವೆಂದು ಮತ್ತೆ ಹಲವರು ಪದ್ಯಗಂಧಿಯಾದ ಗದ್ಯವೆಂದು ಇನ್ನೂ ಕೆಲವರು 'ಗದ್ಯಕಾವ್ಯ' 'ಅನುಭಾವಗೀತ'ಗಳೆಂದು ವಿವಿಧ ವಿದ್ವಾಂಸರು ವೈವಿದ್ಯವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಈ ಮುಂದೆ ಅವಲೋಕಿಸಬಹುದು. ಶ್ರೀ ಎಂ. ಆರ್. ಶ್ರೀಯವರು "ವಚನಗಳು ನಮ್ಮ ಕನ್ನಡ ಸಾಹಿತ್ಯದ ಉಪನಿಷತ್ತುಗಳು[೩೨] ಎಂದರೆ ಪ್ರೊ. ಬಸವನಾಳರು "ವಚನಗಳು ಗದ್ಯದ ಒಂದು ಮಾದರಿಯೆಂದು ಸ್ಥೂಲವಾಗಿ ಹೇಳಬಹುದಾದರೂ, ಅವು ನಿಜವಾಗಿಯೂ, ಗದ್ಯದ ಒಂದು ವಿಶಿಷ್ಟ ಮಾದರಿಯೆಂದೇ ಹೇಳುವುದು ವಿಹಿತ. ಸೂಕ್ಷ್ಮವಾಗಿ ವಿಚಾರಿಸಿದರೆ ವಚನಗಳು ಗದ್ಯ ಪದ್ಯದ ನಡುವಿನ ಒಂದು ಮಾದರಿಯೆಂದೇ ಹೇಳಬೇಕಾಗುವುದು. ವಚನಗಳಲ್ಲಿ ಗದ್ಯದ ನಿರರ್ಗಳತೆ ಇಲ್ಲದಿದ್ದರೂ ಅದರ ಸರಳತೆ ಇದೆ. ಪದ್ಯದ ಕ್ರಮಬದ್ಧ ಛಂದೋಗತಿ ಇಲ್ಲದಿದ್ದರೂ ಅದರ ಲಯವಿದೆ[೩೩] ಎಂದಿದ್ದಾರೆ. ಡಾ॥ ರಂ. ಶ್ರೀ ಮುಗಳಿಯವರು "ವಚನಗಳೆಂದರೆ ನಡುಗನ್ನಡದ ಶೈಲಿಯ ಅನುಭಾವ ಗದ್ಯದಲ್ಲಿ ಉಸುರಿದ ಆಧ್ಯಾತ್ಮಿಕ ಭಾವಗೀತೆಗಳು[೩೪] ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ.

ಡಾ॥ ಬುದ್ದಣ್ಣ ಹಿಂಗಮಿರೆಯವರು "ಭಾವವೆಂದರೆ ಭಾವಕ್ಕೆ ಅಂಟಿಕೊಳ್ಳದೆ ಕಾವ್ಯದ ಅತೀತಕ್ಕೆ ಸಿಕ್ಕು ಇಲ್ಲವೆ ಕಾವ್ಯ ಅಲ್ಲದ್ದಕ್ಕೆ ಜೋತು ಬೀಳದೆ ಒಂದು ಬಗೆಯ ಸಮತೂಕವನ್ನು ಕಾಯ್ದುಕೊಂಡು ಅರ್ಥ ಶೋಧನೆಯಲ್ಲಿ ವಚನಗಳು ಯಶಸ್ಸನ್ನು ಸಂಪಾದಿಸಿವೆ.[೩೫] ಎಂದು ಹೇಳಿದ್ದು ಔಚಿತ್ಯಪೂರ್ಣವಾಗಿದೆ.

ಒಟ್ಟಿನಲ್ಲಿ ಮಹಾಕಾವ್ಯಗಳು ರಚನೆಗೊಳ್ಳುವ ಸಂಪ್ರದಾಯಸ್ಥ ಸಮಾಜದಲ್ಲಿ ಮಾರ್ಗಪರಂಪರೆಯನ್ನೇ ಗೌರವಿಸುವ ಸಂದರ್ಭದಲ್ಲಿ, ಸಂಸ್ಕೃತಭೂಯಿಷ್ಟವಾದ ಮತ್ತು ಪಾಂಡಿತ್ಯದಿಂದೊಡಗೂಡಿದ ಪ್ರೌಢಶೈಲಿಯನ್ನೇ ಮೆಚ್ಚಿ ತಲೆದೂಗಿ, ಅಂಥದನ್ನೇ ಅಪ್ಪಿಕೊಳ್ಳುವಂಥ ಕಾಲದಲ್ಲಿ, ಈ ವಚನವೆಂಬ ಸಾಹಿತ್ಯರೂಪು ಇದೇ ನೆಲದಲ್ಲಿ ಹುಟ್ಟಿ, ಸ್ವತಂತ್ರವಾದ ಅಸ್ತಿತ್ವವನ್ನು ಪಡೆದುಕೊಂಡು, ತಮ್ಮದೇ ಆದ ವಿಶಿಷ್ಟ ಛಾಪನ್ನು ಒತ್ತಿದ್ದು ಜನಮನದಲ್ಲಿ ಬಿತ್ತಿದ್ದು ಮಹೋನ್ನತವಾದ ಸಾಧನೆ. ಧರ್ಮ–ಆಧ್ಯಾತ್ಮಗಳಿಂದ ಪ್ರೇರಿತಗೊಂಡರೂ ಇಹದ ಬಗ್ಗೆ ಅಪಾರ ಕಾಳಜಿಯಿದೆ. ಸಾಮಾಜಿಕ ಕಳಕಳಿ, ಜನಪರ ನಿಲುವು, ಪ್ರಗತಿಪರ ವಿಚಾರಸರಣಿಯಿದೆ. ಇವುಗಳ ಪ್ರತಿಪಾದನೆಯಿದ್ದರೂ ಕವಿಗಿರಬೇಕಾದ ಸಹಜ 'ನಿರಂಕುಶ ಪ್ರವೃತ್ತಿ'ಯನ್ನು ಇವರು ಬಿಟ್ಟುಕೊಡದೆ, ಗಟ್ಟಿಯಾಗಿ ಉಳಿಸಿ ಬೆಳೆಸಿದ್ದು ಅಸಾಮಾನ್ಯ ಸಾಧನೆಯೆಂದೆ ಹೇಳಬೇಕು. ಸರಳ–ಸಹಜ–ಸಾಮಾನ್ಯ ಮಾತುಗಳೂ ಸಹ

---

೩೨ : ವಚನ ಧರ್ಮಸಾರ ಪುಟ–೨೩೪

೩೩ : ಪ್ರೊ. ಬಸವನಾಳ – ಬ.ಷ. ವಚನಗಳು – ಪ್ರಸ್ತಾವನೆ xxvii

೩೪ : ಕನ್ನಡ ಸಾಹಿತ್ಯ ಚರಿತ್ರೆ ಪುಟ ೧೮೯

೩೫ : ಡಾ. ಬಿ. ಬಿ. ಹಿಂಗಮಿರೆ "ಜ್ಞಾನದೇಗುಲ" (ಅ. ಗ್ರಂಥ) ಪುಟ – ೭೫೦

ಶ್ರೇಷ್ಠ ಕಾವ್ಯದ ಮಟ್ಟವನ್ನು ಮುಟ್ಟಿದ್ದು, ವಚನಕಾರರ ವಾಸ್ತವಿಕ-ಸಾಮಾಜಿಕ ಉನ್ನತ ಪ್ರಜ್ಞೆಗೆ ಉಜ್ವಲ ಉದಾಹರಣೆಯಾಗಿದೆ. ಸಮಾಜದ ಸಮಸ್ತ ವರ್ಗಗಳಿಂದಲೂ ಅಕ್ಷರ ಪ್ರಪಂಚವನ್ನು ಪ್ರವೇಶಿಸಿದ ಅಸಂಖ್ಯಾತರು, ಸಾಹಿತ್ಯದ ರಚನೆಯಲ್ಲಿ ತೊಡಗಿದ್ದರಿಂದ, ಈ ಹಿಂದೆ ಎರಡೂ ಇಲ್ಲದಂಥ ವೈವಿಧ್ಯತೆ, ವೈಶಾಲ್ಯತೆ, ವಾಸ್ತವತೆ, ಸರಳತೆ ಮತ್ತು ಸಮೃದ್ಧತೆಗಳು ಏಕಕಾಲಕ್ಕೆ ಕನ್ನಡ ಸಾಹಿತ್ಯಕ್ಕೆ ಸಂಪ್ರಾಪ್ತವಾದದ್ದಂತೂ ನಮ್ಮ ಸೌಭಾಗ್ಯವೇ ಸರಿ.

ವಚನ ಎಂದರೆ ಮಾತು. ಮಾತು ಗದ್ಯದಲ್ಲಿ ವ್ಯಕ್ತವಾಗುವಂತದ್ದು ೧೨ ನೇ ಶತಮಾನದ ಶಿವಶರಣರು ತಮ್ಮ ಭಕ್ತಿ ಹಾಗೂ ಅನುಭವಗಳ ಅಭಿವ್ಯಕ್ತಿಯನ್ನು ವಚನವೆಂದು ಕರೆದರು. ಮೇಲು ನೋಟಕ್ಕೆ ಈ ಶರಣ ವಚನಗಳು ಗದ್ಯವೆಂದೇ ಕಂಡು ಬಂದರೂ ಅವುಗಳನ್ನು ಕೇವಲ ಗದ್ಯವೆಂದು ಕರೆಯುವುದು ಸರಿಯಾಗಲಾರದು. ಏಕೆಂದರೆ ಹೆಚ್ಚಿನ ವಚನಗಳಲ್ಲಿ ನಾವು ಗದ್ಯದ ಏಕತಾನತೆಯನ್ನು ಮೀರಿನ ಸೊಬಗನ್ನು ಕಾಣುತ್ತೇವೆ.

ಶಿವಶರಣರು ಆಡಿದ ಮಾತು ಎಂಬ ಅರ್ಥದಲ್ಲಿ ಇದನ್ನು ವಚನ ಎಂದು ಕರೆಯಲಾಗಿದೆ. ಹಿಂದಿನ ಚಂಪೂ ಕಾವ್ಯದಲ್ಲಿ ಕಂಡುಬರುವ ವಚನಗಳು ಹಾಗೆ ಶರಣರ ವಚನಗಳು ಶುದ್ಧಗದ್ಯರಚನೆ ಎಂದು ಹೇಳುವಂತಿಲ್ಲ. ಏಕೆಂದರೆ ಶರಣರ ಅನೇಕ ವಚನಗಳಲ್ಲಿ ಗೇಯತೆಯ ಗುಣ ತುಂಬಿಕೊಂಡಿರುವಂತೆ ಕಾಣಿಸುತ್ತದೆ. ಮಾತ್ರವಲ್ಲ ಈ ವಚನಗಳನ್ನು ಹಾಡುವ ರೂಢಿ ಇತ್ತು ಎನ್ನುವುದು ಸ್ವತಃ ಶರಣರ ವಚನಗಳಿಂದಲೇ ಸ್ಪಷ್ಟವಾಗಿ ತಿಳಿದು ಬರುತ್ತದೆ.[೩೬]

ತಿ. ನಂ. ಶ್ರೀಯವರು ಹೇಳುವಂತೆ ವಚನಗಳ ದುಂಬಿ ಪದ್ಯದಷ್ಟು ಬಿಗಿಯೂ ಅಲ್ಲ. ಸಾಮಾನ್ಯ ಗದ್ಯದಷ್ಟು ಸಡಿಲವೂ ಅಲ್ಲ. ಸ್ಪಷ್ಟವಾಗಿ ವಿಚಾರಿಸಿದರೆ ಗದ್ಯ ಪದ್ಯದ ನಡುವಿನ ಒಂದು ಮಾದರಿ ಇಷ್ಟೆ ವಾದ. ಇಂಥವೇ ಗಣವೆಂಬ ನಿಯಮವಿಲ್ಲದ ಅಂಶಗಣ ಅಥವಾ ಮಾತ್ರಾಗಣ ಭಾವಕ್ಕೆ ತಕ್ಕಂತೆ ಹಿರಿದಾಗಿ, ಕಿರಿದಾಗಿ ಒದಗುತ್ತದೆ. ಈ ವಚನಗಳನ್ನು ಹಾಡುವ ದನಿಯಲ್ಲಿ ಬರೆದರೆ ? ಹಾಡುತ್ತಿದ್ದರೆ? ಎಂಬ ಹೂಹೆಗೆ ಅವಕಾಶವಿದೆ. ಬಸವಣ್ಣನು "ಆನು ಒಲಿವಂತೆ ಹಾಡುವೆ" ಎಂದಿದಾನೆ. ಅರವತ್ತೊಂದು ಸಹಸ್ರ ವಚನಗಳ ಹಾಡಿ ಹಾಡಿ ಸೋತಿತೆನ್ನ ಮನ ನೋಡಯ್ಯ. ಆದರೆ ವಚನಗಳು ಗೀತ ಜಾತಿಗೆ ಸೇರಿದವುಗಳಲ್ಲಿ ಅವು ಸೂಕ್ಷ್ಮ ಸ್ವಚ್ಛಂದ ಲಯದ ಗದ್ಯ ಕವನಗಳು ಶರಣರ ಈ ಅನುಭವ ಗದ್ಯದಲ್ಲಿ ಭಾವಗೀತೆಯ ಮೂಲ ಪ್ರೇರಣೆಯಿದೆ. ಪದ್ಯದ

---

೩೬ : ಶರಣ ದಾಸರ ಭಕ್ತಿ, ಪುಟ : ೯ – ಎಸ್. ಬಿ. ಉತ್ನಾಳ

ಸೊಗಸನ್ನು ಗದ್ಯದ ವಿಚಾರ ಸರಣಿಯನ್ನು ತುಂಬಿಕೊಂಡ ಲಯಬದ್ಧ ಷಟಸ್ಥಲ ಸ್ಫಟಿಕ ಶಲಾಕೆಗಳು.

ಶರಣರು ತಮ್ಮ ಪರಿಸರದೊಂದಿಗೆ ಸ್ಪಂದಿಸಿದ ಕ್ರಿಯೆಯ ಫಲವೇ ವಚನಗಳು. ಅವು ಮೂಲತಃ ಪ್ರತಿಭವನಾತ್ಮಕವಾಗಿವೆ. ಅವುಗಳ ಒಟ್ಟು ಉದ್ದೇಶ ನವಸಮಾಜೋದ್ಧಾರ ನಿರ್ಮಾಣ ಮಾಡುವುದಾಗಿದೆ. ವಚನಗಳ ಮೂಲಕ ಇವರು ಆ ಕಾಲದ ಇಡೀ ಜೀವನವನ್ನೇ ಕಲಕಿದರು. ಅವರಿಗೆ ಆಂದೋಲನವೆಂದರೆ ಹೊಸ ಜೀವನ, ಹೊಸ ಜೀವನವೆಂದರೆ ಜನ ಆಲೋಚಿಸುವಂತೆ ಮಾಡುವುದು. ಆಲೋಚಿಸುವಂತೆ ಮಾಡಬೇಕಾದರೆ ಆತ್ಮವಿಶ್ವಾಸ ಮೂಡಿಸಬೇಕು. ದೇವಸ್ಥಾನಗಳ ನಿರಾಕರಣೆ, ಎಲ್ಲಾ ಜಾತಿ ಒಂದೇ ಎಂಬ ಅರಿವು, ಸಮಯ ಬಂದರೆ ಪ್ರಭುತ್ವವನ್ನು ಧಿಕ್ಕರಿಸುವುದು. ಇಂತಹ ವಿಚಾರಗಳು ಹಳೆಯ ಪರಂಪರೆಗೆ ಸಿಡಿಮದ್ದಾಗಿ ಪರಿಣಮಿಸಿದವು. ಇಡೀ ವ್ಯವಸ್ಥೆಯೇ ಬೇರು ಸಹಿತ ಅಲುಗಾಡುವಂತಾಯಿತು. ಹೊಸ ಚೈತನ್ಯ ಮೂಡಿತು. ಈ ಆತ್ಮವಿಶ್ವಾಸದ ಫಲವಾಗಿಯೇ ಅತ್ಯಂತ ಸಾಮಾನ್ಯ ವರ್ಗದ ಜನರು ನಾನಾ ಬಗೆಯ ಕೆಲಸಗಾರರು ನೂರಾರು ಪುರುಷರು ಸ್ತ್ರೀಯರು ಸಾಮೂಹಿಕವಾಗಿ ವಚನ ಪ್ರಕ್ರಿಯೆಯಲ್ಲಿ ಪಾಲ್ಗೊಂಡರು. ಒಂದು ವಿಧದಲ್ಲಿ ವಚನವು ಸಾಮೂಹಿಕ ಅಭಿವ್ಯಕ್ತಿ ಹೌದು. ವಚನವು ಒಂದು ಆಧ್ಯಾತ್ಮ ಶಾಸ್ತ್ರ, ಸಂಸ್ಕೃತದಲ್ಲಿದ್ದ ಈ ಶಾಸ್ತ್ರಕ್ಕೆ ಜನವಾಣಿಯನ್ನು ಕೊಟ್ಟವರು ವಚನಕಾರರು. ಆಧ್ಯಾತ್ಮ, ಧರ್ಮ, ನೀತಿ, ದೇವರು ಮುಂತಾದ ತತ್ವಗಳನ್ನು ಸುಲಭ ನುಡಿಗಳಲ್ಲಿ ನಿರೂಪಿಸಿ ಕನ್ನಡದ ಉಪನಿಷತ್ತುಗಳೆಂದು ವಚನಗಳನ್ನು ಸಾರ್ಥಕಗೊಳಿಸಿದರು. ಮಾನವ ಪ್ರೇಮ, ನೀತಿ, ನಿಷ್ಠೆ, ಶಿವಭಕ್ತಿ ಸಮಾನ ಭಾವ, ಆತ್ಮ ಪರಿವೀಕ್ಷಣೆ ಮುಂತಾದ ಭಾವಗಳಿಂದ ತುಂಬಿದ ಹೊಸ ಸಮಾಜವನ್ನು ವ್ಯವಸ್ಥೆಗೊಳಿಸುವದು ಅವರ ಉದ್ದೇಶವಾಗಿತ್ತು.

~ ~ ~ ~ ~

ಅಧ್ಯಾಯ – ೩ :

ದಾಸರ ಭಕ್ತಿ

ಅಧ್ಯಾಯ – ೩ :

ದಾಸರರ ಭಕ್ತಿ

ದಾಸ ಭಕ್ತಿಯ ಉಗಮ :

ಶುದ್ಧ ವೈದಿಕರಾಗಿದ್ದು ಕನ್ನಡವನ್ನು ಮೊಟ್ಟಮೊದಲಿಗೆ ಇಷ್ಟೊಂದು ವಿಸ್ತೃತ ಪ್ರಮಾಣದಲ್ಲಿ ವಿಚಾರ ಮಧ್ಯಮವಾಗಿ ಬಳಸಿದ ಕೀರ್ತಿ ಹರಿದಾಸರಿಗೆ ಸಲ್ಲುವುದು. ೧೫–೧೬ ನೇ ಶತಮಾನ ವಿಜಯನಗರ ಸಾಮ್ರಾಜ್ಯದ ಉಚ್ಛ್ರಾಯದ ಕಾಲ. ವಿಜಯನಗರದ ಈ ಸುಖ ಸಮೃದ್ಧಿಯ ಕಾಲದಲ್ಲಿ ವೈರಾಗ್ಯವನ್ನು ವಿರಕ್ತಿಯನ್ನು ಬೋಧಿಸುವ ದಾಸ ಪಂಥ ಕಾಣಿಸಿಕೊಂಡದ್ದು ಅರ್ಥಪೂರ್ಣವಾಗಿ ತೋರುವುದು ಸಾಮ್ರಾಜ್ಯದ ಈ ಏರಿನಲ್ಲಿ ಭೋಗಸಕ್ತ ಸುಖಲೋಲುಪ್ತರಾದ ಜನತೆಯ ಅಧಃಪತನದ ಅರಿವು ವಿಚಾರವಂತರ ಹೊಸ ಎಚ್ಚರಕ್ಕೆ ಕಾರಣವಾಗಿರಬೇಕು. ಈ ಎಚ್ಚರ ಪುರಂದರಾದಿ ಅನೇಕ ದಾಸರ ಹಾಡುಗಳಲ್ಲಿ ನಿಚ್ಚಳವಾಗಿ ವ್ಯಕ್ತವಾಗುತ್ತದೆ. ದಾಸ ಪಂಥದ ಭಕ್ತಿಯ ತನ್ಮಯತೆಗೆ ನಿರಾತಂಕವಾದ ಸುರಕ್ಷಿತ ಸಮಾಜದ ಸ್ಥಿತಿಯೂ ಕಾರಣವಾಗಿರಬಹುದು.

ಕೃಷ್ಣ ದೇವರಾಯನ ಕಾಲದಲ್ಲಿ ವೈಷ್ಣವ ಆಚಾರ್ಯರಾದ ವ್ಯಾಸರಾಯರು ರಾಜಗುರುಗಳಾಗಿದ್ದರು. ನರಹರಿ ತೀರ್ಥರಿಂದ ಪ್ರಾರಂಭವಾದ ಕೀರ್ತನೆ ಪರಂಪರೆಯನ್ನು ಮುಂದುವರಿಸಿದವರೇ ಈ ವ್ಯಾಸರಾಯರು. ಇವರು ವ್ಯಾಸಕೂಟ ದಾಸಕೂಟಗಳನ್ನು ಪ್ರಾರಂಭಿಸಿ ಮದ್ವಮತ ಪ್ರಚಾರಕ್ಕೆ ಪ್ರಧಾನ ಕಾರಣರಾದರು.

ವ್ಯಾಸರಾಯರಿಗೆ ವಿಜಯನಗರದ ಆಸ್ಥಾನದಲ್ಲಿ ಇದ್ದ ಗೌರವ ಪ್ರಶಸ್ತಿಗಳು ಈ ದೆಸೆಯಲ್ಲಿ ತುಂಬಾ ಸಹಾಯಕವಾಗಿರಬೇಕು.

ವೈದಿಕ ಧರ್ಮದ ಆದ್ಯ ಗ್ರಂಥಗಳಾದ ವೇದೋಪನಿಷತ್ತು, ಕಾವ್ಯ ಪುರಾಣಗಳಿಗೆ ಮಧ್ವ ಸಿದ್ಧಾಂತದ ಪ್ರಕಾರ ವ್ಯಾಖ್ಯಾನ ಮಾಡಿ ವೈದಿಕ ಧರ್ಮವನ್ನು ಪುನಃ ಪ್ರತಿಷ್ಠಿಸುವುದು. ವೈದಿಕ ಧರ್ಮದ ಕರ್ಮಕಾಂಡಗಳನ್ನು ತೊಡೆದು ಜನಸಾಮಾನ್ಯರನ್ನು ಭಕ್ತಿ ಪಂಥದ ಕಡೆ ಆಕರ್ಷಿಸುವುದು, ವ್ಯಾಸರಾಯರ ಮತ್ತು ಅವರ ಅನುಯಾಯಿಗಳ ಮುಖ್ಯ ಉದ್ದೇಶವಾಗಿದ್ದರೂ ಸ್ವಧರ್ಮ ಪ್ರಚಾರದೊಂದಿಗೆ ಪರಧರ್ಮ ಸಂಹಿಷ್ಣುತೆ ಈ ಪಂಥದ ವೈಶಿಷ್ಟ್ಯವಾಗಿತ್ತು.

ಮದ್ವ ಸಂಪ್ರದಾಯದ ಕೀರ್ತನೆಗಳಿಗೆ ಮೂಲ ಪ್ರೇರಣೆ ಮದ್ವಾಚಾರ್ಯರ ದ್ವಾದಶ ಸೂತ್ರದಲ್ಲಿದೆ ಎಂಬುದು ಅನೇಕ ವಿದ್ವಾಂಸರ ಮತ. ಮದ್ವಾಚಾರ್ಯರ ಶಿಷ್ಯರಾದ

ನರಹರಿ ತೀರ್ಥರು ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿದ ಮೊದಲ ಹರಿದಾಸರು. ಮದ್ವಾಚಾರ್ಯರ ಪ್ರಮುಖ ನಾಲ್ವರು ಶಿಷ್ಯರು ೧] ಪದ್ಮನಾಭ ತೀರ್ಥ ೨] ನರಹರಿ ತೀರ್ಥ ೩] ಮಾಧವ ತೀರ್ಥ ೪] ಅಕ್ಷೋಭ್ಯ ತೀರ್ಥ ಇವರು ಪ್ರಮುಖರಾಗಿದ್ದರು[೩೭] ಎಂದು ಉತ್ನಾಳರವರು ತಮ್ಮ ಲೇಖನಲದಲ್ಲಿ ತಿಳಿಸಿದ್ದಾರೆ.

ದಾಸಕೂಟದ ಸದಸ್ಯರು ಅಸಂಖ್ಯಾತ ಕೀರ್ತನೆ, ಸುಳಾದಿ ಉಗಾಬೋಗಗಳನ್ನು ರಚಿಸಿದ್ದು ಮಾತ್ರವಲ್ಲ, ಅದನ್ನು ಜನತೆಗೆ ತಲುಪಿಸಲಿಲ್ಲ. ವೃತ್ತ ಪತ್ರಿಕೆ, ಮುದ್ರಣ ವ್ಯವಸ್ಥೆ ಮೊದಲಾದ ಸಮೂಹ ಮಾಧ್ಯಮಗಳ ಅಭಾವವಿದ್ದ ಆ ಕಾಲದಲ್ಲಿ ಸುವ್ಯವಸ್ಥಿತವಾದ ಕೆಲವು ಕ್ರಮಗಳನ್ನು ಅನುಸರಿಸಿದರು. ದೀಕ್ಷೆಯನ್ನು ಸ್ವೀಕರಿಸಿದ ನಂತರ ದಾಸರಿಗೆ ಜನ ಸಾಮಾನ್ಯರಿಂದ ತಟ್ಟನೆ ಭಿನ್ನವಾಗಿ ತೋರುವ ವಿಶಿಷ್ಟವಾದ ಉಡುಪು ಗೊವಂಚು ಮುಡಿಯುಟ್ಟು, ದುಂಡು ತಂಬಿಗೆ ಹಿಡಿದು ಕೊರಳಲ್ಲಿ ತುಳಸಿ ಮಾಲೆ ಧರಿಸಿ ಹಣೆಗೆ ನಾಮವಿಟ್ಟು ತಂಬೂರಿ ಮೀಟುತ್ತಾ ಪದಗಳನ್ನು ಹಾಡುತ್ತಾ ಭಕ್ತಿ ಸಂದೇಶವನ್ನು, ನೈತಿಕ ಎಚ್ಚರವನ್ನು ಮನೆ ಮನೆಗೆ ಮುಟ್ಟಿಸುತ್ತಾ ಹರಿದಾಸರು ಗೀತ ನರ್ತನದಿಂದ ನಿತ್ಯ ಯಾತ್ರೆಯನ್ನು ಮಾಡುವುದು ಆ ಕಾಲದಲ್ಲಿ ಸಾಮಾನ್ಯವಾಗಿ ಕಂಡು ಬರುವ ದೃಶ್ಯವಾಗಿದ್ದಿರಬಹುದು. ಅಂದಿಗೆ, ಕಿರುಗೆಜ್ಜೆ ಮುಂಗಾಲಲಗಳವಟ್ಟು ಧಿಂಧಿಮಿಧಿಮಕೆಂದು ಕುಣಿಯುತ್ತಾ ಮಹಾಭಾರತ ರಾಮಾಯಣ ಪುಣ್ಯ ಕಾವ್ಯಗಳ ಸಾರಸತ್ವದ ಬಂದುವನ್ನು ಜನತೆಗೆ ತಲುಪಿಸಲು ದಿನಬೆಳಗಾದರೆ ಅವರು ಪ್ರಯತ್ನ ಮಾಡುತ್ತಿರಬೇಕು. ಒಂದು ಸಾಮಾಜಿಕ ಉದ್ದೇಶಕ್ಕಾಗಿ ತಮ್ಮ ಇಡೀ ಬದುಕನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡ ವ್ಯವಸ್ಥಿತ ಪಡೆಯೇ ಈ ದಾಸಸಾಹಿತ್ಯ.

ಈ ದಾಸಕೂಟ ಪಡೆಯಲ್ಲಿಯೇ ಬರುವಂತಹ ಶ್ರೀವಾದಿರಾಜರು ವಾದ ಮಾಡಲು ಅತ್ಯಂತ ಪ್ರವೀಣರೆನಿಸಿದರು ಸಂಸ್ಕೃತದಲ್ಲಿ ಮುಕ್ತಿ ಮಲ್ಲಿಕಾ ಸರಸ, ಭಾರತಿವಿಲಾಸ ರುಕ್ಮಿಣೇಶ ವಿಜಯ ತೀರ್ಥ ಪ್ರಬಂಧದ ದಶಾವತಾರ ಸ್ತೋತ್ರ ರಚಿಸಿದ್ದಾರೆ. ಕನ್ನಡದಲ್ಲಿಯೂ "ವೈಕುಂಠ ವರ್ಣನೆ" "ಲಕ್ಷ್ಮೀಯ ಶೋಭಾನೆ" ಭಾರತ ತಾತ್ಪರ್ಯ ನಿರ್ಣಯ ಟೀಕೆ ಇತ್ಯಾದಿ ಗ್ರಂಥಗಳನ್ನು ರಚಿಸಿದ್ದಾರೆ.

ವಾದಿರಾಜರು "ಹಣವೆ ನಿನ್ನಯ ಗುಣವೆನಿತು ಬಣ್ಣಿಸಲಿ"[೩೮] ಎಂಬ ಕೀರ್ತನೆ ಬಹು ಪ್ರಸಿದ್ದವಾದುದು ಎಂದು ಜನಸಾಮಾನ್ಯರಿಗೂ ಸರಳವಾಗಿ ಪರಿಚಯಿಸಿಕೊಟ್ಟಿದ್ದಾರೆ.

---

೩೭ : ಶರಣ ದಾಸರ ಭಕ್ತಿ – ಎಸ್. ಬಿ. ಉತ್ನಾಳ, ಪುಟ : ೧೬
೩೮ : ಶರಣ ದಾಸರ ಭಕ್ತಿ, ಪುಟ : ೯ – ಎಸ್. ಬಿ. ಉತ್ನಾಳ

ಕೀರ್ತನ ಸಾಹಿತ್ಯದ ಸ್ವರೂಪ :

ಹರಿದಾಸರ ಕೀರ್ತನ ಸಾಹಿತ್ಯಕ್ಕೆ ಮಧ್ವಾಚಾರ್ಯರು ಪ್ರತಿಪಾದಿಸಿದ ದ್ವೈತ ಸಿದ್ಧಾಂತವೇ ಮುಖ್ಯ ಪ್ರೇರಣೆಯಾಗಿದೆ. ಇವರು ವೈದಿಕ ಪರಂಪರೆಯನ್ನು ಒಪ್ಪಿಕೊಂಡು, ಸಮಾಜದ ಮಧ್ಯ ಸಂಚರಿಸಿದರು. ವೇದ ಉಪನಿಷತ್‌ಗಳನ್ನು ತಿರುಳುಗನ್ನಡದಲ್ಲಿ ಪ್ರತಿಪಾದಿಸಿದರು. ಅಲ್ಲಿನ ಗಹನ ತತ್ವಗಳನ್ನು, ಆಧ್ಯಾತ್ಮ ರಹಸ್ಯಗಳನ್ನು ಸರಳ ಸುಲಭ ರೀತಿಯಲ್ಲಿ ಜನ ಸಾಮಾನ್ಯರಲ್ಲಿ ಅನಾವರಣಗೊಳಿಸಿದವರು ಹರಿದಾಸರು.

ಈ ದಾಸ ಸಾಹಿತ್ಯವು ಪಂಪಯುಗದಲ್ಲಿಯೇ .ಅಚಲಾನಂದರ ಪದ, ಉಗಾಭೋಗಗಳಿಂದಲೇ ಆರಂಭವಾಯಿತೆಂಬ ಬೇಲೂರು ಕೇಶವದಾಸರ ಅಭಿಪ್ರಾಯವನ್ನು ಸಂಪೂರ್ಣವಾಗಿ ಒಪ್ಪದೇ ಇದ್ದರೂ, ೧೨ ನೇ ಶತಮಾನದಿಂದ ಇಲ್ಲಿಯವರೆಗೆ ದಾಸ ಸಾಹಿತ್ಯವು ಸತ್ವಯುತವಾಗಿಯೇ ಬೆಳೆದು ಬಂದಿದ್ದು ಮಾನವ ಧರ್ಮವನ್ನು ಜಾಗೃತಗೊಳಿಸುತ್ತ ಸಾಗಿರುವದನ್ನು ಅಲ್ಲಗಳೆಯುವಂತಿಲ್ಲ.

ಜನಪ್ರಿಯತೆ, ಜನ ಸಮ್ಮುಖತೆ ದಾಸ ಸಾಹಿತ್ಯದ ಪ್ರಮಾಣ ಲಕ್ಷಣಗಳು. ಕೀರ್ತನೆ-ಸುಳಾದಿ-ಉಗಾಭೋಗದಂತಹ ಕಾವ್ಯ ರೂಪಗಳ ಮೂಲಕ ಅಭಿವ್ಯಕ್ತಗೊಂಡ ದಾಸ ಸಾಹಿತ್ಯಕ್ಕೆ ಕರ್ನಾಟಕದಲ್ಲಿ ಬಹುದೊಡ್ಡ ಪರಂಪರೆ ಇದೆ. ಇದನ್ನು ರಾ.ಸ್ವ. ಪಂಚಮುಖಿಯವರು ನಾಲ್ಕು ಘಟ್ಟಗಳಲ್ಲಿ ಪ್ರಸ್ತಾಪಿಸಿದ್ದಾರೆ.

೧) ಮದ್ವಾಚಾರ್ಯರು ಹಾಗೂ ಅವರ ಶಿಷ್ಯರಾದ ನರಹರಿ ತೀರ್ಥರು.

೨) ಕೃಷ್ಣದೇವರಾಯನ ಕಾಲದಲ್ಲಿನ ಪುರಂದರ ದಾಸರು, ಕನಕದಾಸರು, ವ್ಯಾಸರಾಯರ ಗುರುತ್ವದಲ್ಲಿನ ಸಾಹಿತ್ಯ.

೩) ವಿಜಯದಾಸರು ಮುಂತಾದವರು.

೪) ಆಧುನಿಕ ಸಂದರ್ಭ ಎನ್ನಲಾಗಿದೆ.

ಮೊದಲನೇ ಘಟ್ಟವು ದಾಸ ಸಾಹಿತ್ಯದ ಶ್ರೀಮಂತ ಕಾಲ. ದಾಸರು ಬರೆದಂತೆ ಬದುಕಿದರು. ನುಡಿದಂತೆ ನಡೆದರು. ದಾಸ ಸಾಹಿತ್ಯದ ಸಂಪತ್ತನ್ನು ಕಲೆ ಹಾಕಲು ಪ್ರಯತ್ನಿಸಿದವರೆಂದರೆ ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರು. ಪ್ರಥಮ ಬಾರಿಗೆ ಸಂಗ್ರಹಿಸಿ ಪ್ರಕಟಿಸಿದರು. ಈ ಸಂದರ್ಭದಲ್ಲಿ ಇವರು ನಾಲ್ಕು ನೂರಕ್ಕೂ ಹೆಚ್ಚಿನ ಪದಗಳನ್ನು/ಕೀರ್ತನಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿ ಒಂದು ನೂರು ಪದಗಳನ್ನು ಆಯ್ದುಕೊಂಡು ದಾಸರ ಪದಗಳು ಎಂಬ ಹೆಸರಿನಿಂದ ಕ್ರಿ.ಶ. ೧೮೫೦ ರಲ್ಲಿ ಪ್ರಕಟಿಸಿದರು.

ಉಡುಪಿಯ ಪಾವಂಜೆ ಗುರುರಾಯರು 'ಉದಯರಂಗವು" ಎಂಬ ಸಂಗ್ರಹವನ್ನು ಪ್ರಕಟಿಸಿದರು. ಲಿಂಗಸೂಗೂರಿನ ಗೊರೆಬಾಳ ಹಣಮಂತರಾಯರು, ವರದೇಂದ್ರ ಸಾಹಿತ್ಯ ಮಾಲೆಯನ್ನು ಪ್ರಾರಂಭಿಸಿ ಪ್ರಮುಖ ಕೃತಿಗಳನ್ನು ಹೊರತಂದರು.

ನವ ವಸಾಹತುಶಾಹಿ ಆಕ್ರಮಣದ ಈ ಸಂದರ್ಭದಲ್ಲಿ ನಮ್ಮ ಸಾಂಸ್ಕೃತಿಕ ನೆಲೆಗಳನ್ನು ಉಳಿಸಿಕೊಳ್ಳಬೇಕಾದುದು ಅತ್ಯವಶ್ಯಕವಾಗಿದೆ. ದಾಸ ಸಾಹಿತ್ಯ-ತಾಳ್ಮೆ-ಸಹನೆ ಪ್ರೀತಿ-ವಾತ್ಸಲ್ಯ-ಪರೋಪಕಾರ ತ್ಯಾಗದಂತಹ ಮೌಲ್ಯಗಳನ್ನು ಸ್ಥಾಪಿಸಿದ ಭಕ್ತಿಪಂಥಗಳು, ಜಾಗತೀಕರಣಕ್ಕೆ ಹಾಗೂ ಪಾಶ್ಚಾತ್ಯ ಸಂಸ್ಕೃತಿಗೆ ಪರ್ಯಾಯ ಶಕ್ತಿಗಳಾಗಿ ಬೆಳೆಯುವ ಸಾಧ್ಯತೆಗಳನ್ನು ಕಾಣಬಹುದಾಗಿದೆ.

"ತಲ್ಲಣಿಸದಿರು ಕಂಡ್ಯ ತಾಳು ಮನವೆ" ಎನ್ನುವ ಕನಕದಾಸರ ನುಡಿ, ಈಸಬೇಕು ಇದ್ದು ಜಯಿಸಬೇಕು ಎನ್ನುವ ಪುರಂದರ ದಾಸರ ಮಾತು, ನಮ್ಮಲ್ಲಿ ಸಹನೆಯನ್ನು ಬೆಳೆಸಿ, ಆತ್ಮವಿಶ್ವಾಸವನ್ನು ಹುಟ್ಟಿಸುತ್ತವೆ. "ಕೆರೆಯ ನೀರನ್ನು ಕೆರೆಗೆ ಚೆಲ್ಲಿ" ಎನ್ನುವ ಕೀರ್ತನೆಯಲ್ಲಡಗಿರುವ ತೀವ್ರತೆಯಲ್ಲಿ ಸಾಮಾಜಿಕ ಕಾಳಜಿ ಗಮನಿಸುವಂತದ್ದಾಗಿದೆ. 'ತಿಳುವಿಕೆಗಿಂತ ತಪವು ಇಲ್ಲ" ಎನ್ನುವ ವಾದಿರಾಜರು "ಸತ್ಯದ ನಡೆ ಹಿಡಿರೋ ಮನುಜರ" ಎನ್ನುವ ಮಹಿಪತಿದಾಸರು, "ಏನಾದರೇನು ಜ್ಞಾನವಿಲ್ಲದೆ" ಎಂದು ಹೇಳುವ ವಿಜಯದಾಸರು ಇಂದು ತುಂಬಾ ಪ್ರಸ್ತುತರಾಗುತ್ತಾರೆ. "ಇರಬೇಕು ನಿಂದಕರು ಸಜ್ಜನರಿಗೆ" ಎಂದು ವಿವರಿಸುವ ಜಗನ್ನಾಥರು ಬದುಕಿನ ಸಾಧ್ಯತೆಗಳನ್ನು ಹೆಚ್ಚಿಸುವವರಾಗಿದ್ದಾರೆ.[೨೯]

ಕೀರ್ತನೆ :

ಕೀರ್ತನೆಗಳು ಅಥವಾ ಪದಗಳೆಂದರೆ ಅದರಲ್ಲಿ ಆತ್ಮ ನಿವೇದನೆ, ಸ್ತೋತ್ರ, ಉಪದೇಶ, ತತ್ವ, ಅನುಭವ ಇತ್ಯಾದಿ ವಿಷಯ ವೈವಿಧ್ಯತೆಗಳು ಸಮಾವೇಶಗೊಳ್ಳುತ್ತವೆ. ಇದರಲ್ಲಿ ಜಾನಪದ ಜಾಡಿನ ಎಲ್ಲ ಛಂದೊವೈವಿಧ್ಯಗಳನ್ನು ಹೃದ್ಯವಾಗಿ ಕಾಣಬಹುದಾಗಿದೆ. ಇಲ್ಲೆಲ್ಲ ಪಲ್ಲವಿ, ಅನುಪಲ್ಲವಿ, ಚರಣಗಳು ಇದ್ದು, ಭಕ್ತಿ ಭಾವವು, ಸಂಗೀತ ಸಹಚರ್ಯದಲ್ಲಿ ಸಾಕ್ಷಾತ್ಕಾರದ ಅನುಸಂಧಾನಕ್ಕೆ ಅನುವು ಮಾಡಿಕೊಡುತ್ತವೆ. ದಾಸರು ಬಾಮಿನಿ, ವಾರ್ಧಕ, ಕರ ಷಟ್ಪದಿಗಳಲ್ಲಿ, ತ್ರಿಪದಿಗಳಲ್ಲಿ, ಕೀರ್ತನೆ ಬರೆದಿದ್ದಾರೆ. ಹರಿಭಕ್ತಿ ಹಾಗೂ ಮಧ್ವ ತತ್ವದ ಪ್ರತಿಪಾದನೆಯೇ ಕೀರ್ತನೆಗಳ ಪ್ರಮುಖ ಆಶಯುವಾಗಿದೆ. ಕೀರ್ತನೆಗಳು ಉಗಬೋಗಗಳಿಗಿಂತ ಬಿಗಿಯಾಗಿ, ಸುಳಾದಿಗಳಿಗಿಂತ ಸರಳವಾದ ವಿಧ ಎನ್ನಲಾಗಿದೆ.

---

೨೯ : ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ – ಡಾ. ಸಿ. ಚಿ. ಲಿಂಗಣ್ಣ, ಪುಟ : ೫೫

ಸುಳಾದಿ :

ಸುಳಾದಿಯೆಂದರೆ ಸೂಡಾಲಿ, ವಾದ್ಯ ನರ್ತನೆಗಳಿಗೆ ಉಪಯುಕ್ತವಾದುದು ಮದ್ವ ರೂಪಕ. ಝುಂಫ, ತ್ರಿಪುಟ, ಅಟ್ಟ, ಏಕತಾಳ – ಸಾಮಾನ್ಯವಾಗಿ ಈ ಸಪ್ತ ತಾಳಗಳಿಗೆ ಏಳು ನುಡಿಗಳಿದ್ದು ಕೊನೆಯಲ್ಲಿ ಜತೆ ಜತ್ತ ಅರ್ಥಾತ್ ಜೊತೆ ಇರುತ್ತದೆ. ಕೆಲವೆಡೆ ಐದು ನುಡಿಗಳೂ ಇರುತ್ತವೆ. ಇದು ಲಯಪ್ರಧಾನ ಗೀತೆ ಸುಳಾದಿಗಳು ಕೀರ್ತನೆ ಮತ್ತು ಉಗಾಬೋಗಗಳಿಗಿಂತ ಬಿಗಿಯಾದ ಬಂಧವನ್ನು ಹೊಂದಿವೆ. ಸಾಹಿತ್ಯದ ಚೌಕಟ್ಟುಗಳಲ್ಲಿ ತತ್ವ ನಿರೂಪಣೆ ಇವುಗಳು ಸುಳಾದಿಗಳಲ್ಲಿ ಪ್ರಮುಖ ವೈಶಿಷ್ಟ್ಯವಾಗಿವೆ. ಸಾಮಾನ್ಯವಾಗಿ ಎಲ್ಲ ದಾಸರು ಸುಳಾದಿಗಳ ಮೇಲೆ ಕೈಯಾಡಿಸಿದ್ದರೂ ವಿಜಯದಾಸರು ಸುಳಾದಿಯ ದಾಸರೆಂದೇ ಖ್ಯಾತಿ ಪಡೆದಿರುವುದುಂಟು. ಸುಳಾದಿಗೆ ಒಂದು ಉದಾಹರಣೆ.

ಧ್ರುವತಾಳ : "ಹುಟ್ಟುವ ಭೀತಿ ಹೊಂದುವ ಭೀತಿ
ವಿಠ್ಠಲಲನುಪ್ರಿಯೆ ನೆನೆಯದವಗೆ
ಕಾಲನಭೀತಿ ಕರ್ಮದ ಭೀತಿ ಗೋಪಾಲನ ದಾಸನಾಗದವಗೆ
ಅರಿಷಡ್ವರ್ಗದ ಮಹಾಭೀತಿ ಹರಿನಾಮ ಉಚ್ಚರಿಸದವಗೆ
ಹಲವು ಮಾತಿನಲೇನು ಹಲವು ಭೀತಿ ನಮ್ಮ ಪುರುಂದರ ವಿಠಲನ
ಪೂಜಿಸದವಗೆ"[೪೦]

ಉಗಾಬೋಗ :

ಕೀರ್ತನ ಸಾಹಿತ್ಯದಲ್ಲಿ ಕಂಡುಬರುವ ಮತ್ತೊಂದು ಪ್ರಕಾರ ಇದಾಗಿದೆ. ಉಗಾಬೋಗಗಳ ಮುಖ್ಯ ಲಕ್ಷಣ ರಾಗ–ತಾಳಗಳ ಕಟ್ಟಿನಿಂದ ಮುಕ್ತವಾಗಿರುವುದು. ಇವು ಶಿವಶರಣರ ವಚನಗಳನ್ನು ಬಹುಮಟ್ಟಿಗೆ ಹೋಲುತ್ತದೆ. ಇದು ಸ್ವರ ಪ್ರಧಾನ ಗೀತ, ಉದ್ಗಾಹ, ಮೋಲಾಪ, ಧ್ರುವ, ಅಂತರ, ಅಭೋಗ ಇವು ಐದು ರಾಗ ಗೀತದ ಅವಯವಗಳು. ಉಗಾಬೋಗಗಳಿಗೆ ಇಷ್ಟೇ ಪಾದಗಳಿರಬೇಕೆಂಬ ನಿಯಮವಿಲ್ಲ.

ಉದಾ : "ಜಾಲಿಸಬೇಕು ಜಾಲಿಸಬೇಕು ಜಾಲಿಸಬೇಕು । ಜಾಲಗಾರನಾಗಿ
ಜಾಲ ಪರಪಂಗಳು ಕೋಪ ಪೋಗುವಂತೆ ಜಾಲಿಸಬೇಕು
ಜಾಲಿಸಿ ಒಳ್ಳೆ ವಸ್ತ್ರ ಸಂಪಾದಿಸಿ
ಜಾಳಿಗೆ ಚೆನ್ನಾಗಿ ತುಂಬಲು ಮಾಯಾ
ಜಾಲ ವಿಜಯ ವಿಠಲನ ಸನ್ನಿಧಿಯಲ್ಲಿ
ಜಾಳಿಗೆಯಿಟ್ಟು ಜನನ ನೀಗಬೇಕು"[೪೧]

---

೪೦ : ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ – ಡಾ. ಸಿ. ಚಿ. ಲಿಂಗಣ್ಣ, ಪುಟ : ೫೬
೪೧ : ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ – ಡಾ. ಸಿ. ಚಿ. ಲಿಂಗಣ್ಣ, ಪುಟ : ೫೭

ಹೀಗೆ ದಾಸ ಸಾಹಿತ್ಯದಲ್ಲಿ ಕೀರ್ತನಕಾರರು ವಿಶಿಷ್ಟವಾದಂತಹ ಸುಳಾದಿ, ಉಗಾಬೋಗಗಳಂತಹ ಸಾಹಿತ್ಯ ಪ್ರಕಾರಗಳನ್ನು ಬಳಸಿಕೊಂಡು ತಮ್ಮ ದೈವ ಭಕ್ತಿಯ ಮೂಲಕ ಹೊಸ ಸಮಾಜವನ್ನು ನಿರ್ಮಾಣ ಮಾಡುವತ್ತ ತಮ್ಮ ಚಿತ್ತ ಹರಿಸಿದರು ಎಂಬುದನ್ನು ಉತ್ನಾಳರವರು ತಮ್ಮ ಕೃತಿಗಳಲ್ಲಿ ಬಹಳ ಮಾರ್ಮಿಕವಾಗಿ ಕಟ್ಟಿಕೊಟ್ಟಿದ್ದಾರೆ.

~ ~ ~ ~ ~

ಅಧ್ಯಾಯ - ೪ :

ಶರಣ ಹಾಗೂ ದಾಸ ಭಕ್ತಿಯ ತೌಲನಿಕ ಅಧ್ಯಯನ

ಅಧ್ಯಾಯ - ೪ :

ಶರಣ ಹಾಗೂ ದಾಸ ಸಾಹಿತ್ಯದ ತೌಲನಿಕ ಅಧ್ಯಯನ

ಪ್ರವೇಶ :

ಅನುಭವ ಪ್ರಾಮಾಣಿಕ ಅಭಿವ್ಯಕ್ತಿ ವಚನ ಸಾಹಿತ್ಯದ ಮುಖ್ಯ ಗುಣ. ವಚನಗಳು ಶಿವಶರಣರ ಲೌಕಿಕ ಮತ್ತು ಆಧ್ಯಾತ್ಮಿಕ ಜೀವನದ ಅನುಭವಗಳ ಅಭಿವ್ಯಕ್ತಿಯಾಗಿವೆ. ಶಿವಶರಣರ ನಡೆನುಡಿಯಲ್ಲಿ ಒಂದು ಅವಿನಾಭಾವವಾದ ಸಂಬಂಧವಿದೆ. ಅವರು ಹೇಗೆ ಬದುಕಿದ್ದರು ಅದನ್ನೇ ಬರೆದಿದ್ದಾರೆ. ಅಥವಾ ಏನನ್ನು ಬರೆದಿದ್ದಾರೋ ಹಾಗೆ ಬದುಕಿದ್ದಾರೆ. ನಡೆ-ನುಡಿ ಒಂದಾಗಿ ಹೊರಹೊಮ್ಮಿದ್ದರಿಂದ ವಚನ ಸಾಹಿತ್ಯಕ್ಕೆ ಒಂದು ವಿಶೇಷ ಬಿಗುವು. ಕಸವು ವಿಶ್ವಾಸಾರ್ಹತೆ ಪ್ರಾಪ್ತವಾಯಿತು.

ಸರಳತೆ ವಚನಗಳ ಮತ್ತೊಂದು ಮಹತ್ವದ ಗುಣ, ಸಾಹಿತ್ಯದ ಪರಿಕರಗಳಾದ ಪ್ರಾಸ, ಲಯ, ಧ್ವನಿ, ಅಲಂಕಾರಗಳು ಸಹಜವಾಗಿ ಇಲ್ಲಿ ಎಡೆಪಡೆದುಕೊಂಡಿವೆ ಹೊರತು ಪಾಂಡಿತ್ಯ ಪ್ರದರ್ಶನಕ್ಕಾಗಿ ಎಳೆದು ತಂದಿವೆ ಎನಿಸುವುದಿಲ್ಲ. ಅರ್ಥಾಲಂಕಾರ ಶಬ್ದಾಲಂಕಾರ, ಉಪಮಾನ ಮೊದಲಾದ ಅಲಂಕಾರಗಳು ಸಹಜ ಉಕ್ತಿಯಾಗಿ ವಚನಗಳಲ್ಲಿ ಹಾಸುಹೊಕ್ಕಾಗಿ ಹರಡಿಕೊಂಡಿವೆ.

ಶಿವಶರಣರು ಆತ್ಮದೊಂದಿಗೆ ಪರಮಾತ್ಮನೊಂದಿಗೆ ಇಲ್ಲವೆ ಲೋಕದೊಂದಿಗೆ ನಡೆಸಿದ ಅನುಭಾವಿಕ ಸಂವಾದಗಳೆ ವಚನಗಳು. ತಮ್ಮಲ್ಲಿ ಅನುಭಾವ ದೀಪ್ತಿಯನ್ನು, ಅಭಿವ್ಯಕ್ತಿಯ ಅಬಿಪ್ಸೆಯನ್ನು ಬೆಳಗಿಸಿದ ಇಷ್ಟದೈವ ಗುರುವಿನ ಅಂಕಿತವನ್ನು ವಚನಕಾರರು ಪ್ರತಿವಚನದ ಅಂತ್ಯದಲ್ಲಿ ಮುದ್ರೆಯಂತೆ ಬಳಸಿದ್ದಾರೆ.

ಸಾಮಾನ್ಯವಾಗಿ ವಚನಗಳ ಶಿಲ್ಪ ಕಿರಿದು. ಆದರೆ ಅರ್ಥ ಮಾತ್ರ ಹಿರಿದಾಗಿರುತ್ತದೆ; ಪರಿಣಾಮಕಾರಿಯಾಗಿರುತ್ತದೆ..... ಸಿದ್ಧಾಂತ ಪ್ರತಿಪಾದಕವಾದ। ದೀರ್ಘ ವರ್ಣನಾತ್ಮಕವಾದ ಕೆಲವು ವಚನಗಳನ್ನು ಬಿಟ್ಟರೆ ಉಳಿದ ಎಲ್ಲಾ ವಚನಗಳು ಸಾಮಾನ್ಯವಾಗಿ ಚಿಕ್ಕವು. ಆಯಾ ಕಾಲಕ್ಕೆ ಶರಣರಿಗೆ ಅನಿಸಿದ ಒಂದೊಂದು ಭಾವವನ್ನು ಕುರಿತವು.

೧. ಶರಣ ಹಾಗೂ ದಾಸ ಸಾಹಿತ್ಯದಲ್ಲಿ ಭಕ್ತಿ

೨. ವಚನ ಹಾಗೂ ಕೀರ್ತನೆಯಲ್ಲಿ ಸಾಮಾಜಿಕ ಕಾಳಜಿ

೩. ವಚನ ಹಾಗೂ ಕೀರ್ತನೆಗಳಲ್ಲಿ ಸಾಹಿತ್ಯಿಕ ಸೌಂದರ್ಯ ಹಾಗೂ ಸಂಗೀತ ಪ್ರೌಢಿಮೆ

೪. ವಚನ ಹಾಗೂ ದಾಸ ಸಾಹಿತ್ಯದಲ್ಲಿ ಮಹಿಳೆಯರು

ದ್ವೈತ, ಅದ್ವೈತ ಹಾಗೂ ವಿಶಿಷ್ಟಾದ್ವೈತಗಳಲ್ಲಿರುವ ವೈದಿಕ ಸಂಪ್ರದಾಯವನ್ನು ಬದಿಗೊತ್ತಿ ಭಕ್ತಿ ಮಾರ್ಗಕ್ಕೆ ತಿರುಗಿಸಿದವರಲ್ಲಿ ಶರಣರ ನಂತರ ದಾಸರು ಪ್ರಮುಖರು ಭಕ್ತಿ ತತ್ವಗಳನ್ನು ಬೀರುವುದರಲ್ಲಿ ಒಂದು ದೃಷ್ಟಿಯಿಂದ ಶರಣರಿಗಿಂತ ಒಂದು ಹೆಜ್ಜೆ ದಾಸರೇ ಮುಂದೆ ಹೋಗಿದ್ದಾರೆ. ಶರಣರು ಭಕ್ತಿ ತತ್ವದಲ್ಲಿ ಸ್ಥಾನಿಕವಾಗಿ ನೆಲೆನಿಂತು ತಮ್ಮಲ್ಲಿ ಬರುವ ಜಿಜ್ಞಾಸುಗಳಿಗೆ ಹಾಗೂ ಆರ್ತಕರಿಗೆ ಭಕ್ತಿ ರಸವನ್ನು ನೀಡಿದರು. ದಾಸರು ಪರತತ್ವದ ಸವಿಯನ್ನು ತಮ್ಮ ಭಕ್ತಿ ಮಾಡುತ ಮಧುರ ರಸವನ್ನು ಓಣಿ–ಓಣಿಗಳಲ್ಲಿ ಹರಿನಾಮಗಳನ್ನು ಕೊಂಡಾಡುತ್ತ ಭಕ್ತಿ ಪಂಥದ ಹಿರಿಮೆ ಸಾರುತ್ತ ಮನೆ ಮನೆಗೆ ಮುಟ್ಟಿಸುವಲ್ಲಿ ಯಶಸ್ವಿಯಾದರು.

ದಾಸ ಸಾಹಿತ್ಯದ ಸ್ವರೂಪವನ್ನು ಪರಿಶೀಲಿಸಲು ಹೊರಬಂದ ಅನೇಕ ಅಂಶಗಳಲ್ಲಿ ದಾಸ ಸಾಹಿತ್ಯಕ್ಕೂ ವಚನ ಸಾಹಿತ್ಯಕ್ಕೂ ನಿಜವಾದ ಸಾಮಿಪ್ಯವಿರುವಂತೆ ಕಂಡುಬರುತ್ತದೆ. ಇದರಲ್ಲಿ ಆಶ್ಚರ್ಯ ಪಡುವಂತದ್ದು ಏನು ಇಲ್ಲ. ಹರಿದಾಸ ಪಂಥ ಮತ್ತು ಹರಿದಾಸ ಸಾಹಿತ್ಯ ಎರಡೂ ಶರಣ ಚಳುವಳಿ ಮತ್ತು ವಚನ ಸಾಹಿತ್ಯದಿಂದ ಪ್ರೇರಣೆಯನ್ನು ಪಡೆದುಕೊಂಡಿದ್ದವು ಎನ್ನುವುದು ಸುವಿಧಿತವಾಗಿದೆ. ಜನಾಭಿಮುಖಿಯಾದುದರಿಂದಲೇ ವೀರಶೈವ ಚಳುವಳಿ ಅನತಿ ಕಾಲದಲ್ಲಿಯೇ ಜನಪ್ರಿಯವಾದುದನ್ನು ಅರ್ಥಮಾಡಿ ಕೊಂಡಿದ್ದರಿಂದಲೇ ಅದುವರೆಗೆ ಜನಸಾಮಾನ್ಯರನ್ನು ದೂರವಿಟ್ಟಿದ್ದ ವೈದಿಕ ವೈಷ್ಣವ ಪಂಥ ದಾಸ ಪಂಥದ ಮೂಲಕ ಜನಸಾಮಾನ್ಯರನ್ನು ಆಕರ್ಷಿಸಲು ಯತ್ನಿಸಿದ್ದು ದಾಸ ಸಾಹಿತ್ಯವಾದರೂ ಅಷ್ಟೆ. ಶರಣರ ವಚನ ಸಾಹಿತ್ಯವನ್ನು ಮಾದರಿಯಾಗಿಟ್ಟುಕೊಂಡೇ ಅಸ್ತಿತ್ವಕ್ಕೆ ಬಂತು. ಅದುವರೆಗೂ ಸಂಸ್ಕೃತಕ್ಕೆ ಜೋತು ಬಿದ್ದಿದ್ದ ವೈದಿಕ ಸಾಹಿತ್ಯ ಹದಿಮೂರು, ಹದಿನಾಲ್ಕನೆಯ ಶತಮಾನದಲ್ಲಿ ಇದ್ದಕಿದ್ದ ಹಾಗೆಯೇ ಜನ ಭಾಷೆಯ ಕಡೆಗೆ ಚಾಚಿಕೊಳ್ಳತೊಡಗಿತು. ವಚನಗಳಂತೆಯೇ ಹರಿದಾಸ ಕೀರ್ತನೆಗಳ ಭಾಷೆಯೂ ಸಾಮಾನ್ಯ ಜನರನ್ನು ದೃಷ್ಟಿಯಲ್ಲಿರಿಸಿಕೊಂಡು ಅತ್ಯಂತ ಸರಳವಾಗಿ ಬಳಸಲ್ಪಟ್ಟಿತ್ತು, ಮಾನವ ಜನ್ಮ ದೊಡ್ಡದು. ಅದು ಹಾನಿಮಾಡಬೇಡಿರಿ ಹುಚ್ಚಪ್ಪಗಳಿರಾ ಎನ್ನುವಂತಹ ಸರಳವಾದ ಕೀರ್ತನೆಗಳು ರಚನೆಗೊಂಡವು. ಆದರೆ ಭಾಷೆಯ ಸರಳತೆ, ಕಾವ್ಯ ಗುಣಕ್ಕೆ ಬಾಧಕವಾಗಲಿಲ್ಲ. ಅನುಪ್ರಸಾದಿ ಶಬ್ದಾಲಂಕಾರಗಳು ಉಪಮಾ, ರೂಪಕಾದಿ ಅರ್ಥಾಲಂಕಾರಗಳು ಕೀರ್ತನೆಗಳಲ್ಲಿ ಯಥೇಚ್ಚವಾಗಿ ದೊರೆಯುತ್ತವೆ. ಕೀರ್ತನ ಸಾಹಿತ್ಯದ ಪ್ರವರ್ತಕರಲೊಬ್ಬರೆಂದು ಹೇಳಲಾಗುವ ಶ್ರೀಪಾದ ರಾಜರ ಈ ಕೀರ್ತನೆಯಲ್ಲಿ ಸಹಜ ಪ್ರಾಸದ ಮೋಡಿ ಹೇಗೆ ಒಡಗೂಡಿದೆಯೆಂಬುದನ್ನು ನೋಡಿ.

“ಕಂಗಳಿವ್ಯಾತಕೊ ಕಾವೇರಿ ರಂಗನ ನೋಡದ ॥ ಪ ॥
ಜಂಗಗಳುಳ್ಳಗೆ ಮಂಗಳ ಮೂರುತಿ
ರಂಗವಿಠಲನ ಶ್ರೀಪಾದಂಗಳ ನೋಡದ”[೪೨]

ಇದರರಂತೆಯೆ ವಚನ ಸಾಹಿತ್ಯದಲ್ಲಿಯೂ ಸಾಹಿತ್ಯಿಕ ಲಕ್ಷಣಗಳನ್ನು ನೋಡಬಹುದು.

“ಕೀಳು ಡೋಹರ ಕಕ್ಕ, ಕೀಳು ಮಾದರ ಚೆನ್ನ
ಕೀಳು ಓಹಿಲದೇವ, ಕೀಳು ಉದ್ಭವಯ್ಯ
ಕೀಳಿಂಗಲ್ಲದೆ ಹಯನು ಕರೆಯದು ಕಾಣಾ ರಾಮನಾಥ”
“ಎನ್ನ ಕಾಯವ ದಂಡಿಗೆಯ ಮಾಡಯ್ಯ
ಎನ್ನ ಶಿರವ ಸೋರೆಯ ಮಾಡಯ್ಯ
ಎನ್ನ ನರವ ತಂತಿಯ ಮಾಡಯ್ಯ
ಎನ್ನ ಬೆರಲ ಕಡ್ಡಿಯ ಮಾಡಯ್ಯ
ಬತ್ತೀಸರಾಗವ ಹಾಡಯ್ಯ
ಉರದಲೊತ್ತಿ ಬಾಜಿಸು ಕೂಡಲಸಂಗಮದೇವ”[೪೩]

ಬಸವಣ್ಣನವರ ಈ ವಚನದಲ್ಲಿ ಆದಿಪ್ರಾಸ ಕಾಣಬಹುದು.

ಶರಣರು ಭಕ್ತಿ ಮಾರ್ಗಗಳನ್ನು ಊರ್ಜಿತಗೊಳಿಸಿ ಕೊನೆಗೆ ಸೋಹಂಭಾವ ತಲುಪಿದರು. ದಾಸರ ಭಾವಗಳು ಭಕ್ತಿ ಪಾರವಶ್ಯತೆಯಲ್ಲಿ ಲಯ ಹೊಂದಿವೆ ಎನ್ನಬಹುದು. ದಾಸ ಸಾಹಿತ್ಯದಲ್ಲಿ ಸಾಮಾಜಿಕ ಮೌಲ್ಯದ ಕೊರತೆ ಕಂಡುಬರುತ್ತದೆ. ದಾಸರು ಹರಿಯ ಅತೀ ಪಾರಮ್ಯದಿಂದಲೋ? ಸಂಗೀತ ಲಯೋದ್ಭಾವವಾಗಿಯೋ? ಭಾವುಕತನ ಹೆಚ್ಚಾಗಿ ತೋರುತ್ತದೆ. ಭಕ್ತಿಯ ಭಾವುಕತನದಿಂದಾಗಿ ಸಾಮಾಜಿಕ ಮೌಲ್ಯಗಳು ತೋರದಂತಾಗಿವೆ. ಮಡಿವಂತರ ಡಾಂಬಿಕರ ಮುಖವಾಡವನ್ನು ಹೀಯಾಳಿಸಿದ್ದಾರೆ. ಜನಸಾಮಾನ್ಯರಿಗೂ ಆಧ್ಯಾತ್ಮದ ಅನುಭೂತಿ, ವೇದಾಂತ ದರ್ಶನ ಮಾಡಿ ಬಿಟ್ಟಿದ್ದಾರೆ ದಾಸರು.

ಶರಣರು ಕಾಯಕ ಭಕ್ತಿಯಲ್ಲಿ ಕೈಲಾಸ ಕಂಡವರು. ದಾಸರು ವಿಷ್ಣುವಿನ ಭಕ್ತನಾದಾಗ ಮುಕ್ತಿ ಇದೆ ಎನ್ನುವದನ್ನು ಕಂಡಾಗ ಭಕ್ತಿ ಪ್ರಧಾನವಾದ ಈ ದಾಸ ಪಂಥವು ಶ್ರೀ ವಿಷ್ಣು ಪಾರಮ್ಯವನ್ನು ಜೀವದಾಸ್ಯ ಭಾವನ್ನು ಪರಮ ಧ್ಯೇಯವನ್ನಾಗಿ ಅಂಗೀಕರಿಸಿತು. ಶರಣರ ನರ–ಹರನಾಗುವ ಮಾರ್ಗವನ್ನೇ, ದಾಸರೂ ನರ–ನಾರಾಯಣವಾಗುವದನ್ನು ತೋರಿದರು.

---

೪೨ : ಪುರಂದರ ದಾಸರು – ಜ್ಯೋತಿ ಹೊಸೂರ, ಪು – ೨೫
೪೩ : ಪುರಂದರ ದಾಸರು – ಜ್ಯೋತಿ ಹೊಸೂರ, ಪು – ೨೮

ಅದನ್ನೆ ಕಬೀರ ದಾಸರು "ಪಶೋಕಾ ಹೋತೆ, ಪನ್ಹೆಯಾ ನರಕಾ ಕಮಾನ ಹೋತ ನರಕರಣಿ ಕರೇ ತೋ ನರಕಾ ನಾರಾಯಣ ಹೋತ"

ಸಾರ್ಥಕ ಕಾರ್ಯ ಮಾಡಿದರೆ ನರನಿದ್ದವನೇ ನಾರಾಯಣನಾಗುತ್ತಾನೆ ಎಂಬಲ್ಲಿ ಪಡಿ ಮೂಡಿಸಿದ್ದಾರೆ. ವಚನ ಸಾಹಿತ್ಯದಂತೆ ದಾಸ ಸಾಹಿತ್ಯವೂ ಕನ್ನಡದ ಭಕ್ತಿ ವಾಙ್ಮಯದಲ್ಲಿ ಒಂದು ಮುಖ್ಯವಾದ ಮಜಲು, ಶಿವಶರಣೆಯರಂತೆ ಹರಿದಾಸರು ತಮ್ಮ ಸರ್ವಸ್ವವನ್ನು ಭಾಗವಂತನಿಗೆ ಅರ್ಪಿಸಿ ದಾಸೋಹಂ ಭಾವದಿಂದ ಕೀರ್ತನೆಗಳನ್ನು ಹಾಡಿ ಸಾಹಿತ್ಯ ಬಂಢಾರಕ್ಕೆ ಕನ್ನಡವು ತನ್ನ ಮೇಲಿನ ಕಾಣಿಕೆಯನ್ನು ಹೆಮ್ಮೆಯಿಂದ ಸಲ್ಲಿಸುವಂತೆ ಮಾಡಿದ್ದಾರೆ.

ಶರಣ ಹಾಗೂ ದಾಸ ಸಾಹಿತ್ಯದಲ್ಲಿ ಭಕ್ತಿ :

ಬಸವಣ್ಣನವರನ್ನು 'ಭಕ್ತಿ ಭಂಡಾರಿ'ಯೆಂದೇ ಕರೆಯಲಾಗುತ್ತದೆ. 'ಭಕ್ತನೆಂದರೆ ಬಸವಣ್ಣ, ಬಸವಣ್ಣನೆಂದರೆ ಭಕ್ತಿ' ಎಂಬುವಷ್ಟು ಪರಸ್ಪರ ಸಂಬಂಧಗಳಿವೆ. ಸಿದ್ಧರಾಮ ಶಿವಯೋಗಿಯು 'ಭಕ್ತನಾದರೆ ಬಸವಣ್ಣನಂತಾಗಬೇಕು', 'ಭಕ್ತರೂಪು ಬಸವಣ್ಣ' ಎಂದಿರುವುದನ್ನು ಗಮನಿಸಿದರೆ ಮೇಲಿನ ಮಾತಿಗೆ ಪುಷ್ಟಿ ದೊರಕುತ್ತದೆ. ಅಂತಹ ಬಸವಣ್ಣನವರು ಭಕ್ತಿಯ ಕುರಿತಾಗಿ ಹೇಳಿದ್ದು ಹೀಗಿದೆ :

"ಭಕ್ತಿ ಎಂತಹುದಯ್ಯಾ ದಾಸಯ್ಯ ಮಾಡಿದಂತಹುದಯ್ಯಾ?
ಭಕ್ತಿ ಎಂತಹುದಯ್ಯಾ ಸಿರಿಯಾಳ ಮಾಡಿದಂತಹದಯ್ಯಾ?
ಭಕ್ತಿ ಎಂತಹುದಯ್ಯಾ ನಮ್ಮ ಬಲ್ಲಾಳ ಮಾಡಿದಂತಹದಯ್ಯಾ?
ನೀ ಬಾಣನ ಬಾಗಿಲ ಕಾದಂತಹುದಯ್ಯಾ"[೪೪]

ಇಲ್ಲಿ 'ಭಕ್ತಿ'ಯೆಂದರೆ ದಾಸಯ್ಯ ಮಾಡಿದ್ದು; ತೊಟ್ಟ ಬಟ್ಟೆಯನ್ನೇ ಶಿವನಿಗೆ ದಾನವಾಗಿ ಕೊಟ್ಟದ್ದು, ಸಿರಿಯಾಳ ಹೆತ್ತ ಮಗನನ್ನೇ ಉಣಬಡಿಸಿದ್ದು, ಸಿಂಧುಬಲ್ಲಾಳ ತನ್ನ ವಧುವನ್ನೇ ಶಿವನಿಗರ್ಪಿಸಿದ್ದು ಎಂಬ ಉದಾಹರಣೆಯನ್ನು ನೀಡಿ ಭಕ್ತಿಯ ಕಾಠಿಣ್ಯ, ಅದರ ಉಗ್ರತೆ ಮತ್ತು ಭೀಕರ ಸ್ವರೂಪವನ್ನು ಪರಿಚಯಿಸಿ ಕೊನೆಗೆ ನೀ ಬಾಣನ ಬಾಗಿಲ ಕಾದಂತಹುದೆಂದು ವಿವರಿಸಿದ್ದಾರೆ.

ಬಸವಣ್ಣ ಅಪ್ಪಟ ಭಕ್ತನಾದರೂ, ಅವನಲ್ಲಿ ಅಖಂಡ ಭಕ್ತಿ ನೆಲೆಗೊಂಡಿದ್ದರೂ "ಭಕ್ತಿ ಎಳ್ಳನಿತಿಲ್ಲ ಯುಕ್ತಿ ಶೂನ್ಯನಯ್ಯಾ ನಾನು..." ಎಂದು ಹೇಳಿರುವುದು ಅವರ

---

೪೪ : ಬಸವಪಥ – ವಚನ ಸಾಹಿತ್ಯದಲ್ಲಿ ಭಕ್ತಿಯ ವಿಭಿನ್ನ ನೆಲೆಗಳು – ಡಾ. ಅಶೋಕ ನರೋಡೆ

ಹಿರಿತನಕ್ಕೆ ಸಾಕ್ಷಿಯಾಗಿದೆ. ಭಕ್ತಿಯನ್ನು ತನುಮನಧನದಿಂದ ತ್ರಿಕರಣ ಪೂರ್ವಕವಾಗಿ ಆಚರಿಸುವುದಾಗಬೇಕೆಂಬ ಅಂಶ ಇದರಲ್ಲಿದೆ.

"ಭಕ್ತಿ ವಿಶೇಷವ ಮಾಡುವಡೆ ಹತ್ತು ಬೆರಳುಂಟು
ಹಾಸಿ ದುಡಿವಡೆ ತನಗುಂಟು, ತನ್ನ ಪ್ರಥಮರಿಗುಂಟು
ಮಾರಿತಂದೆಗಳಂತೆ ಎನಗೇಕಹುದಯ್ಯಾ
ರತ್ನದ ಸಂಕಲೆಯನ್ನಿಕ್ಕಿ ಕಾಡಿಹ ಕೂಡಲಸಂಗಮದೇವ
ಶಿವಧೋ ಶಿವಧೋ..."[೪೫]

ಇದರಲ್ಲಿ 'ಭಕ್ತಿ ವಿಶೇಷ'ವನ್ನು ವಿವರಿಸಿ ಮಾರಿತಂದೆಗಳ ಭಕ್ತಿಯ ಬಗೆಯನ್ನು ಉದಾಹರಿಸಲಾಗಿದೆ.

"ಭಕ್ತಿಹೀನನ ದಾಸೋಹವ ಸದ್ಭಕ್ತರು ಸವಿಯರು,
ಬೇವಿನ ಹಣ್ಣು ಕಾಗೆಗೆ ಇನಿದಲ್ಲದೆ ಕೋಗಿಲೆ ಮೆಲಲಾರದು
ಲಿಂಗಸಂಬಂಧವಿಲ್ಲದವರ ನುಡಿ
ಕೂಡಲಸಂಗನ ಶರಣರಿಗೆ ಸಮನಿಸದು"[೪೬]

ಸದ್ಭಕ್ತರಾದವರು ಹೇಗಿರಬೇಕು, ಏನು ಮಾಡಬೇಕು, ಯಾವುದನ್ನು ಮಾಡಬಾರದು ಎಂಬುದನ್ನಿಲ್ಲಿ ತಿಳಿಸಲಾಗಿದೆ.

"ಭಕ್ತಿಯಿಲ್ಲದ ಬಡವ ನಾನಯ್ಯ;
ಕಕ್ಕಯ್ಯನ ಮನೆಯಲ್ಲೂ ಬೇಡಿದೆ,
ಚೆನ್ನಯ್ಯನ ಮನೆಯಲ್ಲೂ ಬೇಡಿದೆ,
ದಾಸಯ್ಯನ ಮನೆಯಲ್ಲೂ ಬೇಡಿದೆ.
ಎಲ್ಲಾ ಪುರಾತನರು ನೆರೆದು ಭಕ್ತಿಭಿಕ್ಷವನ್ನಿಕ್ಕಿದಡೆ,
ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ"[೪೭]

'ತುಂಬಿದುದು ತುಳುಕದು ನೋಡಾ' ಎಂಬ ಭಾವವನ್ನು ಇಲ್ಲಿ ಬಸವನ ಭಾವದಲ್ಲಿ ಕಾಣುತ್ತೇವೆ. ಭಕ್ತಿಗೆ ಆತನೆ ಮೂಲಚೂಲವಾದರೂ ತಾನು 'ಭಕ್ತಿಯಿಲ್ಲದ ಬಡವ' ಎನ್ನುವಲ್ಲಿ ಅವರ ವ್ಯಕ್ತಿತ್ವದ ಔನ್ನತ್ಯವಡಗಿದೆ. ಕಕ್ಕಯ್ಯ, ಚೆನ್ನಯ್ಯ, ದಾಸಯ್ಯ ಮತ್ತು

---

೪೫ : ಬಸವಪಥ – ವಚನ ಸಾಹಿತ್ಯದಲ್ಲಿ ಭಕ್ತಿಯ ವಿಭಿನ್ನ ನೆಲೆಗಳು – ಡಾ. ಅಶೋಕ ನರೋಡೆ
೪೬ : ಅದೇ ಪುಟ
೪೭ : ಅದೇ ಪುಟ

ಸಕಲ ಪುರಾತನರು ಸೇರಿ ಭಕ್ತಿಭಿಕ್ಷೆ ನೀಡಿದರು ಎಂದು ಹೇಳಿರುವುದು ಬಸವಣ್ಣನವರ ಸೌಜನ್ಯವಾಗಿದೆ. ಪುರಾತನರಿಗೆ ಸಲ್ಲಿಸಿದ ಗೌರವಾದರದ ಭಾವನೆಯಿಲ್ಲಿದೆ.

"ಭಕ್ತಿಯೆಂಬ ನಿಧಾನವ ಸಾಧಿಸುವಡೆ
ಶಿವಪ್ರೇಮವೆಂಬ ಅಂಜನವನೆಚ್ಚಿಕೊಂಬುದು
ಭಕ್ತನಾದವಂಗೆ ಇದೇ ಪಥವಾಗಿರಬೇಕು
ನಮ್ಮ ಕೂಡಲಸಂಗನ ಶರಣರ ಅನುಭಾವ ಗಜವೈದ್ಯ"[೪೮]

'ಭಕ್ತಿ'ಯೆಂಬುದು ಒಂದು 'ನಿಧಾನ' ಅಂದರೆ, ಅದೊಂದು ನಿಧಿ. ಕಾಯ್ದಿಟ್ಟ ನಿಧಿಯದು. ಶಿವಪ್ರೇಮ ಅಂಜನದ ಮೂಲಕ ಭಕ್ತಿಯನ್ನು ಸಿದ್ಧಿಸಿಕೊಳ್ಳಬಹುದು. ಭಕ್ತರಾದವರು ಅನುಭಾವ ಪಥದ ಮೂಲಕವೇ ಶಿವಪಥವನ್ನು ಸಾಧಿಸಬೇಕು. ಅದರ ಮೂಲಕ ಭಕ್ತಿಯೆಂಬ ನಿಧಾನವನ್ನು ಸಾಧಿಸಬಹುದೆಂದಿದ್ದಾರೆ. ಭಕ್ತಿಯನ್ನು ಸಾಧಿಸುವ ಪಥವನ್ನಿಲ್ಲಿ ಪರಿಚಯಿಸಲಾಗಿದೆ.

"ಭಕ್ತಿ ಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ,
ನಡೆಯೊಳಗೆ ನುಡಿಯ ಪೂರೈಸುವೆ –
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ;
ಒಂದು ಜವೆ ಕೊರತೆಯಾದರೆ
ಎನ್ನನದ್ದಿ ನೀನೆದ್ದು ಹೋಗು,
ಕೂಡಲಸಂಗಮದೇವಾ"[೪೯]

ನಡೆ–ನುಡಿ ಒಂದಾಗಿಸುವುದು, ಅಂತರಂಗ–ಬಹಿರಂಗ ಪಾರದರ್ಶಕವಾಗಿರುವುದು ಬಹಳ ಮುಖ್ಯವಾದದ್ದು. ನಡೆ–ನುಡಿ ಒಂದಾದಡೆ, ಇದೇ ಜನ್ಮ ಕಡೆ ಎಂದು ನಂಬಿ ನಡೆದವರು ಶಿವಶರಣರು. ಬಸವಣ್ಣನವರು ಸಂಗಮನಾಥನಲ್ಲಿ ಪ್ರಮಾಣ ಮಾಡುತ್ತಿರುವುದು ಗಮನಾರ್ಹವಾಗಿದೆ. ನಡೆ–ನುಡಿಯ ಬಗ್ಗೆ ಅವರ ಬದ್ಧತೆ, ಬದುಕಿನ ನಿಷ್ಠೆ, ಮೌಲ್ಯಗಳಲ್ಲಿ ಅವರಿಗಿರುವ ಶ್ರದ್ಧೆಯಿಲ್ಲಿ ವ್ಯಕ್ತವಾಗುತ್ತದೆ.

ಈ ವಚನದಲ್ಲಿ ಐದು ಪಾದಗಳಿವೆ. ಇದರಲ್ಲಿ 'ತ್ರಾಸು ಕಟ್ಟಳೆ' ಪದವಿದೆ. ಅಂದರೆ ತೂಗುವ ತಕ್ಕಡಿ ಮತ್ತು ಪರಡಿಗಳ ಪರಿಕಲ್ಪನೆಯಿದೆ. ಕುತೂಹಲಕ್ಕಾಗಿ ಗಮನಿಸಿದರೆ ಎರಡು ಪಾದಗಳು ಕೆಳಗಿವೆ. ನಟ್ಟ ನಡುವಿನ ಸಾಲನ್ನು 'ಮೇಲೆ ತೂಗುವ ತ್ರಾಸು ಕಟ್ಟಳೆ

---

೪೮ : ಬಸವಪಥ – ವಚನ ಸಾಹಿತ್ಯದಲ್ಲಿ ಭಕ್ತಿಯ ವಿಭಿನ್ನ ನೆಲೆಗಳು – ಡಾ. ಅಶೋಕ ನರೋಡೆ
೪೯ : ಅದೇ ಪುಟ

ನಿಮ್ಮ ಕೈಯಲಿ' ಎನ್ನುವುದನ್ನು ತೂಗುವ ತಕ್ಕಡಿಯ 'ದಂಡ'ವನ್ನಾಗಿ ಗ್ರಹಿಸಿದರೆ; ಎರಡು ಮತ್ತು ನಾಲ್ಕನೆಯ ಸಾಲುಗಳು ಪರಡಿಗೆ ಮತ್ತು ದಂಡಕ್ಕೆ ಜೋಡಿಸಿರುವ ಸರಪಳಿಗಳಾಗುತ್ತಿವೆ. ಎರಡನೆಯ ಸಾಲಿನಲ್ಲಿ 'ನಡೆಯೊಳಗೆ ನುಡಿಯ ಪೂರೈಸುವೆ' ಎಂಬ ೩ ಪದಗಳಿದ್ದರೆ; ನಾಲ್ಕನೆಯ ಸಾಲಿನಲ್ಲಿ 'ಒಂದು ಜವೆ ಕೊರತೆಯಾದಡೆ' ಎಂಬ ೩ ಪದಗಳಿವೆ. ಅಂದರೆ ಪರಡಿಗೆ ಮಾರು-ಮೂರು ಕಟ್ಟುವ ಸಾಧನಗಳಾದವು. ಇನ್ನು ಮೊದಲ ಸಾಲು ಮತ್ತು ಕೊನೆಯ ಸಾಲಿನಲ್ಲಿ ಆರು ಆರು ಪದಗಳಿವೆ. ಪರಡಿಗೆಗಳೆರಡೂ ಸಮಾನವಾಗಿವೆ. ತೂಗಿದ ವಸ್ತುಗಳೂ ಸಮಾನವಾಗಿವೆ. ನಡುವಿರುವ; ನಾವು 'ದಂಡ'ವೆಂದು ಭಾವಿಸಿರುವ ಮೂರನೆಯ ಸಾಲಿನಲ್ಲಿಯೂ ಕೂಡ 'ಮೇಲೆ ತೂಗುವ ತ್ರಾಸು ಕಟ್ಟಳೆ, ನಿಮ್ಮ ಕೈಯಲ್ಲಿ' ಎನ್ನುವಲ್ಲಿಯೂ ಆರು ಪದಗಳಿವೆ. ಅಂದರೆ ಬಸವಣ್ಣನವರು ಎಷ್ಟೊಂದು ಪ್ರಜ್ಞಾಪೂರ್ವಕವಾಗಿ ವಚನ ರಚಿಸಿದ್ದಾರೆಂಬುದನ್ನು ಇದರಿಂದ ಗ್ರಹಿಸಬಹುದಾಗಿದೆ. ಈ ವಚನದಲ್ಲಿ ಒಂದು ಪದ ಸೇರಿಸಿದರೆ ಹೆಚ್ಚಾಗುತ್ತದೆ. ಇದರಲ್ಲಿರುವ ಒಂದು ಪದ ತೆಗೆದರೆ ಕೊರತೆಯೆನಿಸುತ್ತದೆ. ಇಷ್ಟು ತೂಕಬದ್ಧವಾಗಿ ವಚನ ರಚನೆ ಮಾಡಿರುವ ಅವರ ವಿಚಕ್ಷಣಮತಿಗೆ ಓದುಗ ಬೆರಗಾಗುತ್ತಾನೆ. ಅಂದರೆ ವಚನಗಳು ಸರಳವೆನಿಸಿದರೂ ಸರಳವಲ್ಲ. ತುಂಬ ಸಂಕೀರ್ಣವಾಗಿರುತ್ತವೆ. ಸಹಜವಾಗಿ ಬರೆದಿರುವಂತೆ ತೋರಿದರೂ ತೀರಾ ಸಹಜವಾಗಿ ಬರೆದವುಗಳಲ್ಲ. ಪ್ರತಿ ವಚನದ ಹಿಂದೆ ಆಳವಾದ ಚಿಂತನ-ಮಂಥನ ಗುಣವಿದೆ. ಯೋಚಿಸಿದಷ್ಟು ಅರ್ಥದ ಪದರಗಳು ವಿಸ್ತಾರಗೊಳ್ಳುತ್ತವೆ. ವಚನ ರಚನಾ ರೀತಿ, ಶಬ್ದಶಿಲ್ಪ, ಸಂಗ್ರಹ ಗುಣ, ಶುಚಿಶಿಲ್ಪಗಳು ಕಂಡೂ ಕಾಣದಂತೆ ವಚನದೊಳಗೆ ಅಡಗಿವೆ.

"ಭಕ್ತಿ ರತಿಯ ವಿಕಳತೆಯ ಯುಕ್ತಿಯನೇನ ಬೆಸಗೊಂಬಿರಯ್ಯಾ?
ಕಾಮಿಗುಂಟೆ ಲಜ್ಜೆ ನಾಚಿಕೆ
ಕಾಮಿಗುಂಟೆ ಮಾನಾಪಮಾನವು?
ಕೂಡಲಸಂಗನ ಶರಣರಿಗೊಲಿದ
ಮರುಳನನೇನ ಬೆಸಗೊಂಬಿರಯ್ಯಾ?"[೫೦]

ಇದರಲ್ಲಿ ಭಕ್ತಿಯನ್ನು 'ರತಿವಿಕಳತೆಗೆ' ಹೋಲಿಸಲಾಗಿದೆ. ಲೌಕಿಕ ಹೋಲಿಕೆಗಳ ಮೂಲಕವೆ ಅಲೌಕಿಕತೆಯ ದರ್ಶನ ಮಾಡುವ ಪರಿ ವಿಶೇಷವಾಗಿದೆ.

ಬಸವಣ್ಣನವರು ಭಕ್ತಿಯ ಕುರಿತಾಗಿ ವಿವಿಧ ನೆಲೆಗಳಲ್ಲಿ ವಿಧವಿಧವಾಗಿ ಭಕ್ತಿಯನ್ನು ವಿವರಿಸಿದ್ದಾರೆ. ಷಟಸ್ಥಲದಲ್ಲಿ ಮೊದಲನೆಯದಾದ ಭಕ್ತಸ್ಥಲದಲ್ಲಿಯೇ ಭಕ್ತಿ ವಿವಿಧ ಮಗ್ಗಲುಗಳನ್ನು ಅನಾವರಣಗೊಳಿಸಿದ್ದಾರೆ. ಕೊನೆಯದಾಗಿ –

---

೫೦ : ಬಸವಪಥ – ವಚನ ಸಾಹಿತ್ಯದಲ್ಲಿ ಭಕ್ತಿಯ ವಿಭಿನ್ನ ನೆಲೆಗಳು – ಡಾ. ಅಶೋಕ ನರೋಡೆ

"ಭಕ್ತಿಯೆಂಬ ಪೃಥ್ವಿಯ ಮೇಲೆ,
ಗುರುವೆಂಬ ಬೀಜವಂಕುರಿಸಿ,
ಲಿಂಗವೆಂಬ ಎಲೆಯಾಯಿತ್ತು.
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು,
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ"[೫೧]

ಇದರಲ್ಲಿ ಭಕ್ತಿಯ ಎಲ್ಲ ಸ್ತರಗಳು ಬಿಚ್ಚಿಕೊಂಡಿವೆ. ಭಕ್ತಿಯ ಪರಾಕಾಷ್ಠತೆಯನ್ನಿಲ್ಲಿ ಕಾಣಬಹುದು.

ಭಕ್ತಿಯ ಕುರಿತಾಗಿ ಒಬ್ಬೊಬ್ಬ ಶರಣರದು ಒಂದೊಂದು ನಿಲುವು. ಬಸವಣ್ಣನವರು ಸರ್ವರಿಗೂ ಗ್ರಾಹ್ಯವಾಗುವ ರೀತಿಯಲ್ಲಿ ಸಹಜ ಹೋಲಿಕೆಗಳ ಮೂಲಕ ತಿಳಿಸಿದ್ದಾರೆ. ಆದರೆ ಅಲ್ಲಮಪ್ರಭುದೇವರು ಭಕ್ತಿಯನ್ನು ವ್ಯಾಖ್ಯಾನಿಸಿದ್ದು ಬೇರೊಂದು ರೀತಿಯಲ್ಲಿದೆ:

"ಭಕ್ತಿಯೆಂಬುದು ಯುಕ್ತಿಯೊಳಗು,
ಪೂಜೆಯೆಂಬುದು ನಿರ್ಮಾಲ್ಯದೊಳಗು,
ಪ್ರಸಾದವೆಂಬುದು ಓಗರದೊಳಗು,
ಆಚಾರವೆಂಬುದು ಅನಾಚಾರದೊಳಗು.
ಧರ್ಮವೆಂಬುದು ಅಧರ್ಮದೊಳಗು,
ಸುಖವೆಂಬುದು ದುಃಖದೊಳಗು.
ವ್ರತವೆಂಬುದು ವೈರಾಗ್ಯದೊಳಗು,
ನೇಮವೆಂಬುದು ಉದ್ದೇಶದೊಳಗು.
ಅಹಿಂಸೆಯೆಂಬುದು ಹಿಂಸೆಯೊಳಗು!
ಇವಾವಂಗವೂ ಇಲ್ಲದೆ
ಗುಹೇಶ್ವರ ನಿಮ್ಮ ಶರಣ ಸುಖಿಯಾಗಿರ್ದನು"[೫೨]

ಅಲ್ಲಮಪ್ರಭುದೇವರು ಹೇಳುವುದು ಭಕ್ತಿಯೆನ್ನುವುದು ಯುಕ್ತಿಯಲ್ಲಿದೆ, ಪೂಜೆಯು ನಿರ್ಮಲತೆಯಲ್ಲಿದೆ, ಓಗರದೊಳಗೆ ಪ್ರಸಾದವಿದೆ. ಅನಾಚಾರದೊಳಗೆ ಆಚಾರ,

---

೫೧ : ಬಸವಪಥ – ವಚನ ಸಾಹಿತ್ಯದಲ್ಲಿ ಭಕ್ತಿಯ ವಿಭಿನ್ನ ನೆಲೆಗಳು – ಡಾ. ಅಶೋಕ ನರೋಡೆ
೫೨ : ಅದೇ ಪುಟ

ಅಧರ್ಮದೊಳಗೆ ಧರ್ಮ, ದುಃಖದೊಳಗೆ ಸುಖ, ವೈರಾಗ್ಯದೊಳಗೆ ವ್ರತ, ಉದ್ದೇಶದೊಳಗೆ ನೇಮ, ಹಿಂಸೆಯೊಳಗೆ ಅಹಿಂಸೆಯಿದೆ. ಇವುಗಳ ಗೊಡವೆಯಿಲ್ಲದೆ ಗುಹೇಶ್ವರನ ಶರಣ ಸುಖಿಯಾಗಿರುವನು. ಭಕ್ತಸ್ಥಲದಿಂದ ಶರಣಸ್ಥಲಕ್ಕೇರಿದ ಭಕ್ತನ ಸಾಧನೆ ಅಪ್ರತಿಮವಾದದ್ದು. ಭಕ್ತಿಯಿಂದಾಗಿ ಶರಣರು ಸುಖಿಯಾಗಿರುವರು ಎಂದು ಪ್ರಭುದೇವರು ವಿವೇಚಿಸಿದ್ದಾರೆ.

"ಭಕ್ತಿವಿಡಿದು ಭಕ್ತನಾದ ಪ್ರಸಾದಿ
ಮೋಕ್ಷವಿಡಿದು, ಧೈರ್ಯವಿಡಿದು
ಆ ಭಕ್ತಂಗೆ ಮಾಹೇಶ್ವರನಾದ ಪ್ರಸಾದಿ;
ಕಾರಣವಿಡಿದು ಅವಧಾನ ತಪ್ಪದ
ಆ ಭಕ್ತಂಗೆ ಪ್ರಸಾದಿಯಾದ ಪ್ರಸಾದಿ;
ಕರ್ಮರಹಿತನಾಗಿ ಕಾಲಕಲ್ಪಿತವಿಲ್ಲದ
ಆ ಭಕ್ತಂಗೆ ಪ್ರಾಣಲಿಂಗಿಯಾದ ಪ್ರಸಾದಿ.
ಪತಿಭಕ್ತಿವಿಡಿದು ಧರ್ಮಾರ್ಥಕಾಮಮೋಕ್ಷಂಗಳಾಸೆಯ
ನಿವೃತ್ತಿಯಂ ಮಾಡಿದ
ಆ ಭಕ್ತಂಗೆ ಶರಣನಾದ ಪ್ರಸಾದಿ.
ಈ ಉಭಯ ಸಮರಸವೇಕವೆಂದು ತಿಳಿದು
ಉಭಯಭಾವ ಉರಿಕರ್ಪೂರ ಸಂಯೋಗವಾದ
ಆ ಭಕ್ತಂಗೆ ಐಕ್ಯನಾದ ಪ್ರಸಾದಿ.
ನಮ್ಮ ಕಪಿಲಸಿದ್ಧಮಲ್ಲಿನಾಥನಲ್ಲಿ
ಸರ್ವಕ್ಕೆ ಚೈತನ್ಯವಾದ ನಮ್ಮ ಚೆನ್ನಬಸವಣ್ಣನೆಂಬ ಅಚ್ಚಪ್ರಸಾದಿ."[೫೩]

ಇದರಲ್ಲಿ ಷಟಸ್ಥಲಗಳನುಸಾರವಾಗಿ ಮಾಡಿದ ಸಾಧನೆಯಿದೆ. ಮೊದಲ ಮೆಟ್ಟಿಲು ಭಕ್ತ, 'ಭಕ್ತಿವಿಡಿದು ಭಕ್ತನಾದ ಪ್ರಸಾದಿ'ಯೆಂದು ಮೊದಲ ಮೆಟ್ಟಿಲಿನಿಂದ ಎರಡನೆಯ ಮೆಟ್ಟಿಲು ಹತ್ತುವ ದಾರಿಯನ್ನಿಲ್ಲಿ ವಿವರಿಸಲಾಗಿದೆ. ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯಸ್ಥಲಗಳನ್ನು ಒಂದೊಂದಾಗಿ ಕ್ರಮಿಸಿರುವುದರ ವಿವರಣೆಯಿದೆ. ಸಾಧಕ ಜೀವಿಯ ಸಾಧನಾ ಪಥವು ಇಲ್ಲಿದ್ದು, ಮೋಕ್ಷವನ್ನು ಬಯಸುವವನು ಸಾಗಬೇಕಾಗಿರುವ ಮಾರ್ಗದ ಸೂಚನೆಯಿಲ್ಲದೆ ಎಲ್ಲ ಸ್ಥಲಗಳಲ್ಲೂ ಭಕ್ತ ಹಾಗೂ ಆತನ ಭಕ್ತಿ ಮುಖ್ಯವಾಗಿದೆ. ಭಕ್ತಿಯೇ ಎಲ್ಲಕ್ಕೂ ಇಲ್ಲಿ ಕಾರಣೀಭೂತ ಅಂಶವಾಗಿದೆ.

---

೫೩ : ಬಸವಪಥ – ವಚನ ಸಾಹಿತ್ಯದಲ್ಲಿ ಭಕ್ತಿಯ ವಿಭಿನ್ನ ನೆಲೆಗಳು – ಡಾ. ಅಶೋಕ ನರೋಡೆ

ಶಿವಶರಣರು ಮಾತ್ರವಲ್ಲದೆ, ಶಿವಶರಣೆಯರು ಕೂಡ 'ಭಕ್ತಿ'ಯ ಕುರಿತಾಗಿ ವಿವರಿಸಿದ್ದಾರೆ. ಮಹಾದೇವಿಯಕ್ಕ ತನ್ನ ವಚನದಲ್ಲಿ "ಎನ್ನ ಭಕ್ತಿ ಬಸವಣ್ಣನ ಧರ್ಮ", "ಬಸವಣ್ಣನ ಮನೆಯ ಮಗಳಾದ ಕಾರಣ ಭಕ್ತಿ ಪ್ರಸಾದವ ಕೊಟ್ಟನು", "ಬಸವನ ಭಕ್ತಿ ಕೊಟ್ಟಣದ ಮನೆ, ಸಿರಿಯಾಳನ ಭಕ್ತಿ ಕಸಬುಗೇರಿ, ಸಿಂಧುಬಲ್ಲಾಳನ ಭಕ್ತಿ ಪರದಾರದ್ರೋಹ... ಶ್ರೀಗಿರಿ ಚೆನ್ನಮಲ್ಲಿಕಾರ್ಜುನಾ, ನನ್ನ ಭಕ್ತಿ ನಿನ್ನೊಳಗೈಕ್ಯವಾಯಿತ್ತಾಗಿ ನಿರ್ವಯಲಾದೆ ಕಾಣಾ" ಭಕ್ತ ಮತ್ತು ಭಕ್ತಿಯ ಪ್ರಸ್ತಾಪ ಬಂದಾಗಲೆಲ್ಲ ಅಕ್ಕ ಬಸವಣ್ಣನನ್ನು ಸ್ಮರಿಸುತ್ತಾಳೆ. ಯಾರ ಭಕ್ತಿಯ ಬಗೆ ಹೇಗೆಂದು ವಿವರಿಸುವುದನ್ನು ಕಾಣುತ್ತೇವೆ.

"ಭಾನುವಿನಂತಿಪ್ಪುದು ಜ್ಞಾನ,
ಬಾನುಕಿರಣದಂತಿಪ್ಪುದು ಭಕ್ತಿ,
ಬಾನುವನುಳಿದು ಕಿರಣಂಗಳಿಲ್ಲ
ಕಿರಣಂಗಳನುಳಿದು ಬಾನುವಿಲ್ಲ.
ಜ್ಞಾನವಿಲ್ಲದ ಭಕ್ತಿ, ಭಕ್ತಿಯಿಲ್ಲದ ಜ್ಞಾನವೆಂತಿಪ್ಪುದು
ಚೆನ್ನಮಲ್ಲಿಕಾರ್ಜುನಾ?"[೫೪]

ಭಕ್ತಿ ಮತ್ತು ಜ್ಞಾನದ ಪರಸ್ಪರ ಸಂಬಂಧವನ್ನು ಅಕ್ಕ ಸೊಗಸಾಗಿ ನಿರೂಪಿಸಿದ್ದಾಳೆ.

ಶಿವಶರಣೆ ಅಕ್ಕಮ್ಮ – "ಭಕ್ತಂಗೆ ಬಯಕೆ ಉಂಟೆ? ನಿತ್ಯಂಗೆ ಸಾವುಂಟೆ? ಸದ್ಭಕ್ತಂಗೆ ಮಿಥ್ಯ ತಥ್ಯ ಉಂಟೆ?" ಎಂದು ಪ್ರಶ್ನಿಸಿ; "ಭಕ್ತರ ಮನೆಗೆ ಸತ್ಯ ಶರಣರು ಬಂದಲ್ಲಿಯೆ ಮದುವೆಯ ಉತ್ಸಾಹಕ್ಕಿಂದ ವೆಗ್ಗಳ", "ಭಕ್ತರ ಮನೆಯಲ್ಲಿ ಭಕ್ತರು ಬಂದು ಕಳವು ಪಾರದ್ವಾರವ ಮಾಡಿದರೆಂದು ಹೊರಹಾಯ್ಕಿ ಎಂದು ನುಡಿಯಬಹುದೆ?" ಎಂದಿರುವುದು ಗಮನಾರ್ಹವಾಗಿದೆ.

ಆಯ್ದಕ್ಕಿ ಲಕ್ಕಮ್ಮ – "ಭಕ್ತಂಗೆ ಬಡತನವುಂಟೆ? ನಿತ್ಯಂಗೆ ಮರಣವುಂಟೆ? ಭಕ್ತರು ಬಡವರೆಂದು ಮತ್ತೊಂದ ಕೊಟ್ಟೆಹೆನೆಂದಡೆ ಮಾರಯ್ಯಪ್ರಿಯ ಅಮಲೇಶ್ವರಲಿಂಗ ಸತ್ತಂದಿಗಲ್ಲದೆ ಬಡತನವಿಲ್ಲ" ಎಂದು ನಿಷ್ಠುರವಾಗಿ ನುಡಿದಿದ್ದಾಳೆ. ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ – "ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ; ಸತ್ಯಶುದ್ಧವಿಲ್ಲದುದು ಕಾಯಕವಲ್ಲ" ಎಂದು ಹೇಳಿ, ಇನ್ನೊಂದೆಡೆ – "ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ? ಹುಸಿದು ತಂದು ಮಾಡುವಾತ ಭಕ್ತನೆ? ಭಕ್ತರ ಕುಲವನ್ನೆತ್ತಿ ನಿಂದಿಸುವಾತ ಭಕ್ತನೆ?" ಎಂದು ಪ್ರಶ್ನಿಸಿ ಇಂಥವರು ಭಕ್ತರಲ್ಲವೆಂದು ಸ್ಪಷ್ಟಪಡಿಸಿದ್ದಾಳೆ.

---

೫೪ : ಬಸವಪಥ – ವಚನ ಸಾಹಿತ್ಯದಲ್ಲಿ ಭಕ್ತಿಯ ವಿಭಿನ್ನ ನೆಲೆಗಳು – ಡಾ. ಅಶೋಕ ನರೋಡೆ

ದುಗ್ಗಳೆಯು – "ಭಕ್ತನಾದಡೆ ಬಸವಣ್ಣನಂತಾಗಬೇಕು" ಎಂದು ಹೇಳುತ್ತಾಳೆ. ನಾಗಲಾಂಬಿಕೆಯು ಕೂಡ ಭಕ್ತಿಯ ಕುರಿತಾಗಿ ಹೇಳುವಾಗ ಬಸವಣ್ಣನ ಕುರಿತಾಗಿಯೇ ಹೇಳುತ್ತಾಳೆ.

"ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂದಡೆ
ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲಾ ಪಸರಿಸಿತ್ತಲ್ಲಾ!
ಅಯ್ಯಾ, ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ
ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರು?
...."[೫೫]

ಮತ್ತೊಂದೆಡೆ "ಬಸವ ಮಾಡಿದಡಾಯ್ತು, ಭುವಿಯ ಭಕ್ತಿಯ ಬೆಳಕು ಬಸವ ಮಾಡಿದಡಾಯ್ತು ಗುರುಲಿಂಗಜಂಗಮದ ಪೂಜೆ... ಬಸವ ಮಾಡಿದಡಾಯ್ತು ಭಕ್ತಿ ಭಕ್ತರಲಿ ಸಮಭಾವ". "ಭಕ್ತಿಯ ತವನಿಧಿಯೆ, ಮುಕ್ತಿಯ ಮೂರಿತಿಯೆ, ಲಿಂಗಜಂಗಮದ ಚೈತನ್ಯವೆ ನಿಮ್ಮನಗಲಿ ಎಂತು ಸೈರಿಸುವೆನು?" ಮುಂತಾದ ವಚನಗಳಲ್ಲಿ ಭಕ್ತಿ ಮತ್ತು ಬಸವಣ್ಣನ ಪರಸ್ಪರ ಸಂಬಂಧಗಳ ಚರ್ಚೆಯಿದೆ.

ನೀಲಾಂಬಿಕೆಯು – "ಭಕ್ತಿ ಪ್ರಸಾದ, ಮುಕ್ತಿ ಪ್ರಸಾದ, ಇಹಪರ ಪ್ರಸಾದದ ನೆಲೆಯ ಕಂಡು ಸುಖಿಸಿದೆವೆಂಬರು. ತಾವರಿಯದ ವಿವರ ತಮಗೆಲ್ಲಿಯದೋ" ಎಂದು ಪ್ರಶ್ನಿಸುತ್ತಾಳೆ. ಮತ್ತೊಂದು ವಚನದಲ್ಲಿ –

"ಭಕ್ತಿಯಿಲ್ಲದ ಕಿಂಕುರ್ವಾಣವ ಮಾಡಹೋದರೆ
ಆ ಭಕ್ತಿ ಗಹಗಹಿಸಿ ನಕ್ಕಿತ್ತು.
ಕಿಂಕುರ್ವಾಣವಿಲ್ಲದಿದ್ದರೆ ಜ್ಞಾನವಿಲ್ಲದಾಯ್ತು
ಆ ಜ್ಞಾನ ಜ್ಞಾನಕ್ಕೆ ಸುಯಿದಾನವೈದಲು
ಭಕ್ತಿ ನೆಲೆಯಾಯಿತ್ತಯ್ಯಾ ಸಂಗಯ್ಯ"[೫೬]

ಎಂದು ಭಕ್ತಿ ನೆಲೆಯಾಗುವ ಬಗೆಯನ್ನು ಮಾರ್ಮಿಕವಾಗಿ ಹೇಳಿದ್ದಾಳೆ.

ಮೋಳಿಗೆಯ ಮಹಾದೇವಿಯು – "ಭಕ್ತಂಗೆ ಭಕ್ತಸ್ಥಲವಲ್ಲದೆ ಮಾಹೇಶ್ವರ ಸ್ಥಲದಲ್ಲಿ ನಿಲ್ಲ". "ಭಕ್ತಂಗೆ ವಿಶ್ವಾಸ, ಮಾಹೇಶ್ವರಂಗೆ ನಿಷ್ಠೆ, ಪ್ರಸಾದಿಗೆ ಆಯೋಚಿತ". ಇವೆರಡು ವಚನಗಳಲ್ಲಿ ಭಕ್ತ ಮತ್ತು ಭಕ್ತಿಯನ್ನು ವಿವರಿಸಿದ್ದಾಳೆ.

---

೫೫ : ಬಸವಪಥ – ವಚನ ಸಾಹಿತ್ಯದಲ್ಲಿ ಭಕ್ತಿಯ ವಿಭಿನ್ನ ನೆಲೆಗಳು – ಡಾ. ಅಶೋಕ ನರೋಡೆ
೫೬ : ಅದೇ ಪುಟ

ಈ ರೀತಿಯ ಹಲವಾರು ಶಿವಶರಣರು ಭಕ್ತಿಯ ಕುರಿತಾಗಿ ತಮ್ಮದೇ ಆದ ರೀತಿಯಲ್ಲಿ ವಿವರಿಸಿದ್ದಾರೆ. ಕೆಲವರು ವ್ಯಾಖ್ಯಾನಿಸಿದ್ದಾರೆ. ಹಲವರು ಭಕ್ತಿಗೆ ಹೊಸ ಭಾಷ್ಯವನ್ನೇ ಬರೆದಿದ್ದಾರೆ. ಭಕ್ತಿಯನ್ನು 'ಮೌಲ್ಯ'ವೆಂದು ಪರಿಗಣಿಸಿದ್ದಾರೆ. ಭಕ್ತಿಯು ಬದುಕಿನ ಮಾರ್ಗವಾಗಿ ಪರಿಣಮಿಸಿದೆ. ಬೇರೆ ಬೇರೆ ಧರ್ಮಗಳಲ್ಲಿ ಕಾಣದ ವೀರಶೈವರಲ್ಲಿ ಮಾತ್ರ ಕಾಣುವ ಭಕ್ತಿ ಮತ್ತು ಶಕ್ತಿಯನ್ನು ವಚನಕಾರರು ಸೊಗಸಾಗಿ ಮೇಳವಿಸಿದ್ದಾರೆ. ಭಕ್ತಿಯ ಮೂಲಕವಾಗಿ ಶಿವಶರಣರು ಹೊಸ ಸಮಾಜ ಹುಟ್ಟುಹಾಕಿರುವುದು ಗಮನಾರ್ಹ ಅಂಶವಾಗಿದೆ.

ಬಸವಣ್ಣ ಲೌಕಿಕವಾಗಿ ಬಿಜ್ಜಳನ ಬೊಕ್ಕಸದ ಬಂಡಾರಿಯಾಗಿದ್ದು ತಮ್ಮ ಶಿವ ಭಕ್ತಿಯ ಹಿರಿಮೆಯಿಂದ ಭಕ್ತಿ ಬಂಡಾರಿ ಎಂದೇ ಪ್ರಸಿದ್ಧರಾದವರು. ಅವರ ಭಕ್ತಿಯ ವೈವಿಧ್ಯಮಯ ಮುಖಗಳು ಅವರ ವಚನಗಳಲ್ಲಿ ಹೃದ್ಯವಾಗಿ ಮೂಡಿ ಬಂದಿವೆ.

ಅದರಂತೆಯೇ ದಾಸ ಸಾಹಿತ್ಯದಲ್ಲಿ "ದಾಸರೆಂದರೆ ಪುರಂದರ ದಾಸರಯ್ಯ"[೫೭] ಎನಿಸಿಕೊಂಡ ಪುರಂದರ ದಾಸರ ಕೀರ್ತನೆಗಳು ಕೂಡ ಭಕ್ತಿ ಪ್ರಧಾನವಾದವುಗಳು. ಹರಿದಾಸರ ಸಂಪ್ರದಾಯದಲ್ಲಿ ಭಕ್ತಿಯನ್ನು ದಾಸ್ಯ, ಸಖ್ಯ, ಮಾಧುರ್ಯ, ವಾತ್ಸಲ್ಯ ಮತ್ತು ಶಾಂತ ಎಂದು ಪಂಚವಿಧವಾಗಿ ಭಾವಿಸುತ್ತಾರೆ.

ಭಕ್ತಿಯಲ್ಲಿ ದಾಸ್ಯಭಾವಕ್ಕೆ ಪ್ರಥಮ ಆದ್ಯತೆ ಇರುವುದು. ಆದುದರಿಂದಲೇ ವಚನಕಾರರು ತಮ್ಮನ್ನು ಶಿವಶರಣರು ಎಂದು ಗುರುತಿಸಿಕೊಂಡಿದ್ದಾರೆ. ಕೀರ್ತನಕಾರರು ತಮ್ಮನ್ನು ಹರಿದಾಸರೆಂದೇ ಕರೆದುಕೊಂಡಿದ್ದಾರೆ. ಅನನ್ಯ ಶರಣತೆ, ಆರ್ತತೆಗಳು ದಾಸ ಭಕ್ತಿಯ ಲಕ್ಷಣಗಳು. 'ದಾಸನ ಮಾಡಿಕೊ ಎನ್ನ' ಎನ್ನುವ ಕೀರ್ತನೆಯಲ್ಲಿ ಪುರಂದರ ದಾಸರು ದೈನ್ಯದಿಂದ ಬೇಡಿಕೊಂಡಿದ್ದಾರೆ. ಅನನ್ಯ ಭಕ್ತಿಯಿಂದ ಪರಿಪರಿಯಿಂದ ಬೇಡಿಕೊಂಡರೂ ಭಗವಂತರು ಕರುಣಾದೃಷ್ಟಿಯನ್ನು ಬೀರದಿರುವಾಗ ಅತಿಯಾಗಿ ನೊಂದುಕೊಂಡು ಇನ್ನೂ.

ಶರಣರ ಸಾಹಿತ್ಯದಲ್ಲಿಯ ಭಕ್ತಿಯ ಪರಿಯು ಇರುತ್ತದೆ. ಏಕ ನಿಷ್ಠೆಯಿಂದ ಶಿವನನ್ನೆ ನಂಬಿ, ಶಿವಭಕ್ತಿಯಲ್ಲಿಯೇ ಲೀನವಾಗಿರುವ ಭಕ್ತನು "ಇಂದಿಗೆಂತು ನಾಳೆಗೆಂತೆಂದು ಚಿಂತಿಸಲೇಕೆ? ತಂದಿಕ್ಕುವ ಶಿವಂಗೆ ಬಡತನವೇ ರಾಮನಾಥ" ಈ ಜಗತ್ತನ್ನು ಜಗತ್ತಿನಲ್ಲಿರುವ ಸುವಸ್ತುಗಳೆಲ್ಲವನ್ನು ಸೃಷ್ಟಿಸುವವನು ಜಗದೀಶ್ವರನು. ಅವನೊಲಿದರೆ ಕೊರಡು ಕೊನರುವಾಗುವುದು. ಬರಡು ಹಯನಾಗುವುದು. ತನ್ನ ಭಕ್ತರ ಯೋಗಕ್ಷೇಮವನ್ನು ಭಗವಂತನೇ ವಹಿಸಿಕೊಂಡಿರುವಾಗ ಭಕ್ತನಾದವನು ಈ ಹೊತ್ತಿನ ಜೀವನ ನಿರ್ವಹಣೆಗೆ

೫೭ : ಕನ್ನಡ ಸಾಹಿತ್ಯ ಚರಿತ್ರೆ – ತ. ಸು. ಶಾಮರಾಯ, ಪುಟ : ೧೨೫

[illegible]

ಏನು ಗತಿ? ನಾಳಿಗೇನು ಗತಿ ಎಂದು ಚಿಂತಿಸಬೇಕಾದ ಅಗತ್ಯವೇ ಇರುವುದಿಲ್ಲ. ಶಿವನಲ್ಲಿ ಅಚಲವಾದ ನಿಷ್ಠೆಯೊಂದಿದ್ದರೆ ಸಾಕು ಎಂದಿದ್ದಾರೆ. ಆ ಅಚಲವಾದ ಭಕ್ತಿ ಡಾಂಭಿಕತೆಯಿಂದ ಕೂಡಿರಬಾರದು. ಅದು ಆತ್ಮಶುದ್ಧಿಯಿಂದ ಕೂಡಿರಬೇಕು ಎನ್ನುವುದಕ್ಕೆ ಉತ್ನಾಳರು ತಮ್ಮ ಶರಣದಾಸರ ಭಕ್ತಿಯಲ್ಲಿ 'ದಾಸ ಸಾಹಿತ್ಯದಲ್ಲಿ ವಿಡಂಬನೆ' ಎಂಬ ಲೇಖನದಲ್ಲಿ ಹೀಗೆ ಹೇಳಿದ್ದಾರೆ. ಆತ್ಮ ಶುದ್ಧಿ ಎಂದರೆ ಜನರು ದೇಹವನ್ನು ತೊಳೆಯುವುದು ಆತ್ಮ ಶುದ್ಧಿ ಅದೇ ಮಡಿ ಎಂದು ತಿಳಿದಿದ್ದಾರೆ. ಆದರೆ ನಿಜವಾದ ಮಡಿ ಎಂದರೆ

"ಪೊಡವಿ ಪಾಲಕನ ವಾದ ಧ್ಯಾನವನು
ಬಿಡದೆ ಮಾಡುವುದು ಮಡಿಯು
ಪೊಟ್ಟೆಯೊಳಗಿನ ಕಾಮ ಕ್ರೋಧ ಮದ ಮತ್ಸರ
ಬಿಟ್ಟು ನಡೆದರೆ ಅದು ಮಡಿಯು;"
ಅಚ್ಚುತಾನಂತನ ನಾಮವ ನೆನೆದು
ಸಂಚ ಕಳೆವುದು ಅದು ಮಡಿಯು"[೫೮]

ಈ ರೀತಿಯ ಮಡಿಯಿಂದ ಆತ್ಮ ಶುದ್ಧಿಯಾದರೆ ಇದರಿಂದ ಭಕ್ತಿ ಅಚಲವಾಗಿ ಮನಸ್ಸು ಶಾಂತವಾಗಿರುತ್ತವೆ ಎಂಬುದನ್ನು ಡಾಂಬಿಕ ಭಕ್ತರಿಗೆ ಕವಿಮಾತು ಹೇಳಿದಂತಿದೆ.

ಸಮಾರೋಪ :

ಶಿವಶರಣರು ಭಕ್ತಿಯನ್ನು ಕೇವಲ ದೈವಿಕ ನೆಲೆಯಲ್ಲಿ; ಆಧ್ಯಾತ್ಮಿಕ ಪರಿಭಾಷೆಯಲ್ಲಿ ಗ್ರಹಿಸದೆ, ಅದನ್ನು ಸಮಾಜಮುಖಿಯಾಗಿಸಿರುವುದು ಹೆಚ್ಚುಗಾರಿಕೆಯಾಗಿದೆ. ಪ್ರೀತಿ, ಕರುಣೆ, ದಯೆ, ಅನುಕಂಪ ಮುಂತಾದ ಮಾನವೀಯ ಮೌಲ್ಯಗಳನ್ನು ಭಕ್ತಿಯೊಳಗೆ ಅಳವಡಿಸಿದ್ದಾರೆ. ಭಕ್ತನಾದವನು ಸಮಾಜವನ್ನು ಪ್ರೀತಿಸುವವನಾಗಿರಬೇಕು. ಸಮಾಜದ ಆಗುಹೋಗುಗಳಿಗೆ ಪ್ರೀತಿ (ಭಕ್ತಿ)ಯಿಂದ ಸ್ಪಂದಿಸಬೇಕು. ಸಮಾಜದಿಂದ ಪ್ರತಿಫಲ ಬಯಸದೆ, ಸಮಾಜವನ್ನು ಅಖಂಡವಾಗಿ ಪ್ರೀತಿಸಬೇಕು. ಅದೇ ನೈಜವಾದ ಭಕ್ತಿ. ಶಿವಶರಣರು ನೈಜಭಕ್ತಿಯ ವಿಭಿನ್ನ ನೆಲೆಗಳನ್ನು ತಿಳಿಸುವ ಕಾರ್ಯ ಕೈಗೊಂಡರು. ಭಕ್ತಿಯನ್ನು ಶಿವಶರಣರು ಸಾಮಾಜಿಕ ಮೌಲ್ಯವಾಗಿ ಪರಿಗಣಿಸಿದ್ದು ಮಹೋನ್ನತ ಸಾಧನೆಯಾಗಿದೆ.

---

೫೮ : ಶರಣ ದಾಸರ ಭಕ್ತಿ : ಪುಟ ೨೩

ವಚನ ಹಾಗೂ ಕೀರ್ತನೆಯಲ್ಲಿ ಸಾಮಾಜಿಕ ಕಾಳಜಿ :

ಬಹುಕಾಲದಿಂದಲೂ ಸಮಾಜದಲ್ಲಿ ಬೀಡು ಬಿಟ್ಟಿರುವ ಹಲವಾರು ಅನಿಷ್ಠ ಸಂಪ್ರದಾಯಗಳನ್ನು ತೊಡೆದು ಹಾಕಲೆಂದೇ ಅರಮನೆಯನ್ನು ಆಶ್ರಯಿಸಿದ್ದ ಸಾಹಿತ್ಯವನ್ನು ಗುರುಮನೆಗೆ ತಂದ ಕೀರ್ತಿ ಶರಣ ಹಾಗೂ ದಾಸವೇರಣ್ಯರಿಗೆ ಸಲ್ಲುತ್ತದೆ. ಜನ ಸಾಮಾನ್ಯರಿಗೆ ಸಾಹಿತ್ಯ ಪರಿಚಯ ಮಾಡಿಕೊಡುವುದರ ಜೊತೆಗೆ ಸಮಾಜೋದ್ಧಾರ ಕಾರ್ಯವನ್ನು ಕೈಗೆತ್ತಿಕೊಂಡರು. ಆಗಿನ ಸಂದರ್ಭದಲ್ಲಿದ್ದ ಸಾಮಾಜಿಕ ಅಂತರ ಅಂದರೆ ಮೇಲು ಕೀಳು ಎಂಬ ಬೇಧ ಭಾವ ತೊಳೆದು ಹಾಕಲು ಅದಕ್ಕೆ ಮುಖ್ಯ ಕಾರಣವಾದ ಜಾತಿ ವ್ಯವಸ್ಥೆಯನ್ನು ಟೀಕಿಸುತ್ತಾರೆ. ಭಾರತೀಯ 'ಸಮಾಜದ ಚಿಂತನ ಅಭಿಶಾಪವೆಂದರೆ ಜಾತಿ'[೫೯] ತಾರತಮ್ಯ, ಜಾತಿ ಭೇದವಿಲ್ಲದೆ ಸಮಾಜದ ನಿರ್ಮಿತಿಯ ಕನಸು ಕಂಡ ದ್ರಷ್ಟಾರ ಬಸವಣ್ಣ, ತನ್ನ ಬದುಕಿನ ಕೊನೆಯವರೆಗೂ ಅದಕ್ಕಾಗಿ ಪ್ರಯತ್ನ ಪಟ್ಟವರು. ಈ ವಿಷಯದಲ್ಲಿ ತೀವ್ರವಾಗಿ ಅವನಿಗಿದ್ದ ಕಾಳಜಿ ಅವರ ವಚನದಲ್ಲಿ ಕಾಣಬಹುದು.

"ಕೊಲುವವನೇ ಮಾದಿಗ
ಹೊಲಸು ತಿಂಬವನೇ ಹೊಲೆಯ !....."[೬೦]

ಸಮಾಜದಲ್ಲಿ ಕೆಲವರನ್ನು ಇವರೇ ಎಂದು ಗುರುತಿಸಿ ಅಳೆಯುವ ವಾಡಿಕೆ ಇದೆ. ಹೀಗೇಕೆ ಕರೆಯಬೇಕು? ಶಿವನ ಒಲುಮೆಗೆ ಪಾತ್ರರಾದವರೇ ನಿಜವಾದ ಕುಲಜರು ಎಂದಿದ್ದಾರೆ.

ಅದೇ ರೀತಿಯಾಗಿ ದಾಸರು ಕೂಡ ಸಂಪ್ರದಾಯಕ ಕುಲದ ಮೌಲ್ಯಮಾಪನ ಮಾಡದೆ ನಿಜವಾದ ಕುಲವಾವುದೆಂಬುದನ್ನು ತೋರಿಸಿಕೊಟ್ಟರು. ಕುಲಕ್ಕೆ ನವೀನಾರ್ಥವನ್ನು ಕೊಟ್ಟರು. "ಮತವನ್ನು ಮೀರಿದ ನೀತಿ, ಧರ್ಮ, ಮಾನವನ ಮೌಲ್ಯಗಳು ಇವನ್ನು ದಾಸರು ಅರಿತವರಾಗಿದ್ದಾರು, ಇವಕ್ಕೆ ಹೆಚ್ಚಿನ ಬೆಲೆ ಕೊಡುವವರಾಗಿದ್ದರು. ಇವಿಲ್ಲದೆ ತಮ್ಮ ಮತವೇ ಇರಲಿ ಅದನ್ನು ಅವರು ಒಪ್ಪುವವರಲ್ಲ ಕುಲದ ವಿಚಾರದಲ್ಲಿ ಕ್ರಾಂತಿಯನ್ನುಂಟು ಮಾಡಿದ ಕನಕದಾಸರು.

---

೫೯ : ಬಸವಣ್ಣನವರ ವಚನಗಳು – ಸಂ. ಎಲ್. ಬಸವರಾಜ

೬೦ : ಕನ್ನಡ ಸಾಹಿತ್ಯ ಚರಿತ್ರೆ – ತ. ಸು. ಶಾಮರಾಯ, ಪುಟ : ೫೪

"ಕುಲ ಕುಲವೆನ್ನುತಿಹರೇ ಕುಲ ಯಾವುದು ನೋಡಿ ಸತ್ಯ ಸಜ್ಜನ ಕೇ
ಕಸರೊಳಗೆ ತಾವರೆ ಪಟ್ಟಿಲು ಅದತಂದು ।
ಬಸಜನಾಭನಿಗರ್ವಿಸಲಿಲ್ಲವೇ ।
ಹಸುವಿನ ಮಾಂಸದೊಳುದಿಸಿದ ಷೇರವ ।
ವಸುದೆಯೊಳಗೆ ಬೂಸುರರುಣಲಿಲ್ಲವೇ।
ಮೃಗಗಳ ಮೈಯಲ್ಲಿ ಪುಳ್ಳಿದ ಕಸ್ತೂರಿ
ತೆಗೆದು ಮಾಸುವರು ವಿಭುದರೆಲ್ಲಾ ॥[೬೧]

ಎಂದು ಹೇಳಿ ಹುಟ್ಟಿನಿಂದ ಬಂದ ಕೀಳ್ತನದ ಗುಣಗಳಿಂದ ಮಾರುದೂರ ಹೋಗಿ ಶ್ರೇಷ್ಠತೆಯು ಲಭಿಸುತ್ತದೆಂಬುದನ್ನು ತೋರಿಸಿಕೊಟ್ಟರು. ಕುಲಜನಾರು ಎಂಬುದಕ್ಕೆ ಅವರು "ಸಿರಿಕಾಣನೆಲೆಯಾದಿ ಕೇಶವರಾಯನ ಚರಣ ಕಮಲವ ಕೀರ್ತಿಸುವವನೇ ಕುಲಜ"[೬೨] ಎಂದು ಉತ್ನಾಳರು ತಮ್ಮ ಲೇಖನದಲ್ಲಿ ಕನಕದಾಸರು ಕೀರ್ತನೆಯನ್ನು ಸ್ಮರಿಸಿದ್ದು ಸಮರ್ಪಕವಾಗಿದೆ.

ಡಾಂಭಿಕ ಆಚರಣೆಗಳನ್ನು ಶರಣದಾಸರು ಟೀಕಿಸಿದ್ದಷ್ಟು ಗಮನಿಸಬಹುದು. ಸತ್ತವರಿಗಾಗಿ ನಡೆಸುವ ಕರ್ಮಾಂತರಗಳ ಪೊಳ್ಳು ತನವನ್ನು ಅವರು 'ಆವ ಕರ್ಮವೊ ಇದು ಆವ ಧರ್ಮವೊ ಆವ ಕರ್ಮವೆಂದರಿಯೆ ಹಾರುವರಿದ ಬಲ್ಲರೆ' ಎಂದು ಪ್ರಶ್ನಿಸಿದ್ದಾರೆ. ಸತ್ತವನು ಉಣ್ಣುವನೆಂದು ಪಿಂಡ ಹಾಕುವುದನ್ನು ತಿಲದಾನ ಮಾಡುವುದನ್ನು ಲೇವಡಿ ಮಾಡಿದ್ದಾರೆ.

"ಎಳ್ಳು ದರ್ಬೆ ಕೈಲಿ ಪಿಡಿದು
ಪಿತರ ತೃಪ್ತಿ ಪಿಡಿಸುತೀರಿ
ಎಳ್ಳು ಮೀನು ನುಂಗಿ ಹೋಯಿತು
ದರ್ಬೆ ನೀರೊಳು ಹರಿದು ಹೋಯಿತು"[೬೩]

ಇಂಥ ಆಚರಣೆಗಳನ್ನು ಹೇಳುವವರು ಮಾಡುವವರು ಇಬ್ಬರೂ ಮೂರ್ಖರೆಂದು ಕನಕದಾಸರು ಹೇಳಿದ್ದಾರೆ. ಹಾಗೆಯೇ ಧಾರ್ಮಿಕತೆಯ ಪ್ರದರ್ಶನವನ್ನು ಮಾಡಿ ಬೂಟಾಟಿಕೆಯಿಂದ ಮೆರೆಯುವ ನಡತೆಗೆಟ್ಟ ಜನರು ಯಾವ ಧರ್ಮದವರಾಗಿದ್ದರೂ ಕನಕದಾಸರು ಅವರ ಮೇಲೆ ಕೆಂಡಕಾರಿದ್ದಾರೆ.

---

೬೧ : ಕನ್ನಡ ಸಾಹಿತ್ಯ ಚರಿತ್ರೆ – ತ. ಸು. ಶಾಮರಾಯ, ಪುಟ : ೧೩೦
೬೨ : ಶರಣ ದಾಸರ ಭಕ್ತಿ – ಎಸ್. ಬಿ. ಉತ್ನಾಳ, ಪು–೨೩
೬೩ : ಶರಣ ದಾಸರ ಭಕ್ತಿ – ಎಸ್. ಬಿ. ಉತ್ನಾಳ, ಪುಟ : ೨೩

"ತೀರ್ಥವನು ಪಿಡಿದವರೆಲ್ಲ ತಿರುನಾಮದಾರಿಗಳೇ? ಜನ್ಮ!
ಸಾರ್ಥಕವಿಲ್ಲದವರೆಲ್ಲ ಭಾಗವತರೆ?"
ಮೂಗಿಡಿದು ನೀರೊಳಗೆ ಮುಳುಗಿ ಜಗತಪ ಮಾಡಿ
ಭಾಗವತ ಶಾಸ್ತ್ರಾದಿಗಳನ್ನೆಲ್ಲ ಓದಿ
ಬಾಗಿ ಪರಸತಿಯರನ್ನು ಬಯಸಿ ಕಣ್ಣಿಡುವಂತ
ನೀತಿ ತಪ್ಪಿದವರೆಲ್ಲ ದೇವ ಬ್ರಾಹ್ಮಣರೆ?"[೬೪]

ಎಂದು ಪ್ರಶ್ನಿಸುವ ಕನಕದಾಸರು, ಯಾವ ಧರ್ಮದ ಅನುಯಾಯಿಗಳಿಗೂ ರಿಯಾಯಿತಿಯನ್ನು ತೋರದೆ ಧರ್ಮದ ಅನುಯಾಯಿಗಳಿಗೂ ರಿಯಾಯಿತಿಯನ್ನು ತೋರದೆ ಭಾಗವತ, ವೈಷ್ಣವ, ಲಿಂಗವಂತ, ಮುಸಲ್ಮಾನ, ಗೋಸಾಯಿ ಮುಂತಾದ ಎಲ್ಲ ಪಂಥದ ಆಷಾಡಭೂತಿಗಳನ್ನು ಟೀಕಿಸಿದ್ದಾರೆ.

ತಮ್ಮ ಕಾಲದ ಸಾಮಾಜಿಕ ಅನಿಷ್ಟಗಳಲ್ಲಿ ಕನಕದಾಸರನ್ನು ಬಹುವಾಗಿ ಕಾಡಿದುದು ಮನುಷ್ಯ ಮನುಷ್ಯನನ್ನು ಹುಟ್ಟಿನ ಕಾರಣದಿಂದ ಮೇಲು – ಕೀಳು ಎಂದು ಹೀಗಳೆವ ಕ್ರೂರ ವ್ಯವಸ್ಥೆ ಕನಕದಾಸರು ಈ ಅವಮಾನದಿಂದ, ತಿರಸ್ಕಾರದಿಂದ ಸ್ವತಃ ಸಾಕಷ್ಟು ನೋವನ್ನು ಉಂಡಿದ್ದಿರಬೇಕು. ಆದರೆ ಅವರ ಕೀರ್ತನೆಗಳಲ್ಲಿ ಎಲ್ಲಿಯೂ ಈ ಶೋಷಣೆಯ ವಿರುದ್ಧಾದ ಆಕ್ರೋಶವಾಗಲಿ, ದ್ವೇಷ ಭಾವನೆಯಾಗಲು ಕಾಣಿಸದಿರುವುದು ಅವರ ಮನಸ್ಸಿನ ಪರಿಪಕ್ವತೆಗೆ ನಿದರ್ಶನವಾಗಿದೆ. ಪುರಂದರದಾಸರಾದರೊ ಸ್ವಂತಕ್ಕೆ ಅಂಥ ಬೇಧಭಾವದ ಕಾವು ತಟ್ಟದೆ ಇದ್ದರೂ, ಕೇವಲ ಮಾನವೀಯ ಭಾವದಿಂದ ಆ ಕುಪದ್ಧತಿಯನ್ನು ತಮ್ಮ ಕೀರ್ತನೆಗಳಲ್ಲಿ ತುಂಬಾ ಕಠೋರವಾದ, ತಿರಸ್ಕಾರ ಯುಕ್ತವಾದ ಭರ್ತ್ಸನೆಗೆ ಒಳಪಡಿಸಿದ್ದಾರೆ. ಅವರು ತುಂಬ ಸಮಚಿತ್ತದಿಂದ ಈ ವಿಷಯವನ್ನು ಪರಿಶೀಲಿಸಿದ್ದಾರೆ. ಜ್ಞಾನಿಯಾದ ಒಬ್ಬ ಬೋಧಕನ ನೆಲೆಯಲ್ಲಿ ಅವರು ತಮ್ಮ ಕೀರ್ತನೆಗಳಲ್ಲಿ ಕುಲಭೇದದ ನಿರರ್ಥಕತೆಯನ್ನು ಜನರಿಗೆ ವಿಶದಪಡಿಸಲು ಪ್ರಯತ್ನಪಟ್ಟಿದ್ದಾರೆ. ಕುಲದ ಕಾರಣಕ್ಕಾಗಿ ಬಡಿದಾಡುವವರಿಗೆ ಅವರು "ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?" ಎಂದು ಪ್ರಶ್ನೆಯನ್ನು ಹಾಕಿದ್ದಾರೆ.

ಯಾವ ಯಾವ ಜನ್ಮದಲ್ಲಿ ಯಾವ್ಯಾವ ಜಾತಿಯಲ್ಲಿ ಅವರು ಹುಟ್ಟಿರಬಹುದಾದುದನ್ನು ಏನೇನು ವಸ್ತುಗಳನ್ನು ತಿಂದದ್ದನ್ನು ಜ್ಞಾಪಿಸಿ, ಸಕಲ ಕುಲಕ್ಕೆ ಜೀವನಾಧಾರವಾದ ನೀರಿಗೆ ಯಾವ ಜಾತಿ ಇದೆ ಎಂದು ಕೇಳಿದ್ದಾರೆ. ಇನ್ನೊಂದು ಕೀರ್ತನೆಯಲ್ಲಿ ಸತ್ಕುಲವೆನ್ನುವುದು ಜಾತಿಯಲ್ಲಿ ಸತ್ಯ, ಸದಾಚಾರ, ಸೌಜನ್ಯಗಳೇ ಕುಲವಲ್ಲದೇ

---

೬೪ : ಭಕ್ತಿ ಸಾಹಿತ್ಯ – ಪು–೯೬, ಹಂಪಿ ವಿ.ವಿ.

ಹುಟ್ಟಿನಿಂದ ಯಾರೂ ಮೇಲು ಕೀಳುಗಳಾಗುವುದಿಲ್ಲ ಎನ್ನುವುದನ್ನು ಅನೇಕ ದೃಷ್ಟಾಂತಗಳಿಂದ ವಿವರಿಸಿದ್ದಾರೆ. ಕುಲ ಕುಲ ಕುಲವೆನ್ನುತಿಹರೊ। ಕುಲವಾವುದೋ ಸತ್ಯ ಸುಜನರಿಗೆ। ಎಂದು ಮಾರ್ಮಿಕವಾಗಿ ಕೇಳಿದ್ದಾರೆ. ಜೊತೆಗೆ ಡಾಂಭಿಕತೆಯ ಪೂಜೆಯನ್ನು ತೀಟಿಕಿಸಿದ್ದಾರೆ.

ಹರಿಹರರ ಪೂಜೆಗಳು ಹಗರಣಗಳಾದವು
ಉರಿಮೋರೆ ಚಾಮುಂಡಿ ಶಕ್ತಿಗಳು
ಕುರಿಕೋಣ ನೈವೇದ್ಯ ಧೂಪ ದೀಪಗಳಿಂದ
ಪರಮಭಕ್ತಿ ಮಾಡಿ ಪೂಜಿಸುವರಯ್ಯ ॥[೬೫]

ಎಂದು ನೊಂದು ಹೇಳಿದ್ದಾರೆ. ಸಮಾಜದಲ್ಲಿ ಯಾವುದೆಲ್ಲ ದ್ರೋಹ ಎಂದು ತಿಳಿಸಿ, ಜನ ಅಂಥವುಗಳಿಂದ ದೂರವಿರಬೇಕೆಂದು ದ್ರೋಹಗಳ ಪಟ್ಟಿಯನ್ನು ಒಂದು ಕೀರ್ತನೆಯಲ್ಲಿ ನೀಡಿದ್ದಾರೆ.

"ದ್ರೋಹಗಳ ವಿವರನು ನಾ ಪೇಳ್ವನಯ್ಯ ॥
ಕೂಡಿದೆಡೆಯಲ್ಲಿ ಕಡವೆಸಗುವನೆ ದ್ರೋಹಿ
....
ತನ್ನ ಗುರು ಸತಿಯ ಬಯಸುವವನೇ ದ್ರೋಹಿ"[೬೬]

ಈ ಎಲ್ಲಾ ಸ್ನೇಹಗಳಿಂದ ಜನ ಮುಕ್ತರಾದರೆ ಆ ಸವಾಜ ಆದರ್ಶ ಸಮಾಜವಾಗುತ್ತದೆ. ಇಂಥ ಆದರ್ಶ ಸಮಾಜ ನಿರ್ಮಾಣದ ಸೂತ್ರಗಳನ್ನು ತಮ್ಮ ಕೀರ್ತನೆಯಲ್ಲಿ ಇವರ ಸಮಾಜ ಪೂಜೆಯ ಜ್ಯೋತಕವೇ ಉತ್ನಾಳರು ಬರೆದ ಮಹಾಂತ ಜೋಳಿಗೆ ಲೇಖನವಾಗಿದೆ. ಜಂಗಮ ಸ್ವಾಮಿಯು ತನಗಾಗಿ ಜೀವಿಸುವದಿಲ್ಲ. ಲೋಕ ಕಲ್ಯಾಣಕ್ಕಾಗಿಯೇ ಜೀವಿಸಿ, ಭಕ್ತರ ಉದ್ಧಾರಕ್ಕಾಗಿಯೇ ತಾವು ಲಿಂಗ ಪೂಜಾದಿ ಕರ್ಮಗಳನ್ನು ವಹಿಸಿಕೊಂಡಿರುತ್ತಾರೆ. ಜಂಗಮ ಲಿಂಗ ಪೂಜೆಯೊಂದಿಗೆ ಸಮಾಜ ಪೂಜೆ ನಡೆಯಬೇಕೆಂಬ ಆದ್ಯ ಕರ್ತವ್ಯದೊಂದಿಗೆ ಸಾಗಿದಾಗ ಸಾಮಾಜಿಕ ದುಃಖ, ದೌರ್ಬಲ್ಯ, ದುರಂತಗಳು ದುಶ್ಚಟಗಳವಾಗುಳ್ಳಿ ನಗ್ನ ಚಿತ್ರ ಅವರ ಕಣ್ಮುಂದೆ ಮೂಡಿತು. ಸುಖ ಸಂತೋಷಗಳಿಂದ ಇರಬಹುದಾದ ಸಂಸಾರಗಳು ಇಂತಹ ದೌರ್ಬಲ್ಯ, ದುಶ್ಚಟಗಳಿಗೆ ಗುರಿಯಾಗಿ ನರಳುತ್ತಿರುವರು. ಸರ್ವ ಸಾಮಾನ್ಯವಾಗಿರುವ ವಿಕೃತ ಚಿತ್ರ ಭೂತಾಕಾರವಾಗಿ ಗೋಚರಿಸಿತು. ಹೊಗೆಬತ್ತಿ, ತಂಬಾಕುಗಳಂತಹ ವೈಯಕ್ತಿಕ ಸಾಮಾನ್ಯ ಚಟಗಳು ಹಾಗಿರಲಿ;

---

೬೫ : ಶರಣ ದಾಸರ ಭಕ್ತಿ, ಪುಟ – ೨೫
೬೬ : ಶರಣ ದಾಸರ ಭಕ್ತಿ, ಪುಟ – ೨೭

ವ್ಯಕ್ತಿಗೂ ಹಾಗೂ ಸಮಾಜಕ್ಕೂ ಮಾರಕವಾದ ಜೂಜು, ಮಟಕಾ, ಇಸ್ಪೀಟು, ಕುಡಿತ, ವ್ಯಭಿಚಾರಾದಿ ಅನಾಚಾರಗಳಿಗೆ ದಾಸರಾದವರನ್ನು ಚಾಡಿ, ಸುಳ್ಳು, ಮತ್ಸರ ಇತ್ಯಾದಿಗಳು; ವರದಕ್ಷಿಣೆ, ಅಹಂಕಾರ, ಶೋಷಣೆ, ದೇವದಾಸಿ ಪದ್ಧತಿಯಂತಹ ಅನಿಷ್ಠ ಸಂಪ್ರದಾಯಗಳನ್ನು ಕಂಡು ಮರುಗಿದ ಮನಸ್ಸು ಸುಮ್ಮನೇ ಕೂಡ್ರದೆ ಇದಕ್ಕೊಂದು ಉಪಾಯ ಹುಡುಕಿತು. ಅದೇ ಮಹಾಂತಜೋಳಿಗೆ. ಮಾನವೀಯ ಅನುಕಂಪದಿಂದ ತಮ್ಮನ್ನೇ ತಾವು ಅರ್ಪಿಸಿಕೊಂಡು ಜಂಗಮೋಪದೇಶದ ಶಾಸ್ತ್ರವೈದ್ಯನಾಗಿ, ಸಮಸ್ತ ಸಮಾಜದ ಚಿಕಿತ್ಸೆಗಾಗಿ ತೊಡಗಿ ಭವರೋಗದ ವೈದ್ಯರಾದರು.[೬೭]

ನಿರಂತರವಾಗಿ ಬೋಧಿಸಿದ ಕನಕದಾಸರ ಸಾಮಾಜಿಕ ಪ್ರಜ್ಞೆ ಗಾಢವಾದದ್ದು, ಉನ್ನತವಾದದ್ದು.

ಈ ಎಲ್ಲ ದ್ರೋಹಗಳನ್ನು ಬಿಟ್ಟು ಒಳ್ಳೆಯ ಬದುಕನ್ನು ಬದುಕಿ ತೋರಿಸಬೇಕೆಂಬುದೇ ಶರಣರ ಅಭಿಮತ. ಅದಕ್ಕಾಗಿ ದೇವಲೋಕ ಮರ್ತ್ಯಲೋಕ ಎಂದು ಪ್ರತ್ಯೇಕವಾದ ಲೋಕಗಳಿಲ್ಲ. ಸತ್ಯವನ್ನು ನುಡಿಯುವುದೇ ದೇವಲೋಕ. ಮಿತ್ಯ ನುಡಿಯುವುದೇ ಮರ್ತ್ಯಲೋಕ. ಅನಾಚಾರವಿದ್ದಲ್ಲಿ ಅದುವೇ ನರಕಲೋಕ. ಈ ಮಾತಿಗೆ ಕೂಡಲಸಂಗಮನೇ ಪ್ರಮಾಣ ಎಂದು ಬಸವಣ್ಣ ಹೇಳಿರುವುದು ಅವನ ದೃಢ ನಂಬಿಕೆಯ ದ್ಯೋತಕವಾಗಿದೆ.

ಅದರಂತೆಯೇ ಇಂತಹ ವಿಚಾರಗಳ ಚರ್ಚೆಗೆ ಕಲ್ಯಾಣದ ಶೂನ್ಯ ಸಿಂಹಾಸನ ಪೀಠಾಧ್ಯಕ್ಷತೆಯಲ್ಲಿ ಅನುಭವ ಮಂಟಪದಲ್ಲಿ ನಡೆಯುತ್ತಿದ್ದವು. ೧೨ ನೇ ಶತಮಾನದಲ್ಲಿ ನಡೆದ ಹಲವಾರು ಸಮಾಜೋದ್ಧಾರ ಕಾರ್ಯಗಳ ಪರಂಪರೆಯನ್ನು ಮುಂದುವರೆಸಿಕೊಂಡು ಬಂದುದನ್ನು ಈಗ ನಾವು ಕಾಣುವ ವಿರಕ್ತ ಮಠಗಳಲ್ಲಿ ಎಂದು ಹೇಳಬಹುದು.

ವಿರಕ್ತಿ ಮಠದವರು ಕಲ್ಯಾಣದಲ್ಲಿ ೧೨ ನೇ ಶತಮಾನದಲ್ಲಿ ಶೂನ್ಯ ಪೀಠವನ್ನು ತಮ್ಮ ಮೂಲ ಪೀಠವಾಗಿ ಪರಿಗಣಿಸಿದರು. ಇಂತಹ ಜಾಗೃತ ವಿರಕ್ತ ಪೀಠಗಳಲ್ಲಿ ಚಿತ್ತರಗಿ ನಿರಂಜನ ಪೀಠ ಒಂದು ೧೬ ನೇ ಪೀಠಾಧಿಪತಿಗಳಾದ ಶ್ರೀ ಮ.ನಿ.ಪ್ರ. ವಿಜಯಮಹಾಂತ ಶಿವಯೋಗಿಗಳು ಪವಾಡ ಪುರುಷರು. ಚಿತ್ತರಗಿ ಚಿಜ್ಯೋತಿಗಳು ಈಗಿನ ಶಿವಯೋಗ ಮಂದಿರಕ್ಕೆ ಸ್ಥಳವನ್ನಾಧರಿಸಿದ ಮಹಿಮಾ ಪುರುಷರು. ಲಿಂಗಪೂಜೆಗಿಂತಲೂ ಸಮಾಜ ಪೂಜೆ ಮಿಗಿಲೆಂದು ಪೂಜ್ಯ ಹಾನಗಲ್ಲ ಕುಮಾರ ಸ್ವಾಮಿಗಳಿಗೆ ಮಹಾಚೇತನ ಶಕ್ತಿಯಾಗಿದ್ದರು. ಇವರ ಸಮಾಜ ಸೇವೆಯ / ಪೂಜೆಯ ಜ್ಯೋತಕವೇ ಉತ್ನಾಳರು ಬರೆದ ಮಹಾಂತ ಜೋಳಿಗೆ ಲೇಖನವಾಗಿದೆ.

---

೬೭ : ಅನುಭಾವ ಸಾಹಿತ್ಯ ಚಿಂತನ – ಎಸ್. ಬಿ. ಉತ್ನಾಳ, ಪುಟ – ೪೫

೧೨ ನೇ ಶತಮಾನದ ಶರಣರು ನಾಡಿನ ನಾಡಿಯನ್ನು ಹಿಡಿದಾಗ ಸಮಾಜಕ್ಕೆ ಅಂಟಿದ ಅಸ್ಪೃಶ್ಯತೆ ಮೇಲು-ಕೀಲು, ಹೆಣ್ಣು-ಗಂಡೆಂಬ ಬೇಧ-ಭಾವ ದೇವರ ಬಗ್ಗೆ ತಪ್ಪು ತಿಳುವಳಿಕೆ, ಸ್ವರ್ಗ ನರಕಗಳ ವಿಪರ್ಯಾಸ, ಕಾಯಕದಲ್ಲಿ ತಾರತಮ್ಯತೆಯಿಂದ ಕೂಡಿದ ಮಾನವ ದಾನವನಾದ ರೀತಿಯನ್ನು ಕಂಡು ಅನುಭವ ಮಂಟಪ ಅವಿರ್ಭವಿಸಿತು. ನಾಡಿನ ನಾನಾ ಭಾಗದ ಶರಣರ ಆಗಮನಕ್ಕೆ ನಾಂದಿಯಾಯಿತು.

ಲೋಕ ಕಲ್ಯಾಣಕ್ಕಾಗಿ ಅಂದು ಕಲ್ಯಾಣ ಸೇರಿದರೆ ಇಂದು ಲೋಕ ಕಲ್ಯಾಣಕ್ಕಾಗಿ ಅವರ ಹತ್ತಿರವೇ ಹೋಗಿ "ಮಹಾಂತ ಜೋಳಿಗೆ" ಬಂದಿಹುವುದು. ದುರ್ವ್ಯಸನಗಳ ಭಿಕ್ಷೆ ಹಾಕಿರಿ. ಇದ್ದು ಬಿದ್ದುದ ಕಳೆದು ಕೊಂಡಿರಿ, ಬಡತನದಿ ಬೆಂಡಾದಿರಿ; ಯಾವ ಮೊಗದಲಿ ಗೆಲುವು ಕಾಣದು. ಕಾರಣ ದುರ್ಗುಣ, ದುಶ್ಚಟಗಳ, ದುರ್ನಿತಿಗಳ ದಾರುಣದಲ್ಲಿ "ಬಳಲುತ್ತಿರುವವರ ಹತ್ತಿರ ಬಾಗಿ ಬಂದಿರುವೆ ವಿಷ ಭಿಕ್ಷೆ ಹಾಕಿರಿ. ಇದೇ ನಿಮ್ಮಿಂದ ಬೇಡುವ ಕಾಣಿಕೆ" ಎಂದಾಗ ಭಕ್ತರ ಮನ ಮಿಡಿದು ಹೃದಯ ತೆರೆದು, ಜೋಳಿಗೆಗೆ ತಲೆಬಾಗಿದಾಗ ಶ್ರೀಗಳ ಆನಂದ ಭಾಷ್ಪಗಳು ಬಳ ಬಳಸಿ ಬೀಳುವಾಗ ಯಾವ ಹೃದಯ ಎಷ್ಟೇ ಕಠಿಣವಾಗಿರಲಿ ಕರಗಿ ನೀರಾಗಿ ಅವರ ಪಾದಸ್ಪರ್ಶ ತೊಳೆಯುವ ದೃಶ್ಯ ಕಣ್ಣಾರೆ ಕಾಣಬೇಕು. ಆ ದೃಶ್ಯ ಶಬ್ದಗಳಲ್ಲಿ ತುಂಬುವ ಶಕ್ತಿ ಯಾವ ಸಾಹಿತಿಗೂ ಅಸಾಧ್ಯವೆಂದು ಹೇಳಿದರೆ ತಪ್ಪಿಲ್ಲ.

ಖಡ್ಗದಿಂದ ಸಾಧಿಸಲಾಗದ ಕ್ರಾಂತಿಯನ್ನು ಕರುಣೆಯಿಂದ ಒಲುಮೆಯಿಂದ ಸಾಧಿಸುವದು ಸಾಧ್ಯ ಎಂಬುದು ಶರಣ ತತ್ವದಿಂದ ಆಧುನಿಕ ಅವತಾರವಾಗಿ ಕಾಣುತ್ತದೆಂಬ ಡಾ॥ ತಿಪ್ಪೇರುದ್ರ ಸ್ವಾಮಿರವರ ಕಲ್ಪನೆ ಮಹಾಂತ ಜೋಳಿಗೆಗೆ ಯೋಗ್ಯವಾಗಿದೆ. ಈ ಲೇಖನವನ್ನು ಓದಿದ ಜನಸಾಮಾನ್ಯರು, ವ್ಯಸನಿಗಳು ಸಹಾ ತಮ್ಮ ವ್ಯಸನಗಳನ್ನು ಬಿಟ್ಟು ಬಿಡಬೇಕೆಂದುಕೊಳ್ಳುವಷ್ಟು ಪರಿಣಾಮಕಾರಿಯಾಗಿ ಬರೆದಿದ್ದಾರೆ.

ಉತ್ನಾಳರವರು ಇನ್ನೊಂದು ಲೇಖನದಲ್ಲಿ ಹೇಳುವಂತೆ ಈ ಸಂಸಾರ ಬಂಧನ ಎಂದು ಹೇಳುವವರು ಸಂಸಾರದಲ್ಲಿಯೇ ಇರುತ್ತಿದ್ದರು. ಪಾಪ ಪ್ರಜ್ಞೆಯಿಂದ ನಮ್ಮನ್ನು ಪಾವನ ಮಾಡುವ ಭೂಲೋಕದ ದೇವರಂತೆ ಹೇಳಿಕೊಳ್ಳುವ ಮಟ್ಟಕ್ಕೂ ಹೋದರು. ಇಂತಹ ವಿಷಯ ಸ್ಥಿತಿಯಲ್ಲಿ ಸುಳ್ಳಿನ ವಿಷಯವನ್ನು ಕಿತ್ತು ಸತ್ಯದ ಅಮೃತವನ್ನು ವಚನ ಧಾರೆಯಿಂದ ಎರೆದರು. ಪಂಚಾಂಗ, ಜ್ಯೋತಿಷ್ಯ ಹಾಗೂ ಶಕುನಾದಿಗಳಲ್ಲಿ ಸಿಲುಕಿಸಿ, ಸಣ್ಣ ಮಾಡುತ್ತಿರುವ ಸಮಾಜವನ್ನು ಕಂಡ ಶರಣರು ಮೋಸದ ಶಾಸ್ತ್ರಗಳನ್ನೆಲ್ಲಾ ಭಕ್ತಿ ಭಾವಗಳ ಪುಟಕ್ಕಿಟ್ಟು ಎದೆಯೊಲವನ್ನು ಲಲಿತ ಮಧುರ ಸುಂದರ ವಚನಾಮೃತವು ಜನರ ಚಿತ್‌ವೃತ್ತಿಯನ್ನು ತಿದ್ದಿ ಮೃತ್ಯುಲೋಕವನ್ನೇ ಕರ್ತಾರನ ಕಮ್ಮಟ ಮಾಡಿದರು.

[illegible]

ಪಂಚಾಂಗ ನಂಬಿ ಜೋಯಿಸರ ಕರೆಯಿಸಿ ಕೇಳಿ ಸಕಲ ಕಾರ್ಯಕ್ಕೂ ಸಿದ್ಧಿಯೆಂದು ನಂಬುವ ಹಂದಿಗಳೇನು ಬಲ್ಲರು ಶಿವಾಚಾರ ಪದ್ಧತಿ? ಎಂದು ಪ್ರಶ್ನೆ ಹಾಕಿದ್ದಾನೆ. ಶುಭಗಳಿಗೆ ಕೇಳಿ ಲಗ್ನವ ಮಾಡಿದ ಅನಂತರ ಜನರ ಹೆಂಡಿರು ಮುಂಡೆಯರಾಗಿ ಹೋದ ದೃಷ್ಟಾಂತವ ಕಂಡೂ ಪಂಚಾಂಗ ಕೇಳಿದವರಿಗೆ ತಪ್ಪದು ನಾಯಿ ನರಕ ಎಂದು ಬಸವಣ್ಣನ ದೃಷ್ಟಿಯಲ್ಲಿ ಪಂಚಾಂಗ ಎಂಬ ಲೇಖನದಲ್ಲಿ ಬಹಳ ಮಾರ್ಮಿಕವಾಗಿ ಇಂದಿನ ಮೂಢನಂಬಿಕೆಗಳೆಲ್ಲಾ ಒಂದಾದ ಪಂಚಾಂಗದ ಅತಿಯಾದ ಬಳಕೆಯ ಕುರಿತು ಹೇಳಿದ್ದಾರೆ.

ಈ ಪಂಚಾಂಗ ನೋಡುವ ರೂಢಿ ಇನ್ನೂ ಮುಂದುವರೆಯುತ್ತಿರುವುದರಿಂದ ಉತ್ನಾಳರು ತಮ್ಮ ಲೇಖನದಿಂದ ಜನರಿಗೆ ಅರಿವಿಗೆ ಬರುವಂತೆ ಪಂಚಾಂಗದ ವೈಜ್ಞಾನಿಕತೆ ಎಷ್ಟು, ಮೂಢನಂಬಿಕೆ ಎಷ್ಟು, ಎಷ್ಟನ್ನು ನಂಬಬೇಕು. ಎಷ್ಟು ಬಿಡಬೇಕು ಎಂಬುದನ್ನು ಜನಸಾಮಾನ್ಯರಿಗೆ ತಿಳಿಯುವ ರೀತಿ ಹೇಳಿದ್ದಾರೆ.

ಮಾನವ ಜನಾಂಗದ ಸಮಾನತೆಯನ್ನು ಸಾರಿದ್ದಾರೆ. ಮನುಷ್ಯ ಹುಟ್ಟಿನಿಂದ ಶ್ರೇಷ್ಠನಾಗುವುದಿಲ್ಲ. ಆತನ ಗುಣ, ವ್ಯಕ್ತಿತ್ವ, ಚಟುವಟಿಕೆ, ಮಾಡುವ ಕಾಯಕ ಕೈಗೊಳ್ಳುವ ನಿರ್ಧಾರ, ಸಮಾಜೋಪಯೋಗಿ ಕಾರ್ಯ ಧೀರೋದಾತ್ತತೆ ಇತ್ಯಾದಿಗಳಿಂದ ಮಾನವ ಶ್ರೇಷ್ಠನಾಗುತ್ತಾನೆ. ಹುಟ್ಟಿನ ಕಾರಣವಾಗಿ ಯಾರೂ ಶ್ರೇಷ್ಠರಲ್ಲ; ಹುಟ್ಟಿನಿಂದಾಗಿಯೇ ಯಾರೂ ಕನಿಷ್ಠರಲ್ಲ. ಅವರವರ ಸೇವೆ, ಸಾಧನೆ, ವ್ಯಕ್ತಿತ್ವಗಳಿಂದ ವ್ಯಕ್ತಿ ದೊಡ್ಡವನಾಗುತ್ತಾನೆ ಎಂಬುದು ಶರಣರ ಮತ್ತು ದಾಸರ ಅಭಿಮತವಾಗಿದೆ. ಸಮಾನತೆ, ಜನಪರ ನಿಲುವು ಸಮಾಜಪರ ಒಲವು ಶರಣರಲ್ಲಿ ಎದ್ದು ಕಾಣುತ್ತದೆ. ದಾಸರಲ್ಲಿ ಸಾಮಾಜಿಕ ಕಾಳಜಿಯುಳ್ಳ ಕೀರ್ತನಗಳಲ್ಲಿ ಅಲ್ಲಲ್ಲಿ ಈ ಅಂಶ ಗೋಚರಿಸುತ್ತದೆ.

ವಚನ ಹಾಗೂ ಕೀರ್ತನೆಗಳಲ್ಲಿ ಸಾಹಿತ್ಯಿಕ ಸೌಂದರ್ಯ ಹಾಗೂ ಸಂಗೀತ ಪ್ರೌಢಿಮೆ:

ಬಸವಣ್ಣ ಶ್ರೇಷ್ಠ ವಚನಕಾರ ಎನ್ನುವ ಅಭಿಪ್ರಾಯ ಸರ್ವಸಮ್ಮತವಾದದ್ದು. ಅವನ ವಚನಗಳ ಸೊಗಸಿಗೆ, ಅವನ ಕವಿ ಸಹಜವಾದ ಭಾವತೀವ್ರತೆಯ ಮುಖ್ಯ ಕಾರಣ, ಬಹುಶಃ ಅಕ್ಕಮಹಾದೇವಿಯೊಬ್ಬಳನ್ನು ಹೊರತುಪಡಿಸಿದರೆ ಇತರೆಲ್ಲ ವಚನಕಾರರ ವಚನಗಳಲ್ಲಿ ಕಂಡುಬರುವದಕ್ಕಿಂತಲೂ ಹೆಚ್ಚಿನ ಭಾವತೀವ್ರತೆ ಬಸವಣ್ಣನ ವಚನಗಳಲ್ಲಿ ಕಂಡು ಬರುತ್ತದೆ. ಕವಿ ಕಣವಿಯವರು ಹೇಳಿರುವಂತೆ "ಮರ್ತ್ಯಲೋಕವನ್ನು ಕರ್ತಾರನ ಕಮ್ಮಟವೆಂದು ಹೇಳುವ ಅವರ ದೃಷ್ಟಿ ನೆಲದ ಬದುಕಿಗೆ ಸಮೀಪವಾಗಿ ಮಾನವೀಯ ಭಾವನೆಗಳ ಕಾವಿನಲ್ಲಿ ಕಂಪೊಡೆಯಿತು. ಅವರು ನೇರವಾಗಿ ಸಾಹಿತ್ಯ ಸೃಷ್ಟಿಗೆ ಕೈ

ಹಾಕದಿದ್ದರೂ ಸಾಹಿತ್ಯ ಅವರನ್ನರಿಸಿಕೊಂಡು ಬಂದು ಅವರ ಕೈ ಹಿಡಿಯಿತು. ಕನ್ನಡದ ಆಡು ನುಡಿಯ ಶಕ್ತಿಯನ್ನು, ಸೊಗಸನ್ನು, ಸಲಿಗೆಯನ್ನು, ಸಹಜತೆಯನ್ನು ಅವರ ವಚನಗಳು ಹೊರ ಹೊಮ್ಮಿದವು.[೬೮]

ಶಿವಶರಣರ ಗೀತೆಗಳು ಶುದ್ಧ ಗೇಯ ಕೃತಿಗಳಾಗಿದ್ದು ರಾಗ, ತಾಳ ನಿರ್ದೇಶನದೊಂದಿಗೆ ದೊರೆತಿದೆ. ಶರಣರಿಗೆ ಸಂಗೀತ ಪ್ರೌಢಿಮೆ ಇತ್ತೆಂಬುದರ ಬಗ್ಗೆ ಸಂದೇಹಕ್ಕೆ ಅವಕಾಶವಿಲ್ಲ. ಬಸವಣ್ಣನವರ ವಚನದಲ್ಲೇ ಒಂದು ಕಡೆ 'ಬತ್ತೀಸರಾಗ'[೬೯] ದ ಪ್ರಸ್ತಾಪವಿದೆ. ವಾದ್ಯಗಳನ್ನು ಪ್ರತೀಕಗಳಾಗಿ ಬಳಸಿದ ಉದಾಹರಣೆಗಳಿವೆ. ಸಕಲೇಶ ಮಾದರಸರ ವೀಣಾವಾದನ. ಮರುಳಸಿದ್ದರ ಕಿನ್ನರಿ, ಬಸವೇಶ್ವರರ ದಂಡಿಗೆ, ಬಾಹೂರು ಬ್ರಹ್ಮಯ್ಯನ ತಾಳ. ಪ್ರಭುವಿನ ಮೃದಂಗವಾದನ ಸುಪ್ರಸಿದ್ಧವಾಗಿವೆ. ಹೀಗಾಗಿ ಶಿವಶರಣರು ವಚನಗಳೊಂದಿಗೆ ಆಗಾಗ ಹಾಡುಗಳನ್ನು ಬರೆದುದರಲ್ಲಿ ಆಶ್ಚರ್ಯವಿಲ್ಲ. ಇಂಥ ಹಾಡುಗಳು ತಾತ್ವಿಕವಾಗಿಯೂ, ಸ್ತುತಿ ಪರವಾಗಿಯೂ, ಗುಂಬವಾಗಿಯೂ ಇವೆ. ಇದರ ಜೊತೆಗೆ ಸಾಮಾಜಿಕ ವಿಡಂಬನೆಯ ವಚನಗಳು ಇವೆ ಎಂಬುದನ್ನು ಸಹ ಉತ್ನಾಳರವರು ತಮ್ಮ ಶರಣ ದಾಸರ ಭಕ್ತಿ ಕೃತಿಯಲ್ಲಿ ಡಾಂಭಿಕ ಭಕ್ತಿಯ ಕುರಿತು ಅಲ್ಲಮಪ್ರಭು ಹೇಳಿರುವ ವಚನ ಪ್ರಸ್ತುತವೆನಿಸಿದನ್ನು ಗಮನಿಸಬಹುದು.

> "ಮಠವೇಕೊ, ಪರ್ವತವೇಕೋ, ಜನವೇಕೋ ನಿರ್ಜನವೇಕೋ
> ಚಿತ್ತ ಸಮಾಧಾನವುಳ್ಳ ಶರಣರಿಗೆ;
> ಮತ್ತೆ ಹೊರಗಣ ಚಿಂತೆ ಧ್ಯಾನ ಮೌನ ಜಪತಪವೇಕೋ
> ತನ್ನ ತಾನರಿವ ಶರಣಂಗೆ ಗುಹೇಶ್ವರ"[೭೦]

ಇಂತಹ ಹಾಡುಗಳನ್ನು ಬರೆಯಲು ಬಸವೇಶ್ವರ ಮೊದಲಾದವರಿಗೆ ಪ್ರೇರಣೆ ಎಲ್ಲಿಂದ ದೊರೆತಿರಬಹುದು ಎಂಬ ಬಗ್ಗೆ ಹೆಚ್ಚು ಯೋಚಿಸಬೇಕಾದ ಪ್ರಮೇಯವಿಲ್ಲ. ಶ್ರೀ ವಿಜಯನ ಕವಿರಾಜಮಾರ್ಗದಲ್ಲಿ ಕಾವ್ಯ ಪ್ರಕಾರಗಳನ್ನು ಹೇಳುವಾಗ ಚೆತ್ತಾಣ ಬೆದಂಡೆಗಳ ಪ್ರಸ್ತಾಪ ಬಂದಿದೆ. ಇದರಲ್ಲಿ ಬೆದಂಡೆ ಎಂಬುದು ಹಾಡುಗಬ್ಬವಾಗಿರಬೇಕೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ.[೭೧] ಆದ್ದರಿಂದ ೧೦ ನೇ ಶತಮಾನಕ್ಕೆ ಮೊದಲೇ ಹಾಡುಗಬ್ಬಗಳು ಪ್ರಚಾರದಲ್ಲಿದ್ದವು. ಇಂತಹ ಹಾಡುಗಬ್ಬಗಳು ಕ್ಷುಲ್ಲಕವಾದ ಶೃಂಗಾರವನ್ನು ವಸ್ತುವಾಗಿ ಹೊಂದಿರುತ್ತಿದ್ದವು. ಈ ಸೀಮಿತ ಮತ್ತು ಅಮಹತ್ವ ವಸ್ತುವಿನ ತೆಕ್ಕೆಯಿಂದ ಆ ಪ್ರಕಾರಗಳನ್ನು ಬಳಸತೊಡಗಿದ್ದ ಶಿವಶರಣರ ಹೆಚ್ಚಳ ಎನ್ನಬೇಕು.

---

೬೮ : ಸಾಹಿತ್ಯ ಮೌಲ್ಯ ಬಸವೇಶ್ವರರು – ಚನ್ನವೀರ ಕಣವಿ
೬೯ : ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಕೀರ್ತನಕಾರರು, ಸಂಪುಟ ೮ – ಎಚ್. ಎಸ್. ವೆಂಕಟೇಶಮೂರ್ತಿ
೭೦ : ಶರಣ ದಾಸರ ಭಕ್ತಿ, ಪು – ೨೬
೭೧ : ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಕೀರ್ತನಕಾರರು – ಡಾ. ಎಚ್. ಎಸ್. ವೆಂಕಟೇಶಮೂರ್ತಿ, ಪು–೧೪

ತಮಿಳುನಾಡಿನ ಶೈವಧರ್ಮ ಮತ್ತು ಕನ್ನಡ ನಾಡಿನ ವೀರಶೈವ ಧರ್ಮಕ್ಕೆ ಅನ್ಯೋನ್ಯ ಸಂಬಂಧವಿರುವುದು ಸ್ಪಷ್ಟ. ೬–೭–೮ ನೇ ಶತಮಾನಗಳಲ್ಲಿ ತಮಿಳುನಾಡಿನಲ್ಲಿ ಪ್ರಸಿದ್ಧವಾಗಿ ಮೆರೆದ ಶೈವ ಮತದ ಆರ್ಯರು ವೀರ ತಮಿಳುನಾಡಿನಲ್ಲಿ ಪ್ರಸಿದ್ಧವಾಗಿ ಮೆರೆದ ವೀರಶೈವರಿಗೆ ಪೂಜ್ಯರಾದ ಪುರಾತನರು, ಆ ಶೈವಭಕ್ತರು "ತೇವಾರಂ" ಎಂಬ ಭಗವಂತ ನಾಮ ಸಂಕೀರ್ತನೆಯನ್ನು ರಚಿಸಿ ಹಾಡುತ್ತಿದ್ದರು. ಆ ಪದಗಳಿಗೆ ರಾಗ ನಿರ್ದೇಶನವಿರುತ್ತಿತ್ತು. ತಮಿಳಿನ ಆ ತೇವಾರಂ ಸ್ತೋತ್ರಗಳು ಶಿವಶರಣರ ಹಾಡುಗಳಿಗೆ ಮಾದರಿಯಾಗಿರುವ ಸಾಧ್ಯತೆಯನ್ನು ಅಲಕ್ಷಿಸುವಂತಿಲ್ಲ. ಇಂತಹ ಒಂದು ಸೂಚನೆ ಚಿದಾನಂದ ಮೂರ್ತಿಗಳ ಲೇಖನವೊಂದರಲ್ಲಿ ವ್ಯಕ್ತವಾಗಿದೆ. ವಚನ ಸಾಹಿತ್ಯ ತಮಿಳು ಸಾಹಿತ್ಯದ ಸ್ತೋತ್ರಗಳನ್ನು ತನ್ನ ಮೂಲವಾಗಿ ಹೊಂದಿಲ್ಲ ಎನ್ನುವಾಗ ಅವರು ಹೀಗೆ ಬರೆಯುತ್ತಾರೆ "ತಮಿಳಿನ ತೇವಾರಂ ಸ್ತೋತ್ರ ಗೀತೆಗಳನ್ನು ಹೋಲುವ ಯಾವುದಾದರೂ ರಚನೆ ಇದ್ದರೆ ಅದು ವಚನ ಸಾಹಿತ್ಯದಲ್ಲಿ ಬಸವ, ಚನ್ನಬಸವ, ಸಿದ್ಧರಾಮ ಮುಂತಾದವರು ಹಾಡಿದರು ಎಂದು ರಾಗ ನಿರ್ದೇಶನದೊಂದಿಗೆ ಅವರವರ ಅಂಕಿತಗಳೊಂದಿಗೆ ಶೂನ್ಯ ಸಂಪಾದನೆಯಲ್ಲಿ ಸಿಗುವ ವಿಧಗಳು".[೨]

ಅಲ್ಲಮಪ್ರಭು, ಬಸವೇಶ್ವರ ನಂತರ ತನ್ನ ಹಾಡುಗಳ ಮೂಲಕ ನಮ್ಮನ್ನು ಅಷ್ಟೇ ಕಲಕುವ ಹಾಡುಗಾರ್ತಿ ಅಕ್ಕಮಹಾದೇವಿ.

ನಮ್ಮ ಮನೆಯಲಿಂದು ಹಬ್ಬ, ನೀನಂಬಿಗ, ಬಲ್ಲವರೊಂದು ಮದ್ದು ಹೇಳಿ – ಈ ಮೂರು ಅಕ್ಕನ ಶ್ರೇಷ್ಠ ಹಾಡುಗಳು

"ನಮ್ಮ ಮನೆಯಲಿಂದು ಹಬ್ಬ
ನಮಗೆ ಸಂದಣಿ ಬಹಳ
ನಿಮ್ಮ ನುಡಿಸ ಹೊತ್ತಿಲ್ಲ
ಹೋಗಿ ವಿಷಯಗಳಿರಾ ॥ ಪ ॥"[೭೩]

ಎನ್ನುವಾಗ ವಿಷಯಗಳನ್ನು ಸಂಬೋಧಿಸುವ ರೀತಿ ವಿಶಿಷ್ಟವಾಗಿದೆ.

'ಬಲ್ಲವರೊಂದು ಮದ್ದು ಹೇಳಿ' ಎಂಬ ಗೀತೆ ಸಾಂಕೇತಿಕವಾದ ಅನುಭಾವಿಕ ಧ್ವನ್ಯಾರ್ಥಗಳನ್ನು ತನ್ನಲ್ಲಿ ಹುದುಗಿಸಿಕೊಂಡು ಭಾವಗೀತೆಯ ಭಾವ ತೀವ್ರತೆಯೊಂದಿಗೆ ಜಾನಪದ ದಾಟಿಯಲ್ಲಿ ಸಾಗುವ ಸೊಗಸಾದ ಹಾಡು. ಅಲ್ಲಮಪ್ರಭು ಮತ್ತು ಬಸವಣ್ಣನವರಿಗಿಂತ ಅಕ್ಕಮಹಾದೇವಿಯ ಹಾಡುಗಳ ಭಾಷೆ ಭಾವದ ದೃಷ್ಟಿಯಿಂದ

---

೭೨ : ವಚನ ಸಾಹಿತ್ಯದ ಉಗಮ ಸಂಶೋಧನ ತರಂಗ ೧೯೯೬, ಪು–೧೯
೭೩ : ಭಕ್ತಿ ಸಾಹಿತ್ಯ – ಹಂಪಿ ವಿ.ವಿ. ಪು–೮೮

ಮೇಲ್ನೋಟಕ್ಕೆ ಸರಳವೆನಿಸಿದಲ್ಲಿ ಒಟ್ಟಾರೆ ಶಿವದಾಸರ ಹಾಡುಗಳು ತಾಂತ್ರಿಕ ಗೂಢಾರ್ಥದ ಕಾರಣದಿಂದ ಪಾರಿಭಾಷಿಕ ಪದಗಳ ಹೆಚ್ಚಳದಿಂದ ಸಾಮಾನ್ಯವಾಗಿ ವ್ಯಾಖ್ಯಾನದ ಸಹಾಯವಿಲ್ಲದೆ ಪೂರ್ಣವಾಗಿ ದಕ್ಕುವಂಥದಲ್ಲಿ ಕೆಲವು ಬಾರಿ ರೂಢಿ ಮೂಲವಾದ ವ್ಯಾಖ್ಯಾನಗಳು ಮಂತ್ರ ಪೂರಿತವೆಂಬಂತೆ ತುಂಬಿನಿಂತ ಧ್ವನಿ ಪುಂಜಗಳನ್ನು ಅತಿ ಶುಷ್ಕಗೊಳಿಸಿ ನಿರಾಶೆಗೊಳ್ಳುವ ಸಂಭವವೂ ಉಂಟು.

೧೨ ನೆಯ ಶತಮಾನದ ಹಾಡುಗಾರರ ನಂತರ ನಮ್ಮನ್ನು ಬಹಳಷ್ಟು ಸೆಳೆಯುವ ಶಿವಶರಣ ಹಾಡುಗಾರ ೧೫ ನೇ ಶತಮಾನದಲ್ಲಿ ಜನಿಸಿದ ನಿಜಗುಣ ಶಿವಯೋಗಿ ಶಿವಶರಣ ಗೀತಾ ಸಾಹಿತ್ಯಕಾಶದಲ್ಲಿ ಧ್ರುವಸ್ಥಾನಗಳಿಸಿದರೆನ್ನಬಹುದು.

ಮಹಾದೇವಿಯಕ್ಕನ ಕೃತಿಗಳಿಗಿಂತ ವಚನಗಳೇ ಸಾಹಿತ್ಯ ದೃಷ್ಟಿಯಿಂದ ಮುಖ್ಯವಾದವು ಎಂಬುದರಲ್ಲಿ ಸಂದೇಹವಿಲ್ಲ. ಕಾವ್ಯ ಸೃಷ್ಠಿ ಅಕ್ಕನ ಉದ್ದೇಶಿತ ಕ್ರಿಯೆಯಲ್ಲ ಅಂದ ಮೇಲೆ ಉದ್ದೇಶಪೂರ್ವಕವಾದ ಅಲಂಕಾರಗಳ ಬಳಕೆ ಇಲ್ಲಿಯದಲ್ಲ. ಒಳಗಣ ಒತ್ತಡ ತುಡಿತಗಳಿಗೆ ಭಾಷೆಯಲ್ಲಿ ಹೊರ ಹೊಮ್ಮುವಾಗ ಸಹಜವಾಗಿ ನುಸುಳಿಕೊಂಡು ಬಂದ ಉಪಮೆ ದೃಷ್ಟಾಂತಗಳನ್ನು ನಾವು ಅವಳ ವಚನಗಳಲ್ಲಿ ಕಾಣಬಹುದಾಗಿದೆ. ಆದರೆ ಅವುಗಳು ಸಂದರ್ಭವನ್ನು ಸ್ಪಷ್ಟಗೊಳಿಸುವಲ್ಲಿ ವಚನದ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಸಹಾಯಕವಾಗಿದೆ. ಸಾರ್ಥಕವಾದ ಕೆಲವು ಉಪಮೆಯಗಳನ್ನು ಅವಳ ವಚನಗಳಲ್ಲಿ ಗಮನಿಸಬಹುದಾಗಿದೆ. "ಕಬ್ಬಿನ ಉಂಡ ನೀರಿನಂತೆ ಇರಬೇಕು" ಶಿವಜೀವನದಲ್ಲಿರುವದು "ಚಿನ್ನದೊಳಗಣ ಚಿನ್ನದಂತೆ" ಗುರುಪಾದವನ್ನು ಕಂಡು ಧನ್ಯಳಾದಾಗ, ಅಳಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ ಬಳಲುಗೊಂಡ ಸಸಿಗೆ ಮಳೆ ಸುರಿದಂತಾಯ್ತು" ಹಗಲು ನಾಲ್ಕು ಜಾವ ಅಶನಕ್ಕೆ ಇರುಳು ನಾಲ್ಕು ಜಾವ ವ್ಯಾಸನಕ್ಕೆ ಕುದಿದವರು" ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ ತಮ್ಮೊಳಗಿನ ಮಹಾಘನವನರಿಯರು" ಬಲ್ಲವರ ಸಂಗ ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ ಇತ್ಯಾದಿ.

ಅಕ್ಕನ ವಚನಗಳಲ್ಲಿ ಬರುವ ಅಲಂಕಾರಗಳು ದೈನಂದಿನ ಜೀವನದಿಂದಾಯ್ದುಕೊಂಡ ಸಜೀವ ದೃಷ್ಟಾಂತಗಳು, ಅವುಗಳಲ್ಲಿ ಹಾವಿನ ಹಲ್ಲ ಕಳೆದು ಹಾವನಾಡಿಸುವರೆ ಹಾವಿನ ಸಂಗವೇ ಲೇಸು ಕಂಡಯ್ಯ, ಸಂದು ಸಂದು ಕಡಿದು ಕಬ್ಬನು ತಂದು ಗಾಣ ಅರಿದಡೆ ಬೆಂದು ಪಾಕಾಗುಳ್ಳ ಸಕ್ಕರೆಯಾಗಿ ನೊಂದೆನೆಂದು ಸಿಹಿಯ ಬಿಟ್ಟಿತ್ತೆ?, ಗಿರಿಯಲ್ಲಿದೆ ಹುಲುಮೊಂಡಿಯಲ್ಲಾಡುವುದೇ ನವಿಲು, ಬಂಜೆ ಬೇನೆಯನರಿಯಳು, ಮಲದಾಯಿ ಮುದ್ದಬಲ್ಲಳೆ.... ಇತ್ಯಾದಿ ವಚನಗಳಲ್ಲಿ ಶ್ಲೇಷೆ ಬಳಕೆಯಾಗಿರುವುದನ್ನು ಗುರುತಿಸಬಹುದು. ಅಕ್ಕನ ವಚನಗಳು ಕಾವ್ಯ, ಸತ್ವ ಮತ್ತು ಮೌಲ್ಯ ದೃಷ್ಟಿಯಿಂದ ತುಂಬ ಶ್ರೇಷ್ಠವಾದವುಗಳು.

ವಚನ ಹಾಗೂ ದಾಸ ಸಾಹಿತ್ಯದಲ್ಲಿ ಮಹಿಳೆಯರು :

ಎಲ್ಲಾ ಶಿವಶರಣರ ವಚನಗಳ ಪ್ರಮುಖ ದ್ರವ್ಯ ಶಿವಭಕ್ತಿ ಮತ್ತು ಆಧ್ಯಾತ್ಮಿಕತೆ. ಭಕ್ತಿ-ಜ್ಞಾನಗಳ ಸಮನ್ವಯದಿಂದ ವೀರ ವಿರಾಗಿಣಿಯಾಗಿ ಶರಣ ಸತಿ-ಲಿಂಗಪತಿ ಭಾವದ ಮಧುರ ಭಕ್ತಿ ಸಾಧಕಳಾಗಿ, ಬಹುಮುಖ ವ್ಯಕ್ತಿತ್ವವನ್ನು ಪಡೆದುಕೊಂಡ ಅಕ್ಕ ಮಹಾದೇವಿ ಶ್ರೇಷ್ಠ ಕವಿಯಿತ್ರಿ ಭಕ್ತಿಯ ಉತ್ಕಟತೆ, ಆಧ್ಯಾತ್ಮದ ಅಪೂರ್ವ ಹಂಬಲ. ಸಾಹಿತ್ಯ ಸೌಂದರ್ಯ, ಕಾವ್ಯತ್ಮಾಕ ನಿರೂಪಣೆಯ ಗುಣಗಳು ಆಕೆಯನ್ನು ಕನ್ನಡ ಸಾಹಿತ್ಯದ ಪ್ರಥಮ ಶ್ರೇಷ್ಠ ಕವಯಿತ್ರಿಯನ್ನಾಗಿಸಿವೆ.

ಕಲ್ಯಾಣದ ಅನುಭವ ಮಂಟಪದಲ್ಲಿ ನಡೆದ ವೈರಾಗ್ಯ ಭಕ್ತಿ ನಿಷ್ಠೆಯ ಸತ್ವ ಪರೀಕ್ಷೆಯಲ್ಲಿ ಮಹಾದೇವಿಯಕ್ಕ ತನ್ನ ಆಯ್ಕೆ ನಿರ್ಣಯ ನಿಲುವುಗಳನ್ನು ಸೈದ್ಧಾಂತಿಕ ನೆಲೆಯಲ್ಲಿಯೇ ಸಮರ್ಪಿಸಿಕೊಳ್ಳುವ ಸಂದರ್ಭದಲ್ಲಿ ಆಕೆ ತೋರಿದ ವಿವೇಚನೆ, ವೈಚಾರಿಕ ಸತ್ವ, ಆತ್ಮ ಸಮರ್ಥನೆಯ ಗುಣಗಳು ಮಹಾದೇವಿಯಕ್ಕನನ್ನು ಶ್ರೇಷ್ಠ ಚಿಂತಕಳನ್ನಾಗಿಸಿದೆ. ಇದೇ ರೀತಿಯಾಗಿ ಲೋಕ ಕಲ್ಯಾಣಾರ್ಥಕವಾಗಿ ವೀರಗಣಾಚಾರವನ್ನು ಮೈದಾಳಿ, ವೀರಶೈವ ಧರ್ಮಧ್ವಜವನ್ನು ವಿಶ್ವದಲ್ಲಿ ಮೆರೆಯಿಸಲು ಲೋಕ ಸಂಚಾರ ಕೈಗೊಂಡ ಇನ್ನೋರ್ವ ಶಿವಶರಣೆಯೆಂದರೆ ಗುಡ್ಡಾಪುರದ ವರದಾನಿ ದಾನಮ್ಮ. ಆದವಾನಿಯ ಗಣಾಚಾರದಳವನ್ನು ಕಟ್ಟಿಕೊಂಡು ಅಲ್ಲಂಪುರಕ್ಕೆ ಬಂದು ಪುನಃ ಬ್ರಹ್ಮೇಕ ಲಿಂಗವನ್ನು ಸ್ಥಾಪಿಸಿ ಕಾಂಚಿ, ರಾಮೇಶ್ವರ, ಶ್ರೀಶೈಲ, ಸೊನ್ನಲಾಪೂರ, ಕಾಶಿ, ಪ್ರಯಾಗ, ಗಯಾ ಮುಂತಾಗಿ ಹಿಮಾಚಲದವರೆಗೆ ಶಿವಯೋಗದ ರಹಸ್ಯವನ್ನು ಶರಣರ ತತ್ವ ರತ್ನಗಳನ್ನು ದಾನಮಾಡಿ ಬಸವಣ್ಣನತ್ತ ದಾನಮ್ಮ ಎಂಬ ಹೆಸರನ್ನು ಸಾರ್ಥಕಪಡಿಸಿಕೊಂಡ ಆಕೆಯ ದಾನ ವರದಾನವಾಗಿ ಪರಿಣಮಿಸಿತು. ಬಸವನ ಅಣತಿಯಂತೆ ಬಸವ ಜನ್ಮ ಭೂಮಿಯಾದ ಬಸವನ ಬಾಗೇವಾಡಿಗೆ ಬಂದು ಅಲ್ಲಿಯ ಭಕ್ತರಿಗೆ ವೀರಶೈವ ದೀಕ್ಷೆಯನಿತ್ತು ಇಷ್ಟಲಿಂಗ ಧಾರಣ ಮಾಡಿಸಿ ಬಸವಕಾರ್ಯ ಮುಂದುವರೆಸಿದರು.[೭೪] ಇದೊಂದು ಭಕ್ತಿ ಮಾರ್ಗದ ಮೂಲಕ ಸಮಾಜೋದ್ಧಾರ ಕಾರ್ಯ ಎನ್ನಬಹುದು.

ಉತ್ನಾಳರವರು ಹೇಳಿರುವ ಇನ್ನೋರ್ವ ಶಿವಶರಣೆಯೆಂದರೆ ರೆಮ್ಮವ್ವೆ (ಅಕ್ಕಮ್ಮ) ೧೨ ನೇ ಶತಮಾನದ ಸಮಗ್ರ ಸಮಾಜವನ್ನೆ ಶರಣೆಯರು ಪ್ರತಿನಿಧಿಸುತ್ತಾರೆ. ಗುಪ್ತ ಸಾಧಕ ಅಜಗಣ್ಣನ ತಂಗಿ ಮುಕ್ತಾಯಕ್ಕ ಜಂಗಮ ಮೇರು ಪರ್ವತನಾದ ಮಹಾಮನೆಯ ಶೂನ್ಯ ಪೀಠಸ್ಥಾನದ ಹಾಗೂ ವೈರಾಗ್ಯ ಚಕ್ರವರ್ತಿ ಅಲ್ಲಮನನ್ನೇ ಅಲ್ಲಾಡಿಸಿದ್ದಾಳೆ. ಬೌದ್ಧಿಕ ಪ್ರಕರತೆಯ ಸಾಕಾರಮೂರ್ತಿ ಮುಕ್ತಾಯಿ, ಸಿದ್ದಾಯಿ ಪುರಾಣಿಕರು ಹೇಳುವಂತೆ

---

೭೪ : ಶರಣ ಸೌರಭ – ಪ್ರೊ. ಎಸ್. ಬಿ. ಉತ್ನಾಳ, ಪು–೩

ಮುಕ್ತಾಯಕ್ಕ ಅಂಗನೆಯರ ಇತಿಹಾಸದಲ್ಲಿಯೇ ಅಪೂರ್ವ ವ್ಯಕ್ತಿ. ಗಾರ್ಗಿಯ ಸಂವಾದ ಶಕ್ತಿ, ಮಹಾದೇವಿಯ ಆತ್ಮದರ್ಶನಾಶಕ್ತಿ, ಏಕಲವ್ಯನ ಗುರು ಭಕ್ತಿಗಳೆಲ್ಲ ಸೇರಿ ಮುಕ್ತಾಯಿಯಾಗಿ ಮೂರ್ತಿಭವಿಸಿದಂತಿದೆಯೆಂದು ವಿಮರ್ಶಕರು ಮುಕ್ತಾಯಕ್ಕನಲ್ಲಿ ವೈಚಾರಿಕ ಪ್ರಜ್ಞೆ ಗುರುತಿಸಿದ್ದಾರೆ.

ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಧರ್ಮ ವಿಶ್ವಧರ್ಮವಲ್ಲವೇ? ಇಂತಹ ವಚನಕಾರ್ತಿಯರಲ್ಲಿ ಅಕ್ಕಮ್ಮನ (ರೆಮ್ಮವ್ವೆ) ಪಾತ್ರ ವೈಶಿಷ್ಟ್ಯಪೂರ್ಣವಾಗಿದೆ.

ಧರ್ಮದ ಆಚರಣೆಯಲ್ಲಿ ತಪ್ಪಿದವರನ್ನು ಬಾಹ್ಯಾಡಂಬರಿಗಳಾಗಿ ಬಾಳುವವರನ್ನು ತತ್ವದ ಮತಿತಾರ್ಥವನ್ನು ತಿಳಿಯದೆ ಆಚರಿಸುವವರನ್ನು ಖಂಡಿಸಿದ್ದಾಳೆ. "ಭಕ್ತರ ಮನೆಗೆ ಸತ್ಯ ಶರಣರು ಬಂದಲ್ಲಿಯೆ ಮದುವೆಯ ಉತ್ಸಾಹಕ್ಕಿಂತ ಯೋಗ್ಯವೆಂದು ಕಂಡು ತನು ಕರಗಿ, ಮನ ಬೆರಸಿ, ಕಂಗಳ ತುಂಬಿ ಪುಳಕಿತವಾಗಿ ವಂಚನೆ ಸಂಕಲ್ಪವೆಂಬ ಶಂಕೆದೋರದೆ ನಿಶ್ಯಂಕನಾಗಿ ಮಾಡುವ ಭಕ್ತನ ಬಾಗಿದ ಬಾಗಿಲೆ ಆಚಾರವೇ ಪ್ರಾಣ"ವೆಂದು ಹೇಳುತ್ತಾಳೆ.

ಕಾಯಕದ ಶುದ್ಧತೆಯನ್ನು ಹೇಳಿ; ವೇಷಧಾರಿಯಾಗಿ ಹಣ ಸಂಪಾದಿಸಿ ತಿತ್ತದಾಟ ಇಲ್ಲವೇ ವಿದೂಷಕತನದಿಂದ ತಂದು ಗುರುಲಿಂಗ ಜಂಗಮಕ್ಕೆ ಮಾಡಬಹುದೇ? ಎಂದು ಪ್ರಶ್ನೆ ಹಾಕುವಲ್ಲಿ ಶುದ್ಧ ಕಾಯಕದ ಮಾಹಿತಿಯನ್ನು ಎತ್ತಿ ತೋರಿಸುತ್ತಾಳೆ ತಮ್ಮ ಒಂದು ವಚನದಲ್ಲಿ –

> ವೇಷವೆಲ್ಲಿರದು
> ಸವಾಳೆಯಲ್ಲಿ, ಡೊಂಬರಲ್ಲಿ, ಬೈರೂಪಿಗನಲ್ಲಿ ಇಂದೆ?
> ವೇಷದ ತೋರಿ ಒಡಲ ಹೊರೆವ ದಾಸಿ ವೇಶಿಯ ಮಕ್ಕಳಿಗೆ[೭೫]

ನಿಜಭಕ್ತಿ ಎಲ್ಲಿಯದು ಎಂದು ಧೈರ್ಯವಾಗಿ ಪ್ರಶ್ನೆ ಹಾಕುತ್ತಾಳೆ. ಇಂತಹ ವಚನಗಳನ್ನು ನೋಡುವಾಗ ಅಂದಿನ ಸಮಾಜದ ರಚನೆಯ ಚಿತ್ರ ನಿಲ್ಲತ್ತದೆ. ರೆಮ್ಮವ್ವೆ ಡಂಬಾಚಾರವೇ ಸಮಾಜದ ದುರವಸ್ಥೆಗೆ ಮೂಲವೆಂದು ಖಂಡಿಸಿದ್ದಾಳೆ. ಕಾಯಕದಿಂದಲೇ ಧರ್ಮ, ಸಮಾಜ ಹಾಗೂ ವ್ಯಕ್ತಿಯ ಉದ್ಧಾರವನ್ನು ಕಂಡರು. ಸತ್ಯ ಶುದ್ಧ ಕಾಯಕದಂತ ಭಕ್ತಿ... ರಾಮೇಶ್ವರಲಿಂಗದಲ್ಲಿ ಎಂದು ಹೇಳುತ್ತಾಳೆ.

ಶರಣ ಸಾಹಿತ್ಯದಲ್ಲಿ ಕಲ್ಯಾಣ ಕ್ರಾಂತಿಯ ನಂತರ ಶರಣ ತತ್ವಗಳನ್ನು ಕೈಗೂಸಿನಂತೆ ಜೋಕೆ ತೂಕಗಳಿಂದ ರಕ್ಷಣೆಯೊಂದಿಗೆ ಪ್ರಸಾರ ಮಾಡಿದ ದಾನಮ್ಮ ತಾಯಿಯ ಪುಣ್ಯ ಭೂಮಿಯೇ ಇಂದಿನ ಜತ್ತ ತಾಲೂಕಿನ ಗುಡ್ಡಾಪೂರ ಶರಣರ ಪರಂಪರೆಯನ್ನು ೧೯

---

೭೫ : ಶರಣ ಸೌರಭ – ಪ್ರೊ. ಎಸ್. ಬಿ. ಉತ್ನಾಳ, ಪು.ಸಂ. ೧೫

ನೇ ಶತಮಾನದಲ್ಲಿ ಮೆರೆದ ಇನ್ನೋರ್ವ ಶಿವಶರಣೆ ಶಿವಲಿಂಗವ್ವನವರು. ಅಂತರಂಗದ ಶ್ರೀಮಂತಿಕೆ ದೊಡ್ಡದು. ಭೌತಿಕ ಶ್ರೀಮಂತಿಕೆ ನಮ್ಮದಲ್ರಪ್ಪ ಎಂದು ಪದೆ ಪದೆ ಹೇಳುತ್ತಿದ್ದರು. ಯಾವ ಸಂಪ್ರದಾಯವಾದರೂ ಲಿಂಗಯ್ಯನ ಪೂಜೆಗೆ ಅಡ್ಡ ಅಲ್ರಪ್ಪಾ ಎಂದು ಇಂದಿನವರೆಗೂ ಜನರ ಮನಸ್ಸಿನಲ್ಲಿದ್ದ ಮೇಲು ಕೀಳು ಎಂಬ ಭೇದ ಭಾವದ ಭಾವನೆಯನ್ನು ಹೊಡೆದೋಡಿಸುವ ಪ್ರಯತ್ನ ಮಾಡಿದ್ದಾರೆ.

ಅಕ್ಕಮಹಾದೇವಿ, ಮೀರಾಬಾಯಿ, ಮುಕ್ತಾಬಾಯಿ ಅವರ ಸಾಲಿನಲ್ಲಿ ಶರಣೆ ಲಿಂಗವ್ವನವರ ಸ್ಥಾನ ಶಾಶ್ವತ. ಅವರು ಕಂಡುಂಡ ಅನುಭವವೇ ವಚನ ಹಾಗೂ ಹಾಡುಗಳಲ್ಲಿ ಹರಿದು ಬಂದಿದೆ. ೧೨ ನೇ ಶತಮಾನದಲ್ಲಿ ಶರಣ ಶರಣೆಯರ ಅಭಿಪ್ರಾಯಗಳಿಗೆ ಒಂದು ಮಿಂಚಿನ ಸಂಚಾರ ನೀಡುವ ನೆಪದಲ್ಲಿ ದೊರೆತ ಅನುಭವ ಮಂಟಪ ಎಂಬ ಒಂದು ಸ್ಥಳದ ಬಗ್ಗೆ ಶರಣೆ ಶಿವಲಿಂಗವ್ವನವರು ಹೇಳಿದ್ದು ಹೀಗಿದೆ. ಶರಣರ ಅನುಭವ ಮಂಟಪವು ಕಲ್ಲು ಕಟ್ಟಿಗೆಗಳಿಂದ ಕಟ್ಟಿರಲಿಲ್ಲ. ಅದು ಅಂತರಂಗದಲ್ಲಿದ್ದ ಅನುಭವ ಮಂಟಪ. ಹೊರರಂಗದಲ್ಲಿ ಅನುಭವ ಕಂಡು ಹೊರರಂಗದಲ್ಲಿ ಅನುಭಾವಗೊಳ್ಳುವದು. ಇದನ್ನೆ "ಎನ್ನ ಅನುಭಾವ ಮಂಟಪವೋ ಶಿವಂ । ಆತ್ಮನಿರುವುದು ಇದು ಐಶ್ವರ್ಯತಾವೊ" ಎಂದು ತಮ್ಮ ಅಂತರಂಗದಲ್ಲಿಯ ಅನುಭಾವ ಮಂಟಪವನ್ನು ಇವರು ಎತ್ತಿ ತೋರಿಸಿದರು.

ಶರಣೆ ಶಿವಲಿಂಗವ್ವನ ಲೌಕಿಕ ಜೀವನದಲ್ಲಿ ಸಂಭವಿಸಿದ ದುರಂತದಿಂದ ಮನನೊಂದುಕೊಳ್ಳದೆ ಗಟ್ಟಿ ಮನಸ್ಸಿನಿಂದ ಲಿಂಗ ಪೂಜೆ, ಗುರು ಸ್ಮರಣೆಯಲ್ಲಿಯೇ ಕಾಲ ಕಳೆಯ ಹತ್ತಿದರು. ಆದರೂ ಶಿವನ ಮನಸ್ಸಿಗೆ ಬರಲಿಲ್ಲ ಎನ್ನುವಂತೆ ಪತಿಯೇ ತೀರಿಕೊಂಡರು. ಈ ಒಂದು ಅನುಭವದಿಂದ ಶಿವನು ನಮ್ಮನ್ನು ಹೇಗೆ ಪರೀಕ್ಷಿಸುತ್ತಾನೆ ಎಂಬುದಕ್ಕೆ ಬಸವಣ್ಣನ ವಚನ ನೆನಪಿಗೆ ಬರುತ್ತದೆ.

"ನೆಚ್ಚಿದೆನೆಂದರೆ ಮೆಚ್ಚಿದೆನೆಂದರೆ
ಸತಿ ಮಾರು ಹೊದೆನೆಂದರೆ
ತನುವಲ್ಲಾಡಿಸಿ ನೋಡುವೆ ನೀನು ಮನವಲ್ಲಾಡಿಸಿ
ನೋಡುವೆ ನೀನು, ಧನವಲ್ಲಾಡಿಸಿ ನೋಡುವೆ ನೀನು
ಇವಕ್ಕೆಲ್ಲ ಅಂಜದಿದ್ದರೆ 'ಭಕ್ತಿ ಕಂಪಿತ' ನಮ್ಮ
ಕೂಡಲ ಸಂಗಮದೇವಾ"[೭೬]

೭೬ : ಬಸವಣ್ಣನವರ ವಚನ ಸಂಪುಟ ೧ – ಎಲ್. ಬಸವರಾಜ

ಇದೇ ರೀತಿಯಾಗಿ ಜೇಡರ ದಾಸಿಮಯ್ಯನ ವಚನವು ನಮ್ಮನ್ನು ಧೃತಿಗೆಡದಂತೆ ಮಾಡುತ್ತದೆ. ಹರತನ್ನ ಭಕ್ತರ ತಿರಿವಂತೆ ಮಾಡುವ.... ಎಂಬ ವಚನ ಶರಣ ಶಿವಲಿಂಗವ್ವಳ ನಿಷ್ಠೆಗೆ ಪ್ರತೀಕವಾಗಿದೆ. ಹೀಗೆ ವಚನ ಸಾಹಿತ್ಯದಲ್ಲಿ ಶರಣೆಯರ ಪಾತ್ರ ಅಪಾರವಾದುದ್ದಾಗಿದೆ.

ದಾಸ ಸಾಹಿತ್ಯದಲ್ಲಿ ಮಹಿಳೆಯರು :

ಪ್ರಸ್ತುತ ಹರಿದಾಸ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೃತಿಗಳ ರಚನೆಯಲ್ಲಿ ಪುರುಷರಿಗಿಂತ ಕಡಿಮೆ ಸಂಖ್ಯೆಯಲ್ಲಿದ್ದರೂ ಗುಣಮಟ್ಟದಲ್ಲಿ ಮಾತ್ರ ಹಿಂದುಳಿದಿಲ್ಲ. ಹರಿದಾಸ ಸಾಹಿತ್ಯದ ಸಂಗ್ರಹವಂತೂ ಪ್ರತಿಶತ ಎಪ್ಪತ್ತೆರಡರಷ್ಟು ಭಾಗ ನಾಲಿಗೆಯ ಮೇಲೆಯೇ ಉಳಿದುಕೊಂಡಿವೆ. ಇದರಲ್ಲಿಯೂ ಮಹಿಳೆಯರ ಪಾಲೇ ಹೆಚ್ಚು. ಆ ಕೀರ್ತನೆಗಳನ್ನು ಹಾಡುವುದರ ಜೊತೆಗೆ ಅವುಗಳಲ್ಲಿನ ಮೌಲ್ಯಗಳನ್ನು ಮುಂದಿನ ಜನಾಂಗಕ್ಕೆ ಪ್ರಸಾರ ಮಾಡುವ ಜವಾಬ್ದಾರಿಯನ್ನು ಮಹಿಳೆ ಹೊತ್ತುಕೊಂಡಿದ್ದಾಳೆ. ಹೀಗಾಗಿ ಹರಿದಾಸ ಸಾಹಿತ್ಯದ ರಚನೆ, ಸಂಗ್ರಹ, ಪ್ರಕಟಣೆಗಳ ಸಂದರ್ಭದಲ್ಲಿ ಮಹಿಳೆ ಅವಿಭಾಜ್ಯ ಅಂಗವಾಗಿ ಕಂಡುಬರುತ್ತಾಳೆ. ೧೮ ನೇ ಶತಮಾನದ ಹೊತ್ತಿಗೆ ಮಹಿಳೆಯರು ಸ್ಪಷ್ಟವಾಗಿ ತಮ್ಮನ್ನು ತಾವು ಗುರುತಿಸಿಕೊಂಡು ಮೈಚಳಿ ಬಿಟ್ಟು (ಕಾವ್ಯ) ಕೀರ್ತನೆಗಳ ರಚನೆಗೆ ತೊಡಗಿದ್ದಾರೆ. ಅವರ ವಿವರಗಳು ಲಭ್ಯವಾಗಿವೆ. ಮಹಿಳೆಯರಿಂದ ನಿರ್ಮಾಣವಾದ ದಾಸ ಸಾಹಿತ್ಯದ ಇತಿಹಾಸ ಸ್ಪಷ್ಟವಾಗಿ ಕಂಡುಬರುವದು. ಮದ್ವಾಚಾರ್ಯರ ಸೋದರಿ ಕಲ್ಯಾಣಿದೇವಿ. ಪುರಂದರ ದಾಸರ ಪತ್ನಿ ಹಾಗೂ ಪುತ್ರಿಯರು ಅಂಕಿತದೊಡನೆ ಕೀರ್ತನೆಗಳನ್ನು ಬರೆದಿದ್ದಾರೆ ಎಂದು ಹೇಳಲಾಗುತ್ತಿದೆಯಾದರೂ ಇನ್ನೂ ಅವುಗಳ ಪ್ರಮಾಣದ ಬಗೆಗೆ ಸಂಶೋಧನೆಯಾಗಬೇಕಾಗಿದೆ. ೧೮ ನೇ ಶತಮಾನದಲ್ಲಿ ಆಗಿಹೋದ ಹೆಳವನಕಟ್ಟಿ ಗಿರಿಯಮ್ಮ, ಗಲಗಲಿ ಅವ್ವನವರು, ಪ್ರಯಾಗವ್ವ ಹಾಗೂ ಹರಪ್ಪನಹಳ್ಳಿ ಭೀಮವ್ವ ಮೊದಲಾದವರು ವಿಫುಲವಾದ ಸಾಹಿತ್ಯ ರಚಿಸಿದ್ದಾರೆ. ಇವರಲ್ಲದೆ ಯಮನಕ್ಕ, ದೊಡಿ ಸುಧಾಬಾಯಿ, ಪಡಸಲಗಿ ರುಕ್ಮಿಣಿಬಾಯಿ, ಗೋದಾವರಿಬಾಯಿ, ಉಮಾ ಮಾಧವರಾವ, ಲಕ್ಷ್ಮೀಬಾಯಿ, ಆಶ್ರಿತ ಚಂದೂಬಾಯಿ, ಕಳಸದ ಸುಂದರಮ್ಮ, ಗಿರಿಬಾಲೆ, ಚಿಕ್ಕಮಾರಿನ ಹಾಡಿನ ಹುಚ್ಚಮ್ಮ ಮುಂತಾದ ಕೀರ್ತನಕಾರ್ತಿಯರ ಹೆಸರು ಕೇಳಿಬರುತ್ತವೆ.

ಕೀರ್ತನಕಾರ್ತಿಯರ ಸಂಕ್ಷೇಪ್ತ ಪರಿಚಯ :

ಗಲಗಲಿ ಮನೆತನ ಎಂದರೆ ಪಾಂಡಿತ್ಯಕ್ಕೆ ಇನ್ನೊಂದು ಹೆಸರು. ಇವರ ಕಾಲ ೧೭೬೫ ಅಂಕಿತ ರಾಮೇಶ ಈಕೆಯ ಹುಟ್ಟಿದ ಮನೆ ಕೊಟ್ಟ ಮನೆಯಲ್ಲಿ ದಟ್ಟವಾದ ಹರಿದಾಸ ಸಂಸ್ಕಾರವಿರುವದರಿಂದ ಇವರ ಮೇಲೂ ಪ್ರಭಾವವಾಗಿದೆ. ಇವರ ಶಿಷ್ಯಳೇ ಪ್ರಯಾಗವ್ವ, ಈಕೆಯ ಅಂಕಿತನಾಮ ಪಾಂಡುರಂಗ ಎಂಬುದು. ಇವರ ನಂತರ ಬಂದವರೆ ಹೆಳವನಕಟ್ಟಿ ಗಿರಿಯಮ್ಮ ಹಾಗೂ ಹರಪನಹಳ್ಳಿ ಭೀಮವ್ವ

ದಾಸ ಸಾಹಿತ್ಯದ ಕಣಜವು ತುಂಬಿ ತುಳುಕುವಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಪಾಲೂ ಇದೆ. ಸಂಚಿಹೊನ್ನಮ್ಮನ ತರುವಾಯ ತುಸು ಮುಂದಿನ ಕಾಲದಲ್ಲಿ ಆಗಿಹೋದ ಇನ್ನೊಬ್ಬ ಕವಯಿತ್ರಿಯೆಂದರೆ ಗಿರಿಯಮ್ಮ, ಸಂಚಿ ಹೊನ್ನಮ್ಮ ತನ್ನಲ್ಲಿದ್ದ ಶಕ್ತಿಯನ್ನು ಗುರು ಸಹಾಯದಿಂದ ಸಾಧನ ಮಾಡಿ ಬೆಳೆಸಿಕೊಂಡರೆ ಗಿರಿಯಮ್ಮ ದೇವೋನ್ಮಾದದಲ್ಲಿ ಹುಟ್ಟಿ ಬೆಳೆದು ಆವೇಶ ಬಲದಿಂದ ತನ್ನ ಕೃತಿಗಳನ್ನು ರಚಿಸಿರಬೇಕು ಎಂದು ತೋರುತ್ತದೆ.

ಹೆಳವನಕಟ್ಟೆ ಗಿರಿಯಮ್ಮ ತನು–ಮನಗಳನ್ನು ಭಗವಂತನಿಗೆ ಭಕ್ತಿಯಿಂದ ಅರ್ಪಿಸಿದವಳು. ಇವರ ಕೀರ್ತಿ ನಾಡೆಲ್ಲಾ ಹಬ್ಬಿ ಜನ ತಂಡ ತಂಡವಾಗಿ ಬಂದು ಅವಳ ದರ್ಶನವನ್ನು ಪಡೆಯುತ್ತಿದ್ದರಂತೆ ದಿನದಿಂದ ದಿನಕ್ಕೆ ಅವಳ ತಾತ್ವಿಕ ಚಿಂತನೆ ಹೆಚ್ಚಾಗಿ ಹರಿದಾಸ ಸಾಹಿತ್ಯ ರಚನೆಗೆ ಸ್ಫೂರ್ತಿಯಾಯಿತು. ಚಂದ್ರಹಾಸನ ಕಥೆ, ಸೀತಾ ಕಲ್ಯಾಣ, ಉದ್ಧಾಲಕನ ಕಥೆ, ಭಕ್ತಿಯ ಹಾಡುಗಳು, ಬ್ರಹ್ಮಕೊರವಂಜಿ ಎಂಬುವು ಇವರ ಕೃತಿಗಳಾಗಿವೆ.

ಗಿರಿಯಮ್ಮ ಎಳವೆಯಿಂದಲೂ ಅನನ್ಯ ಗತಿಕಭಾವದಿಂದ ಹರಿಯನ್ನು ಹಂಬಲಿಸುತ್ತಾ ಬಂದಿದ್ದರೂ ಒಮ್ಮೊಮ್ಮೆ ತನ್ನ ಇಷ್ಟ ದೇವರು ಪೂರ್ಣವಾಗಿ ತನ್ನ ಮೇಲೆ ಪ್ರಸನ್ನವಾಗಿಲ್ಲ ಎಂಬ ಭಾವದಿಂದ ಕೊರಗಿದ್ದಾಳೆ. ಆರ್ತವಾಗಿ ತನ್ನ ಮನದಾಳವನ್ನು ಹರಿಯಲ್ಲಿ ತೋಡಿಕೊಂಡಿದ್ದಾಳೆ.

"ಕಡೆಗಣ್ಣಲಿ ನೀ ನೋಡದಿರೆನ್ನಯ್ಯ ಬಿಡಬೇಡವೊ ಕೈಯ್ಯ
ಬಡವರ ಬಂಧು ಬಹು ಕೃಪಾಸಿಂಧು
ಒಡೆಯ ನೀನಲ್ಲದೆ ಎನಗೆ ಬ್ಯಾರಿಲ್ಲವೊ"[೨೨]

ಹರಿದಾಸ ಭಕ್ತಿಯ ಎಲ್ಲಾ ವಿಧಗಳನ್ನು ಗಿರಿಯಮ್ಮ ಅನುಸರಿಸಿದರೂ ಆರ್ತಭಾವ ಮತ್ತು ವಾತ್ಸಲ್ಯ, ಮಧುರ ಭಾವಗಳಲ್ಲಿ ಆಕೆ ಹೆಚ್ಚು ಬಲವುಳ್ಳವಳಾಗಿದ್ದಾಳೆಂಬುದು ಆಕೆಯ ಕೀರ್ತನೆಗಳಿಂದ ತಿಳಿದು ಬರುತ್ತದೆ.

ಒಟ್ಟಾರೆಯಾಗಿ ದಾಸ ಸಾಹಿತ್ಯದಲ್ಲಿ ಭಕ್ತಿ, ಸಾಮಾಜಿಕ ಪ್ರಜ್ಞೆ, ಸಂಗೀತ, ಸಾಹಿತ್ಯಿಕ ಲಕ್ಷಣಗಳು ಕಾಣುವ ಹಾಗೆ ಮಹಿಳಾ ಕೀರ್ತನಕಾರ್ತಿಯರು ಕೂಡ ತಮ್ಮ ಕೃಷಿ ಮಾಡಿದ್ದಾರೆ. ಭಕ್ತಿಯಿಂದ ಸಮಾಜವನ್ನು ತಿದ್ದುವಲ್ಲಿ ಇವರೇನು ಕಮ್ಮಿ ಆಗಿರಲಿಲ್ಲ. ಅದರಲ್ಲೂ ಮೀರಾ ಭಜನೆಗಳಿಗಿಂತಲೂ ಬಹಳ ಪ್ರಸಿದ್ಧಿಯನ್ನು ಪಡೆದಿವೆ.

~ ~ ~ ~ ~

೨೨ : ಭಕ್ತಿ ಸಾಹಿತ್ಯ – ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಸಾರಾಂಗ, ಪುಟ : ೨೬೬

ಅಧ್ಯಾಯ – ೫ :

ಸಮಾರೋಪ

ಅಧ್ಯಾಯ – ೫ :

ಸಮಾರೋಪ

ಕನ್ನಡ ಸಾಹಿತ್ಯದಲ್ಲಿ ಭಕ್ತಿ ಸಾಹಿತ್ಯ ಮೊದಲಿಗೆ ಕಾಣಿಸಿಕೊಂಡದ್ದು ೧೨ ನೆಯ ಶತಮಾನದ ಶಿವಶರಣರ ವಚನ ಸಾಹಿತ್ಯದಲ್ಲಿ. ಆದರೆ ಅದೇ ಕನ್ನಡ ಭಕ್ತಿ ಸಾಹಿತ್ಯದ ಉಗಮ ಸ್ಥಾನ ಎಂದು ಭಾವಿಸಿಕೊಳ್ಳುವಂತಿಲ್ಲ. ಭಕ್ತಿ ಎನ್ನುವದು ಮಾನವನ ಆದ್ಯ ಪ್ರವೃತ್ತಿಗಳಲ್ಲಿ ಒಂದು ಎಂಬುದನ್ನು ಒಪ್ಪಿಕೊಂಡರೆ ಕನ್ನಡ ಮಾತು ಬಳಕೆಗೆ ಬಂದ ಕಾಲದಿಂದಲೇ ಭಕ್ತಿಯ ಅಭಿವ್ಯಕ್ತಿ ಆಗಿದ್ದಿರಬೇಕು. ಭಕ್ತಿ ಎಂಬುದೇ ಒಂದು ಭಾವುಕ ಸ್ಥಿತಿ. ಭಾವುಕತೆ ತೀವ್ರವಾಗಿ ಹೊರಹೊಮ್ಮಿದಾಗ ಅದು ಹಾಡಾಗಿ ಪರಿಣಮಿಸುತ್ತದೆಯೆಂಬುದು ಬಲ್ಲವರ ಅಭಿಮತವಾಗಿದೆ. ಅಭಿಜಾತ ಸಾಹಿತ್ಯಕ್ಕೆ ಮೂಲವನ್ನು ಜನಪದ ಸಾಹಿತ್ಯದಲ್ಲಿ ಕಾಣುತ್ತೇವೆ. ಜನಪದ ಹಾಡುಗಳು ಕೇವಲ ಜನರ ನಾಲಿಗೆಯಲ್ಲಿ ನಲಿಯುತ್ತ ಉಳಿದುಕೊಂಡು ಬಂದಿದೆ. ಬಲು ಹಿಂದಿನಿಂದಲೂ ಇಂಥ ಪರಂಪರೆ ಜನಪದರಲ್ಲಿ ಬೆಳೆದು ಬಂದಿದೆ. ಬೀಸುವ, ಕುಟ್ಟುವ ಹಾಡುಗಳಲ್ಲಿ ಹೆಚ್ಚಾಗಿ ದೇವರ ನಾಮಗಳನ್ನು ಹೇಳುವ ರೂಢಿಯು ಇತ್ತೀಚಿನವರೆಗೂ ನಮ್ಮ ಹಳ್ಳಿಯ ಹೆಣ್ಣುಮಕ್ಕಳಲ್ಲಿ ಕಾಣಬಹುದು. ಇದರಿಂದ ಪ್ರಾಚೀನವಾದ ಓವನಿಗೆ, ಒನಕೆವಾಡುಗಳಲ್ಲಿಯೂ ಭಕ್ತಿ ಸಾಹಿತ್ಯದ ಅಸ್ತಿತ್ವ ರುಜುವಾತಾಗಿದೆ.

ಕನ್ನಡದಲ್ಲಿ ಭಕ್ತಿ ಸಾಹಿತ್ಯ ಸ್ಪಷ್ಟವಾಗಿ ಕಾಣಿಸುವುದು. ಬಸವಣ್ಣ, ಅಲ್ಲಮಪ್ರಭು ಮೊದಲಾದ ಶಿವಶರಣರಿಂದ ನಿರ್ಮಿತವಾದ ವಚನಗಳ ರೂಪದಲ್ಲಿ ಶಿವಶರಣರು ಪ್ರಚುರಗೊಳಿಸಿದ ವೀರಶೈವ ಮತದ ತಾತ್ವಿಕ ವಿಚಾರ ವಿನಿಮಯದ ಅಂಗವಾಗಿಯೇ ಈ ವಚನ ಸಾಹಿತ್ಯ ಹುಟ್ಟಿಕೊಂಡಿತು. ವಚನ ಎಂದರೆ ಮಾತು. ಬಳಕೆಯ ಮಾತು ಗದ್ಯದ ರೂಪದಲ್ಲಿ ಇರುವುದಂತಾಗಿದ್ದು, ಈ ದೃಷ್ಟಿಯಿಂದ ಶರಣರು ಆಡಿದ ಮಾತುಗಳೇ ವಚನಗಳಾಗಿವೆ. ಈ ವಚನಗಳು, ಶರಣರ ಅನುಭಾವ ಮತ್ತು ಭಾವತೀವ್ರತೆಯ ಸ್ಪರ್ಶದಿಂದಾಗಿ ಕೇವಲ ಗದ್ಯವಾಗಿರದೆ ಪದ್ಯಗಂಧಿಯಾದ ಗದ್ಯವಾದದ್ದು ಅವುಗಳ ವಿಶಿಷ್ಟತೆಯಾಗಿದೆ. ಸಾಹಿತ್ಯದ ರೂಪ, ಭಾಷೆ, ಛಂದಸ್ಸು ಈ ಎಲ್ಲವುಗಳ ದೃಷ್ಟಿಯಿಂದಲೂ ವಚನ ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ ಒಂದು ನೂತನ ಕ್ರಾಂತಿ ಮಾಡಿದ್ದುದು ಚಾರಿತ್ರಿಕ ಸಂಗತಿಯಾಗಿದೆ.

ಅಜ್ಞಾತ ಕಿರುತೊರೆಯಾಗಿ ಹುಟ್ಟಿಕೊಂಡ ವಚನ ಸಾಹಿತ್ಯ ಬಲು ಬೇಗನೆ ಒಂದು ಹೆದ್ದೊರೆಯಾಗಿ ಹರಿಯತೊಡಗಿತು. ನೂರಾರು ಶಿವಶರಣರು, ಶರಣೆಯರು ತಮ್ಮ ವಚನ ರಚನೆಗಳಿಂದ ಈ ವಚನ ಭಂಡಾರವನ್ನು ಶ್ರೀಮಂತಗೊಳಿಸಿದರು.

ಹದಿನೈದನೆಯ ಶತಮಾನ ವಚನಸಾಹಿತ್ಯದ ಪುನರುತ್ಥಾನದ ಕಾಲವಾಗಿದೆ. ಮುಂದೆ ೧೮, ೧೯, ೨೦ ನೇ ಶತಮಾನದವರೆಗೆ ಮುಂದುವರೆಸಿಕೊಂಡು ಬಂದ ಶರಣ ಹಾಗೂ ದಾಸರ ಪರಂಪರೆಯು ಭವ್ಯವಾದ ಇತಿಹಾಸವನ್ನು ಹೊಂದಿದೆ. ಆಧುನಿಕ ಸಂದರ್ಭದಲ್ಲಿ ಪ್ರೊ. ಎಸ್. ಬಿ. ಉತ್ನಾಳರು ಹೇಳಿರುವ ಲೇಖನದಲ್ಲಿ ಗುಡ್ಡಾಪೂರದ ದಾನವ್ಮ, ಚಿತ್ತರಗಿಯ ಚಿಜ್ಯೋತಿ ಮಹಾಂತ ಶಿವಯೋಗಿಗಳು, ಲಚ್ಚಾಣದ ಶಿವಯೋಗಿಗಳು, ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳು ಹಾಗೂ ಶರಣ ದಾಸರ ಭಕ್ತಿ ಲೇಖನಗಳಲ್ಲಿ ಶಿವಶರಣರ ಮತ್ತು ಹರಿದಾಸರ ಕಾರ್ಯ, ಕೀರ್ತಿಯನ್ನು ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಶಿವಶರಣ – ಶರಣೆಯರು ಭಕ್ತಿ ಎಂಬ ದ್ರವ್ಯವನ್ನು ಆಧಾರವಾಗಿಟ್ಟುಕೊಂಡು ಸಮಾಜದಲ್ಲಿ ನೆಲೆಯೂರಿರುವ ಮೂಢ ನಂಬಿಕೆಯನ್ನು ಅನಾಚಾರ, ವಂಚನೆ, ಅನಿಷ್ಟಗಳನ್ನು ತೊಡೆದುಹಾಕುವಲ್ಲಿ ಕೈಗೊಂಡ ಕಾರ್ಯ ಅಪೂರ್ವವಾದದ್ದು. ಸಮಾಜೋದ್ಧಾರಕ್ಕಾಗಿ ಅಂದು ಕಲ್ಯಾಣವನ್ನು ತಮ್ಮ ಅನುಭವಗಳ ಹಂಚಿಕೆಯ ತಾಣದಂತೆ ಅನುಭವ ಮಂಟಪ ಮಾಡಿಕೊಂಡು ಚಿಂತನ ಮಂಥನ ನಡೆಸಿದರು. ವ್ಯಷ್ಟಿ ಪ್ರಜ್ಞೆಗಿಂತ ಸಮಷ್ಟಿ ಪ್ರಜ್ಞೆ ವಚನಕಾರರಿಗೆ ಪ್ರಮುಖವಾಗಿತ್ತು. ಸಮಾಜದ ಸಮಸ್ತ ಜನಾಂಗದ ಏಳಿಗೆಯೆ ಶರಣ ಸಾಹಿತ್ಯದ ಗುರಿಯಾಗಿತ್ತು. ಜನರ ಕಲ್ಯಾಣಕ್ಕಾಗಿ ಅವರ ಹತ್ತಿರವೆ ಹೋಗಿ ಅವರಲ್ಲಿಯ ದುಶ್ಚಟಗಳನ್ನು ದುರ್ನಡತೆಯನ್ನು ಭಿಕ್ಷೆಯಾಗಿ ಸ್ವೀಕರಿಸಲು ಹೋಗಿ ವ್ಯಸನಿಗಳ ಮನ ಪರಿವರ್ತನೆ ಮಾಡುವ ನೆಪದಲ್ಲಿ ಸಮಾಜದ ಪರಿವರ್ತನೆಗೆ ಕಾರಣರಾದ ಶಿವಶರಣರನ್ನು ಕಾಣಬಹುದು.

"ಸ್ತ್ರೀಯಲ್ಲಿ ಪುರುಷನಲ್ಲಿ ನಪುಂಸಕನಲ್ಲಿ ಆತ್ಮನೆಂದರಿಯಬಹುದಲ್ಲದೆ ಕಾಣಿಸಬಾರದು." (ಚಂದಿಮರಸ) ಎಂದು ಸ್ತ್ರೀ ಪುರುಷ ತತ್ವಗಳನ್ನು ಆತ್ಮದ ಸಮಾನ ನೆಲೆಯಲ್ಲಿ ನಿರ್ವಚಿಸಿದ ಶರಣ ಚಳುವಳಿಯ ಪ್ರದಾನ ಆಶಯವು ಮಹಿಳೆಯರ ಆತ್ಮವಿಶ್ವಾಸವನ್ನು ವರ್ಧಿಸಿ, ಕೀಳರಿಮೆಯನ್ನು ಕಳೆಯುವಲ್ಲಿ ಬಹುದೊಡ್ಡ ಶಕ್ತಿಯಾಗಿ ಪರಿಣಮಿಸಿತು. ವಚನ ಚಳುವಳಿಯ ಲಿಂಗಸಮಾನತೆಯ ಧ್ವನಿ ಅನೇಕ ವಚನಕಾರ್ತಿಯರ ಆಲೋಚನಾ ಕ್ರಮವನ್ನು ಪ್ರಭಾವಿಸಿದೆ. ಪ್ರಾಕೃತಿಕ ಉದ್ದೇಶಕ್ಕಾಗಿಯೇ ವಿಶಿಷ್ಟವಾಗಿರುವ ಜೈವಿಕ ಭಿನ್ನತೆಯನ್ನು ತರತಮಗೊಳಿಸಿದ ಅವೈಚಾರಿಕತೆಯನ್ನು ಅನೇಕ ವಚನಕಾರ್ತಿಯರು ಪರಾಮರ್ಶಿಸಿದ್ದಾರೆ. ಹೆಣ್ತನವನ್ನು ಅಧೀನ ನೆಲೆಯಲ್ಲಿ ಅಪಮಾನಿಸಿದ ಪುರುಷ ಪ್ರಧಾನತೆಯ ಅವಾಸ್ತವವನ್ನು ಗೊಗ್ಗವ್ವೆ, ಸತ್ಯಕ್ಕ, ಲಕ್ಕಮ್ಮ, ಗಜೇಶ, ಮಸಣಯ್ಯನವರ ಪುಣ್ಯಸ್ತ್ರೀ ಪ್ರಶ್ನಿಸಿ, ಇಬ್ಬರಿಗೂ ಸಮಾನವಾಗಿರುವ ಲಿಂಗಾತೀತ ನೆಲೆಯನ್ನು ಪುರಸ್ಕರಿಸಿದ್ದಾರೆ. ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೇ ಅರಿವಿಂಗೆ ಬೇರೊಂದೊಲುಂಟೇ? ಎನ್ನುವ ಆಯ್ದಕ್ಕಿ ಲಕ್ಕಮ್ಮ, ಸ್ತ್ರೀ ಪುರುಷ ಸಮಾನತೆಯನ್ನು 'ಅರಿವಿನ' ನೆಲೆಯ ಮೂಲಕ

ಸಮರ್ಥಿಸಿದರೆ "ಮೊಲೆ ಮೂಡಿ ಬಂದಡೆ ಹೆಣ್ಣೆಂಬರು, ಮೀಸೆಕಾಸೆ ಬಂದಡೆ ಗಂಡೆಂಬರು, ಈ ಉಭಯ ಜ್ಞಾನ ಹೆಣ್ಣೋ, ಗಂಡೋ ನಾಸ್ತಿನಾಥ?" ಎಂದು ಪ್ರಶ್ನಿಸಿದ ಗೊಗ್ಗವ್ವೆ ಜೈವಿಕ ವಿಶಿಷ್ಟತೆಯನ್ನು ತರತಮಗೊಳಿಸಿ, ಅಂತರ್ನಿಹಿತ ಚೈತನ್ಯವನ್ನು ಉಪೇಕ್ಷಿಸಿದ ವ್ಯವಸ್ಥೆಯ ಪಕ್ಷಪಾತವನ್ನು ಎತ್ತಿ ತೋರಿಸಿದ್ದಾಳೆ.

ವಚನಕಾರರು ಪ್ರಮುಖವಾಗಿ ಸಮಾಜದಲ್ಲಿ ಅಸಮಾನತೆಯನ್ನು ತೊಡೆದು ಹಾಕಿದರು. ಬಡವ–ಬಲ್ಲಿದ, ಮೇಲು–ಕೀಳು, ಆಳು–ಅರಸ, ಸ್ತ್ರೀ ಪುರುಷ, ಹಿರಿಯ–ಕಿರಿಯ ಇತ್ಯಾದಿ ಮಾನವ ಜನಾಂಗದ ನಡುವಿರುವ ಗೋಡೆಗಳನ್ನು ಕೆಡವಿದರು. ಮಾನವೀಯ ತಳಹದಿಯ ಮೇಲೆ ಹೊಸ ಸಮಾಜ ರೂಪಿಸುವ ಸಂಕಲ್ಪ ತೊಟ್ಟರು. ಅಜ್ಞಾನ–ಅನಕ್ಷರತೆ, ಅಂಧಾನುಕರಣೆ, ಶೋಷಣೆಗಳನ್ನು ತೊಡೆದು ಹಾಕಿ, ಪ್ರಗತಿಪರ, ವೈಚಾರಿಕ ಮತ್ತು ವೈಜ್ಞಾನಿಕ ನೆಲೆಯಲ್ಲಿ ಹೊಸ ಸಮಾಜ ಹುಟ್ಟು ಹಾಕುವ ಸಂಕಲ್ಪ ತೊಟ್ಟರು.

ಹೀಗೆ ವಚನ ಸಾಹಿತ್ಯದಲ್ಲಿ ಮಹಿಳೆಯರು ಕೂಡ ತಮ್ಮ ಇತಿಹಾಸವನ್ನು ಬರೆದಿದ್ದಾರೆ ಎನ್ನುವದನ್ನು ನೋಡಲಾಗಿದೆ. ೧೨ ನೇ ಶತಮಾನದಲ್ಲಿ ನಡೆದ ಕೋಲಾಹಲಕರವಾದ ಧರ್ಮ ಕ್ರಾಂತಿ ಸನಾತನವಾದ ವೈದಿಕ ಮತವನ್ನು ಬುಡಮಟ್ಟು ಅಲ್ಲಾಡಿಸಿತಷ್ಟೆ? ಅದುವರೆಗೆ ವೈದಿಕ ಮತಾನುಯಾಯಿಗಳಾಗಿದ್ದವರು ತಂಡ ತಂಡವಾಗಿ ವೀರಶೈವ ಮತವನ್ನು ಆಲಂಗಿಸಿದುದನ್ನು ಕಂಡು ವೈದಿಕ ಮತವೇ ಅಳಿದು ಹೋಗುವುದೆಂಬ ಭಯ ವೈದಿಕರಿಗೆ ಹುಟ್ಟಿರಬೇಕು. ಅಂದು ವೀರಶೈವ ಮತವು ಶೂನ್ಯ ಸಿಂಹಾಸನ ಅನುಭವಮಂಟಪ ಇವುಗಳ ಸ್ಥಾಪನೆ ಸಂಘಟನೆಗಳ ಮೂಲಕ ವಚನ ವಾಙ್ಮಯದ ಪ್ರಚಾರ ಕೈಗೊಂಡು ಜನಮನವನ್ನು ಅದ್ಭುತ ರೀತಿಯಲ್ಲಿ ಆಕರ್ಷಿಸಿತ್ತು. ಅಂತಹುದೇ ಒಂದು ಉಪಾಯವನ್ನು ಕೈಗೊಂಡು ವೈದಿಕ ಮತದಿಂದ ಹೋಗುತ್ತಿದ್ದ ಹೊಳೆಗೆ ಅಡ್ಡಕಟ್ಟಿ ಹಾಕುವ ಕಾರ್ಯ ಕೈಗೊಳ್ಳಬೇಕಾಯಿತೆಂದು ತೋರುತ್ತದೆ. ಈ ನಿಟ್ಟಿನಲ್ಲಿ ನಡೆದ ಪ್ರಯತ್ನವೇ ದ್ವೈತಮತ ಸ್ಥಾಪನೆಯೇ ಏನೋ! ಈ ಮತದ ಸ್ಥಾಪಕನು ಮಧ್ವಾಚಾರ್ಯನಾದುದರಿಂದ ಈ ಮತಕ್ಕೆ ಮದ್ವಮತವೆಂದು ಹೆಸರು ಬಂದಿದೆ.

ಬಸವಣ್ಣನಂತೆ ಮಧ್ವಾಚಾರ್ಯನೂ ಕನ್ನಡಿಗನೇ ಇಬ್ಬರ ಕಾರ್ಯರಂಗವೂ ಬಹುಮಟ್ಟಿಗೆ ಕರ್ನಾಟಕವೇ. ಬಸವಣ್ಣನವರು ಹರಪಾರಮ್ಯ ಬೋಧನೆ, ಮಧ್ವಾಚಾರ್ಯರದು ಹರಿ ಸರ್ವೋತ್ತಮತ್ವ. ಇಬ್ಬರೂ ಆಧ್ಯಾತ್ಮಿಕದಲ್ಲಿ 'ಭಕ್ತಿ'ಗೆ ಪ್ರಥಮ ಸ್ಥಾನವನ್ನು ನೀಡಿದ್ದಾರೆ. ತಮ್ಮ ಮತ ಪ್ರಚಾರಕ್ಕಾಗಿ ಇವರು ಅನುಸರಿಸಿದ ಮಾರ್ಗವೂ ಸ್ವಲ್ಪ ಹೆಚ್ಚು ಕಡಿಮೆ ಸಮಾನವಾದುದೇ. ಇಬ್ಬರೂ ಉಪದೇಶಕ್ಕೆ ಜನರ ನುಡಿಯನ್ನೇ ಆಶ್ರಯಿಸಿದರು. ಶಿವಶರಣರು

ಕಾವ್ಯಮಯವಾದ ಗದ್ಯದಲ್ಲಿ ತಮ್ಮ ವಚನಗಳನ್ನು ಕಟ್ಟಿ ಹಾಡಿ ಹೊರಟರೆ, ಹರಿದಾಸರು ಹೃದಯವನ್ನು ಸೂರೆಗೊಳ್ಳಬಲ್ಲ ಕೀರ್ತನೆಗಳನ್ನು ಕಟ್ಟಿ ಹಾಡಿ ಹೊರಟರು. ಕಾಲಕ್ರಮದಲ್ಲಿ ನೃತ್ಯವೂ ಇದಕ್ಕೆ ಸೇರಿಕೊಂಡಿತು. ವೀರಶೈವರ ಸಂಘಟನೆ, ಮಾರ್ಗದರ್ಶನಗಳಿಗೆ 'ಶೂನ್ಯ ಸಿಂಹಾಸನ', 'ಅನುಭವ ಮಂಟಪ'ಗಳು ನೆರವಾದರೆ, ಅದೇ ಕಾರ್ಯಕ್ಕಾಗಿ ಹರಿದಾಸರು 'ವ್ಯಾಸಕೂಟ', 'ದಾಸಕೂಟ'ಗಳನ್ನು ಸ್ಥಾಪಿಸಿಕೊಂಡರು. ಎರಡು ಕೂಟಗಳ ಹೆಗ್ಗುರಿಯೂ ದ್ವೈತ ಪ್ರಚಾರವೇ. ವೈದಿಕ ಆಧಾರ ಗ್ರಂಥಗಳನ್ನು ಮೂಲದಲ್ಲಿ ಓದಿ, ದ್ವೈತ ಸಿದ್ಧಾಂತಗಳನ್ನು ಜನಸಾಮಾನ್ಯರಲ್ಲಿ ಕೀರ್ತನೆಗಳ ಮೂಲಕ ಪ್ರಸಾರ ಮಾಡುವ ಕಾರ್ಯ 'ದಾಸಕೂಟ'ಕ್ಕೆ ಸೇರಿದುದು. ಇವೆರಡಕ್ಕೂ ಇರುವ ವ್ಯತ್ಯಾಸ ಕೇವಲ ಭಾಷೆಗೆ ಮಾತ್ರ ಸಂಬಂಧಿಸಿದುದು. ವಚನಗಳಿಗೂ ಕೀರ್ತನೆಗಳಿಗೂ ಇರುವ ಮತ್ತೊಂದು ಮುಖ್ಯ ಹೋಲಿಕೆಯೆಂದರೆ ಅವರ ಕೃತಿಗಳಲ್ಲಿ ಇರುವ ಅಂಕಿತ. ವಚನಕಾರರು ತಮ್ಮ ಇಷ್ಟ ದೈವವನ್ನು ತಮ್ಮ ವಚನಗಳಲ್ಲಿ ಅಂಕಿತವಾಗಿ ಬಳಸುತ್ತಾರೆ. ಹರಿದಾಸರು ತಮ್ಮ ಇಷ್ಟದೈವವನ್ನು ಬಳಸುತ್ತಾರೆ. ತಮ್ಮ ಕೀರ್ತನೆಗಳಲ್ಲಿ ಪುರಂದರ ದಾಸರ ಕಾಲಕ್ಕೆ ಹರಿದಾಸರು ತನ್ನ ಗುರುವಿನಿಂದ ಅಂಕಿತವನ್ನು ಸ್ವೀಕರಿಸಬೇಕೆಂದು ನಿಯಮವಿಟ್ಟುಕೊಂಡಿತು.

ದಾಸ ಸಾಹಿತ್ಯ ಮತ್ತು ವಚನ ವಾಙ್ಮಯ ಎರಡರ ಗುರಿಯೂ ಮತ ತತ್ವ ಪ್ರತಿಪಾದನೆ ಮತ್ತು ಪ್ರಚಾರ ಇತರ ಮತಗಳಿಗಿಂತ ತಮ್ಮ ಮತ ಶ್ರೇಷ್ಠವೆಂಬ ಸಮರ್ಥನೆ, ತಮ್ಮದಲ್ಲದೆ ದೈವದ ಅವಹೇಳನ, ನೀತಿ ಬೋಧೆ, ಸಮಾಜದ ದುರಾಚಾರ ಮತ್ತು ಲೋಪದೋಷಗಳ ಖಂಡನೆ ಇವು ಎರಡಕ್ಕೆ ಸಮಾನ. ಸಂಸ್ಕೃತದಲ್ಲಿದ್ದ ಆಧ್ಯಾತ್ಮಿಕ ತತ್ವಗಳನ್ನು ಜನರ ಮಾತಿನಲ್ಲಿ ಅಳವಡಿಸಿಕೊಂಡು ಮನೆ ಮನೆಗೂ ಕೊಂಡೊಯ್ದು ಹಂಚುವ ಸತ್ಕಾರ್ಯದಲ್ಲಿ ಈ ಎರಡೂ ಬಗೆಯ ವಾಙ್ಮಯಗಳಿಗೆ ಸಮಾಸ ಪ್ರಾಶಸ್ತ್ಯ ಸಲ್ಲಬೇಕಾಗುತ್ತದೆ. ನುಡಿದಂತೆ ನಡೆದು ದೊಡ್ಡ ಬಾಳನ್ನು ನಡೆಸಿದ ಈ ಸಂಜೀವಿಗಳು ಜನರಲ್ಲಿ ದೈವಭಕ್ತಿಯನ್ನು ಪ್ರಚೋದಿಸಿ, ಸಮಾಜದ ನೈತಿಕ ಮಟ್ಟವನ್ನು ಮೇಲಕ್ಕೆತ್ತುವುದರಲ್ಲಿ ಬಹುಮಟ್ಟಿಗೆ ಕೃತಕೃತ್ಯರಾದರು. ವಚನಕಾರನಾದರೆ ಏಕನಾದವನ್ನು, ಹರಿದಾಸನಾದರೆ ತಂಬೂರಿಯನ್ನು ಕೈಯಲ್ಲಿ ಹಿಡಿದು ಮನೆಯಿಂದ ಮನೆಗೆ ಹಾಡುತ್ತಾ ಹೋಗುವ ದೃಶ್ಯಕಲ್ಪನೆ ರೋಮಾಂಚಕರವಾಗಿದೆ. ವಚನ ವಾಙ್ಮಯದಂತೆ ಹರಿದಾಸ ಕೀರ್ತನೆಗಳೂ ಅಪಾರವಾಗಿವೆ.

ಪ್ರಸ್ತುತ ನಿಬಂಧದಲ್ಲಿ ಪ್ರೊ. ಎಸ್. ಬಿ ಉತ್ನಾಳ ಅವರ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯದ ಭಕ್ತಿಯ ನೆಲೆಗಳನ್ನು ಶೋಧಿಸಲಾಗಿದೆ. ಶ್ರೀಯುತರ ಶರಣ ದಾಸರ ಭಕ್ತಿ, ಶರಣ ಸೌರಭ, ಗುಡ್ಡಾಪುರದ ದಾನಮ್ಮ, ಲಚ್ಯಾಣದ ಶಿವಯೋಗಿಗಳು, ಅಥಣಿ ಮುರುಘೇಂದ್ರ ಶಿವಯೋಗಿಗಳು ಮುಂತಾದ ಕೃತಿಗಳನ್ನು ಆಕರ ಸಾಮಗ್ರಿಗಳನ್ನಾಗಿ ಬಳಸಿಕೊಂಡು ಪ್ರಸ್ತುತ ಪ್ರಬಂಧ ರೂಪಿಸಲಾಗಿದೆ.

ಶರಣ ಭಕ್ತಿ ಮತ್ತು ದಾಸರ ಭಕ್ತಿ ಇವುಗಳ ಉಗಮ, ವಿಕಾಸ, ಮಹತ್ವ ಉತ್ನಾಳರು ಪ್ರತಿಪಾದಿಸಿದ ನಿಲುವು, ಸಮಾಜಕ್ಕೆ ನೀಡಿದ ಸಂದೇಶಗಳನ್ನು ಪರಿಚಯಿಸಲಾಗಿದೆ. ಶರಣ ಮತ್ತು ದಾಸ ಸಾಹಿತ್ಯದ ಪರಸ್ಪರ ತೌಲನಿಕ ಅಧ್ಯಯನದಲ್ಲಿ ಇರ್ವರೂ ಸಮಾಜ ಸುಧಾರಕರ ಒಲವು - ನಿಲುವುಗಳು, ಸಮಾಜ ಸುಧಾರಣಾ ಕ್ರಮ, ಸಾಮಾಜಿಕ ಕಾಳಜಿ, ಜನಪರ ನಿಲುವು, ಸಮಾಜಪರ ಒಲವುಗಳಲ್ಲಿ ಶೋಧಿಸಲಾಗಿದೆ. ಶರಣರ ಭಕ್ತಿ, ಭಕ್ತಿಯ ನೆಲೆ, ಸಮರ್ಪಣಾ ಮನೋಭಾವ, ನಿರ್ಗುಣ, ನಿರಾಕಾರ, ನಿರಾಲಂಬ ಪರಿಕಲ್ಪನೆಗಳನ್ನು ಕಂಡರೆ; ದಾಸರಲ್ಲಿ ಸಗುಣ ಸಾಕಾರ, ಸಹಜಾಲಂಕಾರದ ದೇವರ ಪರಿಕಲ್ಪನೆಗಳನ್ನು ಕಾಣುತ್ತೇವೆ. ಶರಣ ಮತ್ತು ದಾಸರ ಪರಸ್ಪರ ಭಕ್ತಿಯ ನೆಲೆಗಳು, ಸರ್ವ ಸಮರ್ಪಣಾ ಭಾವಗಳನ್ನು ಚರ್ಚಿಸಲಾಗಿದೆ. ಶಿವಶರಣರ ವಚನ, ಸ್ವರವಚನ, ಕಾಲಜ್ಞಾನ ಬೆಡಗಿನ ವಚನಗಳನ್ನು ಮತ್ತು ದಾಸರ ಕೀರ್ತನೆ, ಉಗಾಭೋಗ ಮತ್ತು ಮಂಡಿಗೆಗಳನ್ನು ಆಧರಿಸಿ, ಉತ್ನಾಳರು ಕಟ್ಟಿಕೊಟ್ಟಿರುವ ಕೃತಿಗಳ ಮೂಲಕ ಪ್ರಸ್ತುತ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಇಬ್ಬರ ನಿಲುವು ಸಮಾಜದ ಜನರನ್ನು ತಲುಪುವುದು, ಧರ್ಮ ಪ್ರಚಾರ ಮಾಡುವುದು, ತಮ್ಮ-ತಮ್ಮ ನಿಲುವು ಪ್ರತಿಪಾದಿಸುವುದು ಪ್ರಮುಖ ಅಂಶವಾಗಿದೆ.

ಶರಣರ ಮತ್ತು ದಾಸರ ದಾರಿಗಳು ಬೇರೆ-ಬೇರೆಯಾದರೂ ಇರ್ವರ ಗುರಿ ಮಾತ್ರ ಒಂದೇ ಆಗಿದೆ. ಭಕ್ತರ ಉದ್ಧಾರ, ಸಮಾಜದ ಸುಧಾರಣೆ ಮುಖ್ಯ ಧ್ಯೇಯವಾಗಿತ್ತೆಂಬುದು ನಿಚ್ಚಳವಾಗಿದೆ. ಪ್ರೊ. ಎಸ್. ಬಿ. ಉತ್ನಾಳರು ಶರಣ ಮತ್ತು ದಾಸ ಸಾಹಿತ್ಯ ಸಮನ್ವಯಕಾರರಾಗಿ ಗೋಚರಿಸುತ್ತಾರೆ. ಕನ್ನಡ ಸಾಹಿತ್ಯ ಚರಿತ್ರೆ ಗಮನಿಸಿದಾಗ, ಶರಣ ಸಾಹಿತಿಗಳು ದಾಸಸಾಹಿತ್ಯವನ್ನು ಪುರಸ್ಕರಿಸುವುದಿಲ್ಲ. ಹಾಗೆಯೇ ದಾಸಸಾಹಿತಿಗಳು ಶರಣ ಸಾಹಿತ್ಯವನ್ನು ಗೌರವದಿಂದ ಕಾಣುವುದಿಲ್ಲ. ತಮ್ಮ ತಮ್ಮ ಮತ-ಧರ್ಮದ ಹಿನ್ನೆಲೆಯಲ್ಲಿ ತಮ್ಮದೇ ಶ್ರೇಷ್ಠವೆಂಬ ಭ್ರಮೆಯಲ್ಲಿ ತೇಲಾಡುತ್ತಾರೆ. ಆದರೆ ಪ್ರೊ. ಎಸ್. ಬಿ. ಉತ್ನಾಳರು ಮಾತ್ರ ಎರಡನ್ನು ಗೌರವಿಸುತ್ತಾರೆ. ಎರಡು ಸಾಹಿತ್ಯದ ಮಹತ್ವದ ಅಂಶಗಳನ್ನು ಕ್ರೋಢಿಕರಿಸುತ್ತಾರೆ. ಪರಸ್ಪರ ತೌಲನಿಕವಾಗಿ ಅಧ್ಯಯನಿಸುತ್ತಾರೆ. ಇಂದು ನಮಗೆ ಬೇಕಾಗಿರುವುದು ಸಮನ್ವಯದ ನೆಲೆ, ಪರಸ್ಪರ ಗೌರವಿಸಿ, ಸನ್ಮಾರ್ಗದಲ್ಲಿ ನಡೆಯುವ ಸಮಾಜವನ್ನು ಮುನ್ನಡೆಸುವ ಸೂತ್ರಗಳು ಅವಶ್ಯಕವಾಗಿವೆ. ಪ್ರೊ. ಎಸ್. ಬಿ. ಉತ್ನಾಳರ ಎರಡು ಸಾಹಿತ್ಯದ ಸೇತುವೆಯಾಗಿ ಕಾರ್ಯನಿರ್ವಹಿಸಿ, ಸಮಾಜವನ್ನು ಬೆಸೆಯುವ ಕಾರ್ಯ ಮಾಡಿರುವುದು ಅಭಿನಂದನೀಯವಾಗಿದೆ. ಪ್ರಸ್ತುತ ಬರಹದಲ್ಲಿ ಈ ಅಂಶಕ್ಕೆ ಒತ್ತು ಕೊಟ್ಟು ಈ ನಿಬಂಧ ರೂಪಿಸಲಾಗಿದೆ. ಶ್ರೀಯುತರ ಕಾರ್ಯ ಸ್ತುತ್ಯವೂ; ಮುಂಬರುವವರಿಗೆ ಮಾರ್ಗದರ್ಶಿಯೂ ಆಗಿ ಪರಿಣಮಿಸಿದೆ.

~ ~ ~ ~ ~

ಅನುಬಂಧ ೧

ಅನುಬಂಧ : ೧

೧ : ಉತ್ನಾಳರವರು ರಚಿಸಿದ ಕೃತಿಗಳು

* ಶರಣ ಸೌರಭ	–	೧೯೮೨
* ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ	–	೧೯೯೦
* ಅಥಣಿ ಶ್ರೀ ಮುರುಘೇಂದ್ರ ಶಿವಯೋಗಿಗಳವರ ಚರಿತ್ರೆ	–	೧೯೯೦
* ದಾಸ ಭಕ್ತಿ	–	೧೯೯೨
* ಶರಣ ದಾಸರ ಭಕ್ತಿ	–	೧೯೯೨
* ಗುಡ್ಡಾಪೂರ ದಾನಮ್ಮ	–	೧೯೯೪
* ಲಚ್ಯಾಣ ಶ್ರೀ ಸಿದ್ಧಲಿಂಗ ಮಹಾರಾಜರು	–	೧೯೯೭
* ದಳವಾಯಿ	–	೨೦೦೨
* ಕುಡು ಒಕ್ಕಲಿಗರು	–	೨೦೦೨
* ಕುಡು ಒಕ್ಕಲಿಗರ ಒಂದು ಕೈಪಿಡಿ	–	೨೦೦೯
* ಜೈನ ಜನಪದ ಹಾಡುಗಳು	–	೧೯೯೦

೨ : ಅನುಪಮಾ ಪ್ರಕಾಶನದ ಕೃತಿಗಳು

* ಶಿವಯೋಗಿ ಶಿವಲೀಲೆ	– ಶ್ರೀ ಎಮ್. ಎಸ್. ಆಣೆಪ್ಪನವರ	೧೯೮೯
* ಷಹಿದೆ ಕರ್ಬಲಾ	– ದಿ ಶ್ರೀ ಜಿ. ಎಸ್. ಹುರಳಿ	೧೯೯೦
* ರುದ್ರಪುತ್ರ ವೀರಭದ್ರ	– ಶ್ರೀ ಎಮ್. ಎಸ್. ಆಣೆಪ್ಪನವರ	೧೯೯೦
* ಹಾಲ್ದೆನೆ	– ಡಾ. ಸಿದ್ದಯ್ಯ ಪುರಾಣಿಕ	೧೯೯೦
* ಸತ್ತಿ ವೆಂಕಟಪ್ಪನವರ ವಂಶ ರಹಸ್ಯ	– ಶ್ರೀ ಎ. ಎಸ್. ಕುಲಕರ್ಣಿ	೧೯೯೦
* ಶಾಂತ ಸಾಗರ	– ಶ್ರೀಮತಿ ಲೀಲಾ ಕಲಕೋಟಿ	೧೯೯೦
* ನನ್ನ ಧ್ವನಿ	– ಶ್ರೀಮತಿ ಲೀಲಾ ಕಲಕೋಟಿ	೧೯೯೦
* ಮರುಳಶಂಕರ ದೇವರು	– ಶ್ರೀ ಎಮ್. ಎಸ್. ಆಣೆಪ್ಪನವರ	೧೯೯೦

* ಕರ್ನಾಟಕ ಕೇಸರಿ	– ಶ್ರೀ ಲಕ್ಷ್ಮಣ ಎಸ್. ಬಳ್ಳೊಳ್ಳಿ	೧೯೯೧
* ಮೈಲಾರ ದೇವರ ದಿವ್ಯ ಕ್ಷೇತ್ರಗಳು	– ಡಾ. ಎಮ್. ಬಿ. ನೇಗಿನಹಾಳ	೧೯೯೧
* ವಚನೋಧ್ಯಾನ	– ಡಾ. ಸಿದ್ದಯ್ಯ ಪುರಾಣಿಕ	೧೯೯೧
* ಬಸವಸ್ತೋತ್ರ	– ಶ್ರೀ ಶರಣ ಸಿದ್ದರಾಮಣ್ಣನವರು	೧೯೯೧
* ಧನ್ವಂತರಿ ಹಾಡು	– ಡಾ. ವಸಂತ ಕುಲಕರ್ಣಿ	೧೯೯೨
* ಅರವಳ್ಳಿ ಮಲ್ಲಿಗೆ	– ಶ್ರೀ ಲಕ್ಷ್ಮಣ ಎಸ್. ಬಳ್ಳೊಳ್ಳಿ	೧೯೯೨
* ಶ್ರೀ ಬಿಸಿಲಸಿದ್ಧೇಶ್ವರ ಲೀಲೆ	– ಶ್ರೀ ಲಕ್ಷ್ಮಣ ಎಸ್. ಬಳ್ಳೊಳ್ಳಿ	೧೯೯೨
* ಜನತೆಯ ಶಿವಶಕ್ತಿ	– ಶ್ರೀ ಲಕ್ಷ್ಮಣ ಎಸ್. ಬಳ್ಳೊಳ್ಳಿ	೧೯೯೨
* ಅಹಿಂಸೆಯ ವಿಜಯ	– ಶ್ರೀ ವೀ. ಅ. ಸರಗಣಚಾರಿ	೧೯೯೨
* ಗ್ರಾಮ ಸ್ವರಾಜ್ಯ	– ಶ್ರೀ ಶಿವದೇವ ಒಡೆಯರ	೧೯೯೪
* ಡಾ. ಎನ್. ಎಸ್. ಬಿರಾದಾರ	– ಡಾ. ದೇವೇಂದ್ರಕುಮಾರ ಹಕಾರಿ	೧೯೯೭
* ಶಿವಶರಣ ಮಹಾಪ್ರಸಾದಿ ಡೋಹರ ಕಕ್ಕಯ್ಯ	– ಶ್ರೀ ಗುಂಬೀಶಂ	೨೦೦೧
* ಕಾರ್ಗಿಲ್ ಕದನ ವೀರಗಾಥೆ	– ಶ್ರೀ ವಾಯ್. ಸಿ. ಬನ್ನೆಪ್ಪಗೋಳ	೨೦೦೧
* ಬಾಳ ಸಂಗಾತಿ	– ಕು. ರಶ್ಮಿ ದು. ಮಾಚಕನೂರ	೨೦೦೨
* ಗಾಲಿಬ್ ಗಜಲ್	– ಶ್ರೀ ವಿಜಯ ಎಸ್. ಕರೋಲಿ	೨೦೦೬
* ಸ್ಮೃತಿ ಗಂಧ	– ಶ್ರೀ ವಿಜಯ ಎಸ್. ಕರೋಲಿ	೨೦೦೬
* ಭಕ್ತಾಮರ ಸ್ತೋತ್ರ	– ಶ್ರೀ ವಿಜಯ ಎಸ್. ಕರೋಲಿ	೨೦೦೬
* ಮೂರು ರೇಡಿಯೋ ರೂಪಕಗಳು	– ಶ್ರೀ ಆಯ್. ಬಿ. ಹಿರೇಮಠ	೨೦೦೬
* ಖರೇ ಖರೇ ಸಂಗ್ಯಾಬಾಳ್ಯಾ	– ಡಾ. ಅ. ರಾ. ಯಾರ್ದಿ	

ಅನುಬಂಧ ೨

ಅನುಬಂಧ ೨

ಅ) ಪರಾಮರ್ಶನ ಗ್ರಂಥಗಳು :

೧) ಚಿದಾನಂದ ಮೂರ್ತಿ – ವಚನ ಸಾಹಿತ್ಯ (ಸಂಪುಟ – ೫)

೨) ಅಮೃತದ ಬೆಳಸು – ಡಾ. ವಿ. ಎಸ್. ಮಾಳಿ
ಕಣ್ವ ಪ್ರಕಾಶನ ಬೆಂಗಳೂರು ೨೦೧೦

೩) ವಚನ ಸಾಹಿತ್ಯದ ಕೆಲ ಅಧ್ಯಯನಗಳು – ಡಾ. ಅಶೋಕ ನರೋಡೆ

೪) ವಚನ ಸಾಹಿತ್ಯ ಮತ್ತು ಹೊಸ ಸಮಾಜದ ಪರಿಕಲ್ಪನೆ – ಡಾ. ಅಶೋಕ ನರೋಡೆ

೫) ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ – ಡಾ॥ ಸಿ. ಚಿ. ಲಿಂಗಣ್ಣ
ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ ೨೦೦೮

೬) ಕನ್ನಡ ಸಾಹಿತ್ಯ ಚರಿತ್ರೆ – ತ. ಸು. ಶಾಮರಾಯ
ಉದಯರವಿ ಆಫ್‌ಸೆಟ್ ಪ್ರಿಂಟರ್ಸ್, ಮೈಸೂರ ೨೦೦೬

೭) ಸಂಶೋಧನಾ ತರಂಗ – ೨ ಡಾ. ಎಂ. ಚಿದಾನಂದ ಮೂರ್ತಿ
ಬೆಂಗಳೂರು ವಿ.ವಿ. ೧೯೮೫

೮) ಶರಣರ ಆಂದೋಲನ ಹಾಗೂ ಹೊಸ ಸಮಾಜದ ಪರಿಕಲ್ಪನೆ
– ಡಾ. ಎಂ. ಬಿ. ಹೂಗಾರ
ವಿಮೋಚನಾ ಸಂಘದ ಪ್ರಸಾರಾಂಗ, ಅಥಣಿ ೧೯೯೫

೯) ಸಾಮಾನ್ಯ ಜನರಿಗೆ ವಚನ ಸಾಹಿತ್ಯ ಸಂಪುಟ

೧೦) ಗರತಿಯ ಹಾಡು – ಹಲಸಂಗಿ ಗೆಳೆಯರು (ಸಮಾಜ ಪುಸ್ತಕಾಲಯ,
ಶಿವಾಜಿ ಬೀದಿ ಧಾರವಾಡ – ೧ ೨೦೦೪

೧೧) ಸಾಮಾನ್ಯ ಜನರಿಗೆ ಕೀರ್ತನ ಸಾಹಿತ್ಯ (೮)
– ಡಾ. ಎಚ್. ಎಸ್. ವೆಂಕಟೇಶಮೂರ್ತಿ

೧೨) ಕನಕದಾಸರು – ಜ್ಯೋತಿ ಹೊಸೂರು

೧೩) ಅನುಭವ ಸಾಹಿತ್ಯ ಚಿಂತನ – ಸಿದ್ದಣ್ಣ ಉತ್ನಾಳ – ಡಿ.ಲಿಟ್ ಪದವಿ
– ಅಪ್ರಕಟಿತ

೧೪) ಮಧ್ಯಕಾಲಿನ ಕನ್ನಡ ಸಾಹಿತ್ಯ – ಕ.ರಾ.ಮು.ವಿ.ವಿ. ಮೈಸೂರ ೨೦೧೦

೧೫) ಭಕ್ತಿ ಸಾಹಿತ್ಯ – ಕನ್ನಡ ವಿ.ವಿ. ಹಂಪಿ ೨೦೦೬

೧೬) ಕನ್ನಡ ಸಾಹಿತ್ಯ ಕೋಶ – ಬೆಂ.ವಿ.ವಿ. ಬೆಂಗಳೂರ

೧೭) ವಚನಾರ್ಥ ಚಿಂತನ – ಸಿದ್ಧರಾಮ ಸ್ವಾಮಿಗಳು
(ವಚನ ಅಧ್ಯಯನ ಕೇಂದ್ರ ಬೆಳಗಾವಿ)

ಬ) ಪತ್ರಿಕೆಗಳು

೧) ಬಸವಪಥ – ಮಾಸ ಪತ್ರಿಕೆ

೨) ಕರವೆ – (ಮಾಸ ಪತ್ರಿಕೆ) ವಿಶಾಲಾಕ್ಷಿ ಸಂಚಿಕೆ ೩, ೪ & ೧೨

೩) ಮಹಾಮನೆ – ಗೋ. ರೂ. ಚನ್ನಬಸಪ್ಪ

೪) ಸ್ವಪ್ನಲೋಕ – ಡಾ. ಎಸ್. ವಿದ್ಯಾಶಂಕರ